
ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ




ಲಾಲ್ ಸಲಾಂ ಓ.ವಿ.ಕೃಷ್ಣಮೂರ್ತಿ

ಸಂಪುಟ 11 | ಸಂಚಿಕೆ 12 | ಪುಟ 16 | ಮಾರ್ಚ್ 13-19, 2017 | ರೂ. 10/-

web: www.janashakthi.co.in | e-mail : js_weekly@yahoo.com



ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಶುಭಾಶಯಗಳು



ಪುರುಷರು ಸುಮ್ಮನಿರುವಾಗ
ನಮ್ಮ ಆದರ್ಶಗಳ ಬಗ್ಗೆ ದನಿ ಎತ್ತುವುದು
ಮಹಿಳೆಯರ ಕರ್ತವ್ಯ

- ಕ್ಲಾರಾ ಜೆಟ್ಕಿನ್

ಪೆಟ್ರೋಗ್ರಾಡ್ 1917ರಿಂದ ವಾಶಿಂಗ್ಟನ್ 2017ರವರೆಗೆ

ನೂರು ವರ್ಷಗಳ ಮಹಿಳಾ ಮಾರ್ಚ್





ಸಾವಿನಗುಂಡಿಗಳಲ್ಲಿ ಬಲಿ ನಿಲ್ಲಿಸಿ

ಕೇರಳ-ತ್ರಿಪುರಾ ಬಜೆಟ್ ಪರ್ಯಾಯ ಮಾದರಿ

ಕೃತಕ ಜಿಡಿಪಿ ಏರಿಕೆ: ಪ್ರಭಾತ್

ಬಿಸಿಯೂಟಕ್ಕೆ 'ಆಧಾರ್' ಕಲ್ಲು!



ಒಕ್ಕೂಟ ತತ್ವದ ಮೇಲೆ ದಾಳಿಗಳನ್ನು ಬಿಜೆಪಿಯೇತರ ಮುಖ್ಯಮಂತ್ರಿಗಳು ಒಟ್ಟಾಗಿ ಪ್ರತಿರೋಧಿಸಬೇಕು – ಸೀತಾರಾಮ್ ಯೆಚುರಿ

ದೇಶದ ಒಕ್ಕೂಟ ತತ್ವ 'ಹಿಂದೂರಾಷ್ಟ್ರ'ದ ಪ್ರತಿಪಾದಕರಿಂದ ಮತ್ತು ಆರ್ಥಿಕ ಅಭಿವೃದ್ಧಿಯಿಂದ ಬಹಳಷ್ಟು ಜನರನ್ನು ಹೊರಗಿಡುವ ನವ-ಉದಾರವಾದಿ ಆರ್ಥಿಕ ಧೋರಣೆಗಳಿಂದ ದಾಳಿಗೊಳಗಾಗುತ್ತಿದೆ. ಇದನ್ನು ಬಿಜೆಪಿಯೇತರ ರಾಜ್ಯಸರಕಾರಗಳ ಮುಖ್ಯಮಂತ್ರಿಗಳು ಒಂದಾಗಿ ಪ್ರತಿರೋಧಿಸಬೇಕು, ಕೇರಳದ ಎಲ್‌ಡಿಎಫ್ ಸರಕಾರ ಈ ದಿಸೆಯಲ್ಲಿ ಮುತುವರ್ಜಿ ವಹಿಸಬೇಕು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿಯವರು ಹೇಳಿದ್ದಾರೆ. ಅವರು ಕೇರಳ ರಾಜ್ಯ ಮತ್ತು ಅದರ ವಿಧಾನಸಭೆಯ ವಜ್ರಮಹೋತ್ಸವ ಸಂದರ್ಭದಲ್ಲಿ ಏರ್ಪಡಿಸಿದ್ದ ಒಕ್ಕೂಟತತ್ವದ ವ್ಯಾಪ್ತಿ ಮತ್ತು ಸವಾಲುಗಳನ್ನು ಕುರಿತ ವಿಚಾರಸಂಕಿರಣವನ್ನು ಉದ್ಘಾಟಿಸುತ್ತಿದ್ದರು.



ಒಕ್ಕೂಟತತ್ವವನ್ನು ಉಳಿಸಿಕೊಳ್ಳುವುದು ನಮ್ಮ ದೇಶದ ರಾಜಕೀಯ ವ್ಯವಸ್ಥೆಗೆ ಅಗತ್ಯವಾಗಿದೆ. ಈ ತತ್ವದಿಂದಾಗಿಯೇ ಕೇರಳಕ್ಕೆ ಸಾಮಾಜಿಕ ಸೂಚ್ಯಂಕಗಳಲ್ಲಿ ಪಾಶ್ಚಿಮಾತ್ಯ ಜಗತ್ತಿನೊಂದಿಗೆ ಹೋಲಿಸಬಹುದಾದ ಒಂದು ಸಮಾಜವನ್ನು ನಿರ್ಮಿಸಲು ಸಾಧ್ಯವಾಗಿರುವುದು(ಪುಟ 14 ನೋಡಿ). ಆದ್ದರಿಂದ ಇದರಲ್ಲಿ ಕೇರಳ ಮತ್ತೊಮ್ಮೆ ದಾರಿ ತೋರಿಸಬೇಕಾಗಿದೆ. 1980 ಮತ್ತು 1990ರ ದಶಕದಲ್ಲಿ ನಡೆಸಿದಂತೆ ಪ್ರತಿಪಕ್ಷಗಳ ರಾಜ್ಯ ಮುಖ್ಯಮಂತ್ರಿಗಳ ಸಭೆಗಳನ್ನು ನಡೆಸುವುದಕ್ಕೆ ನೇತೃತ್ವ ವಹಿಸಿದಂತೆ ಬಿಜೆಇಯೇತರ ಮುಖ್ಯಮಂತ್ರಿಗಳ ಸಭೆ ಏರ್ಪಡಿಸಿ ಒಕ್ಕೂಟತತ್ವಕ್ಕೆ ಬಂದಿರುವ ಸವಾಲನ್ನು ಎದುರಿಸಲು ಸೂಕ್ತ ಕಾರ್ಯವ್ಯೂಹವನ್ನು ರೂಪಿಸ ಬೇಕಾಗಿದೆ ಎಂದು ಯೆಚುರಿಯವರು ಹೇಳಿದರು.

ಈ ತತ್ವ ಭಾರತದ ಸಂವಿಧಾನದಲ್ಲಿ ಏಕೆ ಬಂತು, ಆ ಬಗ್ಗೆ ಸಂವಿಧಾನ ಸಭೆಯಲ್ಲಿ ಬಹಳಷ್ಟು ಚರ್ಚೆ ಏಕೆ ನಡೆಯಿತು ಎಂಬುದನ್ನು ಇಂದಿನ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕಾಗಿದೆ. ಅದು ಭಾರತದ ವಾಸ್ತವ. ಅದನ್ನು ಆಗ ಅರ್ಥಮಾಡಿಕೊಳ್ಳಲಾಯಿತು, ಈಗ ಆ ವಾಸ್ತವತೆಯನ್ನು ಮತ್ತೆ ಅರ್ಥಮಾಡಿ ಕೊಳ್ಳಬೇಕಾಗಿದೆ.

ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರದ ಅಡಿಯಲ್ಲಿ ನಾವೀಗ ಬಹುಪಾಲು ಜನಗಳನ್ನು ಹೊರಗಿಡುವ ಆರ್ಥಿಕ ಧೋರಣೆಗಳೊಂದಿಗೆ,ಇದನ್ನು ದುರ್ಬಲಗೊಳಿಸುವ, ಭಾರತದ ವೈವಿಧ್ಯತೆಯ ಪರಿಕಲ್ಪನೆಯನ್ನು ನಿರಾಕರಿಸುತ್ತಿರುವ ಕೋಮುವಾದಿ ಪ್ರಹಾರಗಳನ್ನು ನೋಡುತ್ತಿದ್ದೇವೆ.ಇದರಿಂದಾಗಿ ಜನಗಳನ್ನು, ಅವರ ಪ್ರಜ್ಞೆಯನ್ನು ಒಗ್ಗೂಡಿಸುವ ಬದಲು, ಅದಕ್ಕೆ ವಿರುದ್ಧವಾದುದನ್ನೇ ಮಾಡಲಾಗುತ್ತಿದೆ. ಇದರ ನೇರ ಪರಿಣಾಮವೇ ನಮ್ಮ ದೇಶ ಹೆಚ್ಚೆಚ್ಚು ಸಾಮ್ರಾಜ್ಯಶಾಹಿಯ ಪರವಾಗಿರುವುದು, ಅಮೆರಿಕಾದ ಕಿರಿಯ ಸಾಮರಿಕ ಪಾಲುದಾರನಾಗಿರುವುದು, ಮತ್ತು ನೋಟುರದ್ದತಿಯ ಕ್ರಮ ಇದರ ನೇರ ಪರಿಣಾಮ ಎಂದು ಯೆಚುರಿ ಅಭಿಪ್ರಾಯ ಪಟ್ಟರು. ಸರಕಾರ ಜನಗಳನ್ನು ರಕ್ಷಿಸಲು ಮುಂದಾಗುತ್ತಿಲ್ಲ, ಬ್ಯಾಂಕುಗಳನ್ನು ಮುಂದಾಗುತ್ತಿದೆ ಎಂದು ಅವರು ಟೀಕಿಸಿದರು. ಪ್ರಧಾನ ಮಂತ್ರಿಗಳು ಕೇರಳದ ಸರ್ವಪಕ್ಷ ನಿಯೋಗದ ಭೇಟಿಗೆ ಸಮಯ ಕೊಡದಿರುವುದನ್ನೂ ಈ ಸಂದರ್ಭದಲ್ಲಿ ಅವರು ಟೀಕಿಸಿದರು(ಪುಟ 14 ನೋಡಿ).

ಅಡುಗೆ ಅನಿಲ ಬೆಲೆ–6ತಿಂಗಳಲ್ಲಿ 58ಶೇ. ಏರಿಕೆ!–ಎಐಡಿಡಬ್ಲ್ಯುಎ ಖಂಡನೆ

ಮಾರ್ಚ್ 1 ರಂದು ಸಬ್ಸಿಡಿಯಿಲ್ಲದ ಅಡುಗೆ ಅನಿಲ ಸಿಲಿಂಡರ್‌ನ ದರದಲ್ಲಿ 86ರೂ. ಏರಿಕೆ ಮಾಡಲಾಗಿದೆ. ಇದುವರೆಗೆ ಎಂದೂ ಇಷ್ಟು ದೊಡ್ಡ ಪ್ರಮಾಣದ ಏರಿಕೆ ಆಗಿಲ್ಲ ಎನ್ನಲಾಗಿದೆ. ಈ ಏರಿಕೆ ಸರಿಯಾಗಿ ಒಂದು ತಿಂಗಳ ಹಿಂದೆ 66.50ರೂ. ಏರಿಕೆಯ ಮೇಲೆ ಬಂದಿರುವ ಏರಿಕೆ. ಆರು ತಿಂಗಳ ಹಿಂದೆ 466.50ರೂ. ಇದ್ದ ಬೆಲೆ ಈಗ 737.50ರೂ.ಆಗಿದೆ, 271ರೂ. ಅಂದರೆ ಬರೋಬ್ಬರಿ 58ಶೇ. ಏರಿಕೆ. ಪ್ರಧಾನ ಮಂತ್ರಿಗಳ ಮನವಿಯ ಮೇರೆಗೆ ಸಬ್ಸಿಡಿಗಳನ್ನು ಬಿಟ್ಟುಕೊಟ್ಟವರು, ಮತ್ತು 12 ಸಿಲಿಂಡರ್‌ಗಳ ವರ್ಷದ ಮಿತಿಯನ್ನು ಮೀರಿದ ಕುಟುಂಬಗಳು ಈ ಭಾರೀ ಹೊರೆಯನ್ನು ಎದುರಿಸಬೇಕಾಗಿದೆ. ಇದು 'ಅಚ್ಛೇದಿನ್' ವಚನ ನೀಡಿದ ಸರಕಾರ ಮನೆ ನಿರ್ವಹಣೆ ಮಾಡುವ ಮಹಿಳೆಯರಿಗೆ ನೀಡಿರುವ ಈ ವರ್ಷದ ಮಹಿಳಾದಿನದ ಈ 'ಉಡುಗೊರೆ'. ಅಖಿಲ ಭಾರತ ಜನವಾದಿ ಮಹಿಳಾ ಸಂಘ(ಎಐಡಿಡಬ್ಲ್ಯುಎ) ಇದನ್ನು ಬಲವಾಗಿ ಖಂಡಿಸಿದೆ. ಇದು ಈ ಸರಕಾರ ಅನುಸರಿಸುತ್ತಿರುವ ನವ–ಉದಾರವಾದಿ ಆರ್ಥಿಕ ಧೋರಣೆಗಳ ದುಷ್ಫಲ ಎಂದು ಅದು ಹೇಳಿದೆ.

ತಕ್ಷಣವೇ ಈ ಅಭೂತಪೂರ್ವ ಏರಿಕೆಯನ್ನು ಹಿಂದಕ್ಕೆ ಪಡೆಯಬೇಕು, ಪರೋಕ್ಷ ತೆರಿಗೆಗಳನ್ನು ಇಳಿಸಿ ಕಾರ್ಮಿಕ ಮತ್ತು ಮಧ್ಯಮವರ್ಗದ ಕುಟುಂಬಗಳಿಗೆ ಪರಿಹಾರ ಒದಗಿಸಬೇಕು, ತೈಲ ಮಾರಾಟದ ಮೇಲೆ ಮತ್ತೆ ನಿಯಂತ್ರಣ ತಂದು ಅಂತರ್ರಾಷ್ಟ್ರೀಯ ಏರು–ಪೇರುಗಳ ಹೊಡೆತಗಳಿಂದ ಜನರಿಗೆ ರಕ್ಷಣೆ ಕೊಡಬೇಕು ಮತ್ತು ಇದರ ಬೆನ್ನಿಗೇ ಬ್ಯಾಂಕುಗಳಿಂದ ಬಂದಿರುವ ಮೂರು ಬಾರಿಗಿಂತ ಹೆಚ್ಚು ನಗದು ಪಡೆದರೆ 150ರೂ. ಶುಲ್ಕ ವಿಧಿಸುವ ಅನ್ಯಾಯಪೂರ್ಣ ನಿರ್ಧಾರವನ್ನು ಹಿಂತೆಗೆದುಕೊಳ್ಳಬೇಕು ಎಂದು ಎಐಡಿಡಬ್ಲ್ಯುಎ ಆಗ್ರಹಿಸಿದೆ.



ವಿದ್ಯಾರ್ಥಿ–ಪರ, ಜನಪರ ಹೊಸ ಶಿಕ್ಷಣ ನೀತಿ ಆಗ್ರಹಿಸಿ ವಿದ್ಯಾರ್ಥಿಗಳ 'ಪಾರ್ಲಿಮೆಂಟ್ ಚಲೋ'

ಮಾರ್ಚ್ 3ರಂದು ದೇಶದ ಮೂಲೆ–ಮೂಲೆಗಳಿಂದ ಬಂದ ಸಾವಿರಾರು ವಿದ್ಯಾರ್ಥಿಗಳು ದಿಲ್ಲಿಯಲ್ಲಿ ಬೃಹತ್ ಮೆರವಣಿಗೆ , ಮತಪ್ರದರ್ಶನ ನಡೆಸಿದರು. ಶಿಕ್ಷಣ, ಪ್ರಜಾಪ್ರಭುತ್ವ ಮತ್ತು ಸಾಮಾಜಿಕ ನ್ಯಾಯದ ಮೇಲೆ ಪ್ರಹಾರಗಳ ವಿರುದ್ಧ, ಮತ್ತು ಹೊಸಶಿಕ್ಷಣ ನೀತಿ ವಿದ್ಯಾರ್ಥಿ–ಪರವಾಗಿರಬೇಕು, ಜಪರವಾಗಿರಬೇಕು ಎಂದು ಆಗ್ರಹಿಸಿ ಎಸ್‌ಎಫ್‌ಐ ನೀಡಿದ ಕರೆಗೆ ಓಗೊಟ್ಟು ಅವರು ರಾಜಧಾನಿಗೆ ಬಂದು ಸಂಸತ್ತಿನತ್ತ ನಡೆದರು.

ಪ್ರಸಕ್ತ ಸರಕಾರ ಶಿಕ್ಷಣ ರಂಗದಲ್ಲಿ ಜನ–ವಿರೋಧಿಯಾದ ಸಾಮ್ರಾಜ್ಯಶಾಹಿಗಳ ನವ–ಉದಾರವಾದಿ ಧೋರಣೆಗಳನ್ನೇ ಅನುಸರಿಸುತ್ತಿದೆ, ಬಹಳ ಕಷ್ಟಪಟ್ಟು ನಿರ್ಮಿಸಿರುವ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಹಾಳುಗೆಡವುತ್ತಿದೆ, ಮೋದಿ ಸರಕಾರದ ಮೊದಲ ಬಜೆಟ್‌ನಿಂದಲೇ ಶಿಕ್ಷಣಕ್ಕೆ ಹಣನೀಡಿಕೆಯನ್ನು ಕಡಿತ ಮಾಡುವ ಪ್ರಕ್ರಿಯೆ ತೀವ್ರಗೊಂಡಿದೆ.


ಶಿಕ್ಷಣ ಎಂಬುದು ಆರ್ಥಿಕ ವ್ಯವಸ್ಥೆಯಲ್ಲಿನ ದುರ್ಬಲ ವಿಭಾಗಗಳಿಗೆ ಸಾಮಾಜಿಕ–ಆರ್ಥಿಕ ಚಲನೆಯನ್ನು ಒದಗಿಸುವ ಸಾಧನ ಎಂದು ಪರಿಗಣಿಸಲಾಗುತ್ತದೆ. ಆದರೆ ಈ ಸರಕಾರ ತದ್ವಿರುದ್ಧವಾಗಿ ವರ್ತಿಸುತ್ತಿದೆ. ದೇಶದ ವಿದ್ಯಾರ್ಥಿಗಳು ದೇಶದ ಶೈಕ್ಷಣಿಕ ವ್ಯವಸ್ಥೆಯ ಅಗತ್ಯಗಳನ್ನು ಈಡೇರಿಸಬಹುದಾದ ಒಂದು ವಿದ್ಯಾರ್ಥಿ–ಪರ ಶಿಕ್ಷಣ ಧೋರಣೆಗಾಗಿ ಹೋರಾಡುತ್ತಿದ್ದಾರೆ. ಇದನ್ನು ಅಧ್ಯಾಪಕರು, ಶಿಕ್ಷಣವೇತ್ತರು ಮತ್ತು ವಿದ್ಯಾರ್ಥಿಗಳ ಭಾಗವಹಿಸುವಿಕೆಯಿಂದ ಮಾತ್ರವೇ ರೂಪಿಸಲು ಸಾಧ್ಯವೇ ಹೊರತು, ನಾಗಪುರಲ್ಲಿರುವ ಆರೆಸ್ಸೆಸ್ ಮುಖ್ಯಕಚೇರಿಯ ನಿರ್ದೇಶನದಿಂದಲ್ಲ ಎಂಬುದು ಈ ವಿದ್ಯಾರ್ಥಿಗಳ ದೃಢ ಅಭಿಪ್ರಾಯ.

ಮೆರವಣಿಗೆಯ ಕೊನೆಯಲ್ಲಿ ನಡೆದ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಈಗ ರಾಜ್ಯಸಭಾ ಸದಸ್ಯರಾಗಿರುವ, ಹಿಂದೆ ಎಸ್‌ಎಫ್‌ಐನ ಅಖಿಲ ಭಾರತ ಅಧ್ಯಕ್ಷರಾಗಿದ್ದ ಸೀತಾರಾಮ್ ಯೆಚುರಿ, ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲ, ಎಸ್‌ಎಫ್‌ಐನ ಪ್ರಧಾನ ಕಾರ್ಯದರ್ಶಿ ವಿಕ್ರಮ್ ಸಿಂಗ್, ಅಧ್ಯಕ್ಷರಾದ ವಿ.ಪಿ.ಸಾನು, ಮತ್ತಿತರರು ಮಾತನಾಡಿದರು. ಈ ಹೋರಾಟದಲ್ಲಿ ಎಸ್‌ಎಫ್‌ಐ ದೇಶಾದ್ಯಂತ ಸಾಧ್ಯವಾದಷ್ಟು ವ್ಯಾಪಕ ಪ್ರಮಾಣದಲ್ಲಿ ವಿದ್ಯಾರ್ಥಿಗಳನ್ನು ಅಣಿನೆರೆಸಿ ಯಶಸ್ವಿಯಾಗುತ್ತದೆ ಎಂಬ ವಿಶ್ವಾಸವನ್ನು ಯೆಚುರಿ ವ್ಯಕ್ತಪಡಿಸಿದರು.

ಮಾತೆಂದರೆ ಇದು

"ಕೇವಲ ರಾಜಕೀಯ ಕ್ಷೇತ್ರವೊಂದೇ ಅಲ್ಲದೇ ಎಲ್ಲ ಕ್ಷೇತ್ರಗಳಲ್ಲಿಯೂ ಮಹಿಳೆಯರು ಸ್ವತಂತ್ರವಾಗಿ ಕಾರ್ಯನಿರ್ವಹಿಸುವಂತೆ ಮಾಡದಿದ್ದರೆ ಸಮಾಜವಾದವಲ್ಲ ಪ್ರಜಾಪ್ರಭುತ್ವವೂ ಸ್ಥಿರವಾಗಲಾರದು.
ಎಲ್ಲ ವಿಮೋಚನಾ ಸಮರಗಳ ಅನುಭವವೂ ಹೇಳುತ್ತದೆ ಕ್ರಾಂತಿಯಲ್ಲಿ ಮಹಿಳೆಯರು ವಹಿಸಿದ ಪಾತ್ರದ ಆಧಾರದಲ್ಲಿ ಅದರ ಯಶಸ್ಸು ಇರುತ್ತದೆ."

– ವಿ.ಐ.ಲೆನಿನ್
ನವೆಂಬರ್ 20 1918



ವಿಚಾರ–ವಿಮರ್ಶೆಯನ್ನು ಹತ್ತಿಕ್ಕುವ ಗೂಂಡಾಗಿರಿಯ ವಿರುದ್ಧ ನಾಗರಿಕರ ನಡಿಗೆ

ದಿಲ್ಲಿ ವಿಶ್ವವಿದ್ಯಾಲಯದ ರಾಮ್ಜಾಸ್ ಕಾಲೇಜಿನಲ್ಲಿ ಎಬಿವಿಪಿ ಗೂಂಡಾಗಿರಿಯ ವಿರುದ್ಧ ಫೆಬ್ರುವರಿ 28ರ ವಿದ್ಯಾರ್ಥಿಗಳ ಬೃಹತ್ ಪ್ರತಿಭಟನೆಯ ನಂತರ ದೇಶದ ರಾಜಧಾನಿಯಲ್ಲಿ ಮಾರ್ಚ್ 4ರಂದು ಸರ್ವ ನಾಗರಿಕರ ಮತ್ತೊಂದು ಮೆರವಣಿಗೆ, ಮತಪ್ರದರ್ಶನ ನಡೆಯಿತು.

ಮಂಡಿ ಹೌಸ್‌ನಿಂದ ಸಂಸದ್ ಮಾರ್ಗದ ವರೆಗೆ ನಡೆದ ಈ ಮೆರವಣಿಗೆ ಮತ್ತು ನಂತರ ನಡೆದ ಪ್ರತಿಭಟನಾ ಸಭೆಯಲ್ಲಿ ಮೂರು ಸಾವಿರಕ್ಕೂ ಹೆಚ್ಚು ನಾಗರಿಕರು ಭಾಗವಹಿಸಿದ್ದರು. ಎಬಿವಿಪಿ ದುಂಡಾವರ್ತನೆ ಮತ್ತು ಅವರೊಂದಿಗೆ ದಿಲ್ಲಿ ಪೋಲೀಸರ ಶಾಮೀಲಿನ ವಿರುದ್ಧ, ಶಿಕ್ಷಣ, ವಿಚಾರ ವಿಮರ್ಶೆ ಮತ್ತು ಚರ್ಚೆಯ ಹಕ್ಕನ್ನು ಎತ್ತಿ ಹಿಡಿಯುವ ಘೋಷಣೆಗಳು ಮೊಳಗಿದವು. "ಅಧ್ಯಯನ ನಡೆಸಲು ಬಿಡಿ, ಕಲಿಯಲು ಬಿಡಿ, ಕ್ಯಾಂಪಸ್‌ನಲ್ಲಿ ಯಾರ ಉಪನ್ಯಾಸ ಏರ್ಪಡಿಸಬೇಕು ಅಥವ ಏರ್ಪಡಿಸಬಾರದು ಎಂದು ವಿಧಿಸಬೇಡಿ, ನಮಗೆ ಅರ್ಥಮಾಡಿಕೊಳ್ಳುವ, ಕಲಿಯುವ ಸ್ವಾತಂತ್ರ್ಯ ಬೇಕು" ಎಂಬ ವಿದ್ಯಾರ್ಥಿಗಳ ಒತ್ತಾಯಗಳಿಗೆ ನಾಗರಿಕರು ಶಾಖೆಗಳಲ್ಲ ಎಂದು ನೆನಪಿಸಿದರು.

ನಾಗರಿಕರ ಈ ಪ್ರತಿಭಟನಾ ನಡಿಗೆ ಇತರ ಹಲವು ಪ್ರಶ್ನೆಗಳನ್ನು ಎತ್ತುವ ವೇದಿಕೆಯೂ ಆಯಿತು. ದಲಿತರ ಮೇಲೆ ಪ್ರಹಾರ, ಹೆಚ್ಚುತ್ತಿರುವ ಕೇಸರೀಕರಣ, ಪ್ರಸಕ್ತ ರಾಜಕೀಯ ವಾತಾವರಣ, ನಜೀಬ್ ಕಾಣೆ–ಯಾಗಿ ತಿಂಗಳುಗಳಾದರೂ ಪತ್ತೆ ಮಾಡಲಾಗದ ವಿಫಲತೆ, ಗುರ್‌ಮೆಹರ್‌ಕೌರ್‌ಗೆ ಬೆದರಿಕೆ ಮುಂತಾದ ಪ್ರಶ್ನೆಗಳನ್ನು ಪ್ರತಿಭಟನೆಯನ್ನು ಉದ್ದೇಶಿಸಿ ಮಾತಾಡಿದ ಭಾಷಣಕಾರರು ಎತ್ತಿದರು.

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ, ಜೆಡಿ(ಯು) ಮುಖಂಡ ಕೆ.ಸಿ.ತ್ಯಾಗಿ, ಸಿಪಿಐನ ಡಿ.ರಾಜ, ಸ್ವರಾಜ್‌ಇಂಡಿ–ಯಾದ ಯೋಗೇಂದ್ರ ಯಾದವ್ ವಿದ್ಯಾರ್ಥಿಗಳ ಹೋರಾಟಕ್ಕೆ ಸೌಹಾರ್ದ ವ್ಯಕ್ತಪಡಿಸಿದರು. ಸಂಸತ್ತಿನಲ್ಲಿ ಮಾತನಾಡಲು ಅವಕಾಶ ತಪ್ಪಿಸದಿದ್ದರೆ, ದಿಲ್ಲಿ ವಿಶ್ವವಿದ್ಯಾಲಯದ ಈ ವಿಷಯವನ್ನು ತಮ್ಮ ಪಕ್ಷ ಎತ್ತುವುದಾಗಿ ಯೆಚುರಿ ಭರವಸೆ ನೀಡಿದರು.



ಸಾವುಗುಂಡಿ ಬಲಿಗಳನ್ನು ನಿಲ್ಲಿಸಿ !

ಸಂಪಾದಕೀಯ



ಮಾರ್ಚ್ 6 ರಂದು ರಾಜಧಾನಿ ಬೆಂಗಳೂರಿನ ಕಗ್ಗದಾಸಪುರದಲ್ಲಿ ಇಳಿಗುಂಡಿ (ಮ್ಯಾನ್ಹೋಲ್) ಸ್ವಚ್ಛಗೊಳಿಸುವಾಗ ಮೂವರು ಕಾರ್ಮಿಕರ ಬಲಿ ಆಗಿದೆ. ಇಳಿಗುಂಡಿಗಳು ಸಾವುಗುಂಡಿಗಳಾಗಿ ಬಿಟ್ಟಿವೆ. ಇದು ಸಾವೂ ಅಲ್ಲ. ಅಫಘಾತ ಅಥವಾ ಆಕಸ್ಮಿಕವೂ ಅಲ್ಲ. ಸರಕಾರ, ಸ್ಥಳೀಯ ಸಂಸ್ಥೆಗಳು (ಈ ಪ್ರಕರಣದಲ್ಲಿ ಬಿ.ಬಿ.ಎಂ.ಪಿ.), ಗುತ್ತಿಗೆದಾರಿ ಕಂಪನಿಗಳು ಸೇರಿ ನಾಲ್ಕು ಕಾಸು ಉಳಿಸಲು ಕೊಡುತ್ತಿರುವ ಬಲಿಯಲ್ಲದೇ ಬೇರೇನಲ್ಲ. ತವಿತ್ ನಾಯ್ಡು, ಯರಯ್ಯ ಮತ್ತು ಆಂಜನೇಯ ರೆಡ್ಡಿ ಅವರು ಬಲಿಯಾದ ಮೂವರು ಕಾರ್ಮಿಕರು. ನಾಲ್ಕು ವರ್ಷಗಳ ಹಿಂದೆ ಆಂಧ್ರಪ್ರದೇಶದ ಶ್ರೀಕಾಕುಲಂ ಜಿಲ್ಲೆಯ ತವಿತ್ ನಾಯ್ಡು, ಯರಯ್ಯ ಕುಟುಂಬ ಸಮೇತ ಬೆಂಗಳೂರಿಗೆ ಬಂದು ರಾಮ್ಕಿ ಇನ್ಫ್ರಾಸ್ಟ್ರಕ್ಚರ್ ಕಂಪೆನಿಯಲ್ಲಿ ಕೆಲಸ ಮಾಡುತ್ತಿದ್ದರು. ಆದರೆ, ಸಂಬಳ ಬಾಕಿ ಉಳಿಸಿಕೊಂಡ ಕಾರಣಕ್ಕೆ ಬೇಸತ್ತು ಸಂಕ್ರಾಂತಿ ಹಬ್ಬದ ಸಮಯದಲ್ಲಿ ಅವರಿಬ್ಬರು ಕುಟುಂಬ ಸಮೇತ ಹುಟ್ಟೂರಿಗೆ ವಾಪಸ್ ಆಗಿದ್ದರು. ಬಳಿಕ ಕಂಪೆನಿಯ ಸಿಬ್ಬಂದಿ ಸಂಬಳ ನೀಡುವುದಾಗಿ ಹೇಳಿದ್ದನ್ನು ನಂಬಿ ಕೆಲ ದಿನಗಳ ಹಿಂದೆ ಇಬ್ಬರೇ ಮತ್ತೆ ಇಲ್ಲಿಗೆ ಬಂದಿದ್ದರು. ಮತ್ತೆ ಸಂಬಳ ನೀಡದೇ ಕಂಪೆನಿಯವರು ಸತಾಯಿಸಿದರು.

ಘಟನೆ ನಡೆದ ರಾತ್ರಿ ತವಿತ್ ನಾಯ್ಡು ಹಾಗೂ ಯರಯ್ಯ ಅವರನ್ನು ಮ್ಯಾನ್ಹೋಲ್ ಸ್ವಚ್ಚಗೊಳಿಸಲು ಕಂಪೆನಿಯ ಸಿಬ್ಬಂದಿ ಸಂಪರ್ಕಿಸಿದ್ದರು. ತಡರಾತ್ರಿ ಆಗಿದ್ದರಿಂದ ತಾವು ಬರುವುದಿಲ್ಲ ಎಂದು ಹೇಳಿ ವಾಪಸ್ ಕಳಿಸಿದ್ದರು. ಆದರೆ ಆಂಜನೇಯರಡ್ಡಿ ಅವರ ಮೂಲಕ ಸಿಬ್ಬಂದಿ ಒತ್ತಡ ಹೇರಿ ಮ್ಯಾನ್ಹೋಲ್ ಸ್ವಚ್ಛತೆಗೆ ಅವರಿಬ್ಬರನ್ನೂ ಇಳಿಸಿದ್ದರು. ಆಂಜನೇಯ ರೆಡ್ಡಿ ಕಳೆದ ಎಂಟು ತಿಂಗಳಿನಿಂದ ಕೆಲಸ ಮಾಡಿದ್ದ ಹಣವನ್ನು ರಾಮ್ಕಿ ಕಂಪೆನಿ ಪಾವತಿಸಿರಲಿಲ್ಲ. ಇದರಿಂದ ಸಂಕಷ್ಟಕ್ಕೆ ಸಿಲುಕಿದ್ದ ವಿಧಿಯಿಲ್ಲದೆ ಇದೇ ಕೆಲಸದಲ್ಲಿ ಮುಂದುವರಿದಿದ್ದರು ಎಂದು ಸತ್ತ ಕಾರ್ಮಿಕರ ಸಂಬಂಧಿಗಳ ಹೇಳಿಕೆಗಳಿಂದ ತಿಳಿದು ಬಂದಿದೆ. ಎರಡು ವರ್ಷಗಳ?ಹಿಂದೆ ಜೆ.ಸಿ ನಗರದಲ್ಲಿ ಮ್ಯಾನ್ಹೋಲ್ಗೆ ಬಿದ್ದು ಇಬ್ಬರು ಕಾರ್ಮಿಕರು ಮೃತಪಟ್ಟಿದ್ದರು. ಕಳೆದ ವರ್ಷ ದೊಡ್ಡಬಳ್ಳಾಪುರದಲ್ಲಿ 4 ಕಾರ್ಮಿಕರು ಸತ್ತಿದ್ದರು. ಇವೆಲ್ಲದರ ನಿರ್ವಹಣೆ ಹೊಣೆ ರಾಮ್ಕಿ ಕಂಪೆನಿಯೇ ಪಡೆದಿತ್ತು. ಆದರೂ ಈ ಕಂಪನಿಯ ವಿರುದ್ಧ ಯಾವುದೇ ಕ್ರಮ ತೆಗೆದುಕೊಳ್ಳಲಾಗಿಲ್ಲ. ಅದರ ಗುತ್ತಿಗೆ ರದ್ದು ಮಾಡಿಲ್ಲ.

'ಒಳಚರಂಡಿ ಸ್ವಚ್ಛ ಮಾಡಲು ಕಾರ್ಮಿಕರನ್ನು ಬಳಸುವುದಿಲ್ಲ' ಎಂದು 2012ರಲ್ಲಿಯೇ ಜಲಮಂಡಳಿ, ಹೈಕೋರ್ಟ್ ವಿಭಾಗೀಯ ಪೀಠಕ್ಕೆ ಹೇಳಿದೆ. ಹೀಗೆ ಹೈಕೋರ್ಟ್ಗೆ ಭರವಸೆ ನೀಡಿದ ನಂತರವೂ ಕಳೆದ ಮೂರು ವರ್ಷದಲ್ಲಿ 19 ಮಂದಿ ಇಳಿಗುಂಡಿಗೆ ಬಿದ್ದು ಸತ್ತಿದ್ದಾರೆ. ರಾಜ್ಯದಲ್ಲಿ 2008ರಿಂದ ಇಲ್ಲಿಯವರೆಗೆ 59 ಮಂದಿ ಇಳಿಗುಂಡಿಗೆ ಬಲಿಯಾಗಿದ್ದಾರೆ. ಇದರಲ್ಲಿ ಬೆಂಗಳೂರು ನಗರ ವ್ಯಾಪ್ತಿಯಲ್ಲಿಯೇ 28 ಮಂದಿ ಸತ್ತಿದ್ದಾರೆ. ಇದು ನಿಜಕ್ಕೂ ನಾಚಿಕೆಗೇಡಿನ ವಿಷಯ. ಇಳಿಗುಂಡಿಗೆ ಬಿದ್ದು ಕಾರ್ಮಿಕರು ಸಾಯುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿಲ್ಲ. ಇಳಿಗುಂಡಿಗೆ ಬಿದ್ದು ಸತ್ತವರ ಕುಟುಂಬಕ್ಕೆ ತಲಾ ರೂ. 10 ಲಕ್ಷ ಪರಿಹಾರ ನೀಡಿಬಿಟ್ಟರೆ ತನ್ನ ಜವಾಬ್ದಾರಿ ಮುಗಿಯಿತು ಎಂದು ಸರ್ಕಾರ ಭಾವಿಸಿದಂತೆ ಕಾಣುತ್ತದೆ. 'ಗುತ್ತಿಗೆದಾರರ ವಿರುದ್ಧ ಕ್ರಮ, ತನಿಖೆಗೆ ಆದೇಶ, ತಪ್ಪಿತಸ್ಥರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ,' ಎಂದು ಸಚಿವರು, ಬಿಬಿಎಂಪಿ ಅಥವಾ ಇತರ ಸ್ಥಳೀಯ ಸಂಸ್ಥೆಗಳ, ಜಲಮಂಡಳಿ ಮುಖಂಡರು ನೀಡುತ್ತಲೇ ಬಂದಿದ್ದಾರೆ. ಆದರೆ ಇದುವರೆಗೆ ಯಾವ ಗುತ್ತಿಗೆದಾರರಿಗೂ ಶಿಕ್ಷೆಯಾದ ವರದಿಗಳಿಲ್ಲ. ಇಂಥ ದುರ್ಘಟನೆಗಳು ಸಂಭವಿಸಿದಾಗ ನಾಲ್ಕಾರು ದಿನ ಈ ಕುರಿತು ಆಕ್ರೋಶದ ಮಾತುಗಳು ಸಿಡಿಯುತ್ತವೆ. ಆನಂತರ ಎಲ್ಲವೂ ತಣ್ಣಗಾಗುತ್ತದೆ. ಮತ್ತೆಲ್ಲೋ ಸಾವುಗುಂಡಿಗಳು ಬಲಿ ತೆಗೆದುಕೊಂಡಾಗಲೇ ಮತ್ತೆ ಎಲ್ಲರಿಗೂ ಈ ವಿಷಯ ನೆನಪಾಗುವುದು.

ಒಳಚರಂಡಿಯನ್ನು ಮನುಷ್ಯರಿಂದ ಸ್ವಚ್ಛಗೊಳಿಸುವುದೇ ಅಪರಾಧ. ಈ ಬಗ್ಗೆ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ಗಳು ತೀರ್ಪು ನೀಡಿವೆ. ಆದರೂ ನ್ಯಾಯಾಲಯಗಳ ಆದೇಶವನ್ನೂ ಉಲ್ಲಂಘಿಸಿ ಕಾರ್ಮಿಕರನ್ನು ಇಳಿಗುಂಡಿಗೆ ಇಳಿಸುವುದು ಅಬಾಧಿತವಾಗಿ ನಡೆಯುತ್ತಿದೆ. "ಕರ್ನಾಟಕ ನಗರ ಸ್ಥಳೀಯ ಸಂಸ್ಥೆಗಳ ಒಳಚರಂಢಿ ಸುರಕ್ಷತಾ ಕೈಪಿಡಿ 2012" ರ ನಿಯಮಗಳ ಪ್ರಕಾರ, ಒಳಚರಂಡಿ ಮತ್ತು ಮ್ಯಾನ್ ಹೋಲ್ಗಳನ್ನು ಯಂತ್ರಗಳ ಮೂಲಕವೇ ಸ್ವಚ್ಛಗೊಳಿಸಬೇಕು. ಒಳಚರಂಡಿ ಸ್ವಚ್ಛತಾ ಕಾರ್ಮಿಕರಿಗೆ ಮುಖಗವಸು, ಗಮ್ ಬೂಟು, ಕೈಗವಸಿನಂತಹ ಸೌಲಭ್ಯಗಳನ್ನು ಒದಗಿಸಬೇಕು. ಒಳಚರಂಡಿ ಸುರಕ್ಷತಾ ನಿಯಮಗಳ ಪ್ರಕಾರ ಅನಿವಾರ್ಯ ಸಂದರ್ಭದಲ್ಲಿ ಮಾತ್ರ ಕಾರ್ಮಿಕರು ಮ್ಯಾನ್ಹೋಲ್ನಲ್ಲಿ ಇಳಿಯಬಹುದು. ಹೀಗೆ ಒಳಕ್ಕೆ ಇಳಿದಾಗ ಅವರಿಗೆ ಆಮ್ಲಜನಕ ಪೂರೈಸಬೇಕು. ಎಲ್ಲ ಬಗೆಯ ಸುರಕ್ಷಾ ಕ್ರಮಗಳನ್ನು ಕೈಗೊಳ್ಳಬೇಕು. ಹಿರಿಯ ಅಧಿಕಾರಿಯೊಬ್ಬರು ಹಾಗೂ ಇಬ್ಬರು ಸಹಾಯಕರ ಮೇಲ್ವಿಚಾರಣೆಯಲ್ಲಿಯೇ ಇದು ನಡೆಯಬೇಕು. ಮ್ಯಾನ್ಹೋಲ್ನಲ್ಲಿ ಮಿಥೇನ್, ಕಾರ್ಬನ್ ಮಾನಾಕ್ಸೈಡ್ನಂತಹ ವಿಷಕಾರಿ ಅನಿಲಗಳಿರುತ್ತವೆ. ಹೀಗಾಗಿ ಮ್ಯಾನ್ಹೋಲ್ಗೆ ಇಳಿಯುವುದಕ್ಕೆ ಕನಿಷ್ಠ ಒಂದು ಗಂಟೆ ಮೊದಲು ಅದರ ಮುಚ್ಚಳವನ್ನು ತೆಗೆದಿಡಬೇಕು. ಮೈಗೆಲ್ಲಾ ಕೊಬ್ಬರಿ ಎಣ್ಣೆ ಸವರಿಕೊಂಡು, ಮುಖಗವಸು, ಕೈಗವಸು ಹಾಕಿಕೊಂಡೇ ಇಳಿಯಬೇಕು. ಆದರೆ ಈ ಯಾವ ನಿಯಮವನ್ನೂ ಪಾಲಿಸಲಾಗಿಲ್ಲವೆಂಬುದು ಸ್ಪಷ್ಟ. ಕೋಟ್ಯಾಂತರ ರೂಪಾಯಿಗಳ ಬಜೆಟ್ ಇರುವ ನಗರ ಸ್ಥಳೀಯ ಸಂಸ್ಥೆಗಳು ಪೌರಕಾರ್ಮಿಕರ ಬಗ್ಗೆ ಮಾತ್ರ ಕಾಳಜಿ ವಹಿಸುವುದಿಲ್ಲ. ಮಾತ್ರವಲ್ಲ ಗುತ್ತಿಗೆದಾರರು ಹಣ ಉಳಿಸಲು ಸಾಕಷ್ಟು ಯಂತ್ರಗಳನ್ನು ಕಾರ್ಮಿಕರು ಮತ್ತಿತರ ಸಿಬ್ಬಂದಿ ಹೊಂದದೆ, ಇಂತಹ ತುರ್ತು ಪರಿಸ್ಥಿತಿಗಳಲ್ಲಿ ಬಡ ಅಸಹಾಯ ಕಾರ್ಮಿಕರನ್ನು ಹೆಚ್ಚಿನ ಕೂಲಿ, ಮದ್ಯದ ಆಮಿಷ ತೋರಿಸಿ ಈ ಸಾವಿನ ಗುಂಡಿಗಳಿಗೆ ಇಳಿಸುತ್ತಾರೆ. ಇದು ಅಮಾನವೀಯ ಮಾತ್ರವಲ್ಲ. ಅಪರಾಧ ಕೂಡಾ.

ಇದು ಜಲಮಂಡಳಿ, ಸ್ಥಳೀಯ ಸಂಸ್ಥೆ, ಗುತ್ತಿಗೆದಾರರು ಕೆಲವು ನಿಯಮಗಳ ಪಾಲನೆ ಮಾಡದೆ ಉಲ್ಲಂಘನೆ ಮಾಡುತ್ತಿರುವ ಪ್ರಶ್ನೆ ಮಾತ್ರವಲ್ಲ. ನವ-ಉದಾರೀಕರಣದಿಂದಾಗಿ ಖಾಸಗೀಕರಣ, ಹೊರಗುತ್ತಿಗೆ ವ್ಯವಸ್ಥೆಗಳಿಂದಲೂ, ಅಲ್ಪಾವಧಿ ಗುತ್ತಿಗೆ ಕಾರ್ಮಿಕರ ಪದ್ಧತಿಗಳಿಂದಲೂ ಬಾಧಿತರಾಗಿರುವ ಕಾರ್ಮಿಕರು ತಮ್ಮ ಹಕ್ಕುಗಳನ್ನು ಸಾಧಿಸಲಾಗದೆ ಅಸಹಾಯಕರಾಗಿರುವಂತಹ ಸಮಾಜದ ಭೀಕರ ರೋಗದ ಹೊರಗೆ ಕಾಣುವ ಲಕ್ಷಣ ಮಾತ್ರ ಇದು. ಈ ಸಾವಿನಗುಂಡಿಯ ಬಲಿಗಳು ಒಟ್ಟು ಕಾರ್ಮಿಕರ ಸ್ಥಿಕತಿಯ ಪ್ರತಿಮೆ ಕೂಡಾ. "ಈ ಸಾವಿನಗುಂಡಿಗಳ ಬಲಿ ಮತ್ತು ಇದಕ್ಕೆ ಕಾರಣವಾಗುತ್ತಿರುವ ನವ-ಉದಾರೀಕರಣದ ನೀತಿಗಳನ್ನು ನಿಲ್ಲಿಸಿ" ಎಂದು ಇಡೀ ಕಾರ್ಮಿಕ ವರ್ಗ ಗರ್ಜಿಸುವಂತೆ ಅಣಿ ನೆರೆಸುವ ತುರ್ತು ಅಗತ್ಯವಿದೆ.

ರೈತರ ಆತ್ಮಹತ್ಯೆ ಹಾಗೂ ದಲಿತರ ಕಗ್ಗೊಲೆ ತಡೆಯಿರಿ, ಕಪ್ಪ ಡೈರಿಗಳ ಬಗ್ಗೆ ನ್ಯಾಯಾಂಗ ತನಿಖೆ ನಡೆಸಿ : ಸಿಪಿಐ(ಎಂ)

ಸುಪ್ರಿಂಕೋರ್ಟು ಅಥವಾ ಹೈಕೋರ್ಟುಗಳ ಮುಖ್ಯ ನ್ಯಾಯಾಧೀಶರ ಸುಪರ್ಧಿಯಲ್ಲಿ ಈಗಿನ ಕಾಂಗ್ರೆಸ್ ಮತ್ತು ಹಿಂದಿನ ಬಿಜೆಪಿ ಆಡಳಿತದಲ್ಲಿ ಪಡೆದಿರುವರೆನ್ನಲಾದ ಕಿಕ್ಬ್ಯಾಕ್ ಹಾಗೂ ಕಪ್ಪಕಾಣಿಕೆಗಳ ಕುರಿತು ಸ್ವತಂತ್ರ ನ್ಯಾಯಾಂಗ ತನಿಖೆ ನಡೆಸಲು ಅಗತ್ಯ ಕ್ರಮವಹಿಸಬೇಕೆಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ರಾಜ್ಯಸಮಿತಿಯ ಪರವಾಗಿ ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ ಅವರು ಮಾರ್ಚ್ 3 ರಂದು ನೀಡಿದ ಹೇಳಿಕೆಯಲ್ಲಿ ರಾಜ್ಯ ಹಾಗೂ ಕೇಂದ್ರ ಸರಕಾರಗಳನ್ನು ಒತ್ತಾಯಿಸಿದೆ.

ಕಾಂಗ್ರೆಸ್ ಹಾಗೂ ಬಿಜೆಪಿಯ ನಾಯಕರು ಈ ಕುರಿತು ಪರಸ್ಪರರ ಮೇಲೆ ಆರೋಪ ಹಾಗೂ ಪ್ರತ್ಯಾರೋಪಗಳ ಮೂಲಕ ರಾಜ್ಯದ ನಾಗರಿಕರು ಪ್ರಜಾಪ್ರಭುತ್ವದ ಮೇಲೆ ವಿಶ್ವಾಸ ಕಳೆದುಕೊಳ್ಳುವ ಪರಿಸ್ಥಿತಿ ನಿರ್ಮಾಣಗೊಂಡಿರುವುದನ್ನು ಸರಿಪಡಿಸಲು ಮತ್ತು ಪ್ರಜೆಗಳಿಗೆ ಸ್ಪಷ್ಟನೆಯನ್ನು ಪಡೆಯಲು ಈ ಕ್ರಮ ಅಗತ್ಯವಾಗಿದೆಯೆಂದು ಸಿಪಿಐ(ಎಂ) ಒತ್ತಾಯಿಸಿದೆ.

ಕರ್ನಾಟಕ ರಾಜ್ಯ ಕಳೆದ 6-7 ವರ್ಷಗಳಿಂದ ಸತತವಾದ ಬರಪೀಡಿತ ಪ್ರದೇಶವಾಗಿದೆ. ವಾಸ್ತವದಲ್ಲಿ ರೈತರ ಆತ್ಮಹತ್ಯೆಗಳು ಮತ್ತು ಹಸಿವಿನ ಸಾವುಗಳು ದಿನೇ ದಿನೇ ಬೆಳೆಯುತ್ತಾ ಗ್ರಾಮೀಣ ಪ್ರದೇಶವನ್ನು ಮಸಣವನ್ನಾಗಿಸುತ್ತಿವೆ. ಕಳೆದ ಒಂದು ತಿಂಗಳಲ್ಲಿ 100ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ರೈತರು, ಕಸುಬುದಾರರೂ ಮತ್ತು ಕೂಲಿಕಾರರು ಉದ್ಯೋಗವಿಲ್ಲದೇ, ಹಳೆಯ ಸಾಲವನ್ನು ತೀರಿಸಲಾಗದೇ, ಹೊಸ ಸಾಲ ಪಡೆಯಲಾಗದೇ ತತ್ತರಿಸಿ ಹೋಗಿದ್ದಾರೆ. ಗ್ರಾಮಗಳು ವಲಸೆಯಿಂದಾಗಿ ಖಾಲಿಯಾಗುತ್ತಿವೆ. ಬರಗಾಲವನ್ನು ಉಪಯೋಗಿಸಿಕೊಂಡು ಗ್ರಾಮೀಣ ಶ್ರೀಮಂತರು ಈ ದುಡಿಯುವ ಜನಗಳ ಆಸ್ತಿ ಪಾಸ್ತಿಗಳನ್ನು ತಮ್ಮ ದುಬಾರಿ ಬಡ್ಡಿಯ ಸಾಲಕ್ಕೆ ಪಡೆಯುವುದು ನಿರಂತರವಾಗಿದೆ. ಸಾರ್ವಜನಿಕ ಬ್ಯಾಂಕುಗಳು ಮತ್ತು ಸಹಕಾರಿ ಸಂಘಗಳು ಕೂಡಾ ರೈತರು ಹಾಗೂ ಕೂಲಿಕಾರರಿಂದ ತಮ್ಮ ಸಾಲಗಳನ್ನು ರಿನ್ಯೂವಲ್ ಮಾಡಿಸಿಕೊಳ್ಳಲು ಗ್ರಾಮೀಣ ಪ್ರದೇಶದ ಶ್ರೀಮಂತರು ಮತ್ತು ಭೂಮಾಲಕರ ಜೊತೆ ಕೈಜೋಡಿಸಿ ಅವರ ಲೂಟಿಗೆ ನೆರವಾಗುತ್ತಿವೆ. ಇದರಿಂದ ಗ್ರಾಮೀಣ ಶ್ರೀಮಂತರ ದೌರ್ಜನ್ಯಗಳು ಮಹಿಳೆಯರು ಹಾಗೂ ದಲಿತರ ಮೇಲೆ ಹೆಚ್ಚುತ್ತಿವೆ. ಕಳೆದ ಒಂದೆರಡು ತಿಂಗಳಲ್ಲಿ ಸುಮಾರು 6 ದಲಿತ ಕೂಲಿಕಾರರ ಕೊಲೆಗಳು ರಾಜ್ಯದಲ್ಲಿ ನಡೆದಿವೆ. ಅದೇ ರೀತಿ ಹಲವಾರು ಮಾರಣಾಂತಿಕ ಹಲ್ಲೆಗಳು ಸಂಭವಿಸಿವೆ.



ಕೃಪೆ: ಪಿ. ಮಹಮ್ಮದ್, ವಿಜಯಕರ್ನಾಟಕ

ಇಂತಹ ಸನ್ನಿವೇಶದಲ್ಲಿ ರೈತರು, ಕಸುಬುದಾರರು ಮತ್ತು ಕೂಲಿಕಾರರ ಕಳೆದ 06-07 ವರ್ಷಗಳ ಬರಗಾಲದಿಂದ ಉಂಟಾದ ಎಲ್ಲ ರೀತಿಯ ಸಾಲಗಳನ್ನು ಕೇಂದ್ರ ಮತ್ತು ರಾಜ್ಯಗಳು ಒಟ್ಟಾಗಿ ಮನ್ನಾ ಮಾಡಿ, ಈ ಜನತೆಯನ್ನು ರಕ್ಷಿಸಲು ಮುಂದಾಗುವಂತೆ ಸಿಪಿಐ(ಎಂ) ನಿರಂತರವಾಗಿ ಒತ್ತಾಯಿಸುತ್ತಲೇ ಬಂದಿದೆ. ಅದೇ ರೀತಿ, ರೈತ ಕೂಲಿಕಾರರ ಸಂಘಗಳು ಒತ್ತಾಯಿಸುತ್ತಿವೆ. ಗ್ರಾಮೀಣ ಪ್ರದೇಶದ ಈ ಅಪರಿಮಿತವಾದ ಈ ಸಂಕಷ್ಟವನ್ನು ಪ್ರಧಾನವಾಗಿ ಗಮನಿಸಿ, ಈ ಎರಡೂ ಆಡಳಿತಾರೂಢ ಹಾಗೂ ವಿರೋಧ ಪಕ್ಷಗಳು ಒಟ್ಟಾಗಿ ಜನತೆಗೆ ನೆರವಾಗುವ ಕೆಲಸದಲ್ಲಿ ತೊಡಗುವ ಬದಲು, ಈ ವಿಚಾರಗಳನ್ನು ಗೌಣವಾಗಿಸಿ, ಚುನಾವಣಾ ರಾಜಕೀಯದಲ್ಲಿ ತೊಡಗಿರುವುದನ್ನು ರಾಜ್ಯದ ಜನತೆ ಅರಿಯಬೇಕು ಮತ್ತು ಅ ಕುರಿತು ಬಲವಾಗಿ ಒತ್ತಾಯಿಸಲು ಕರೆ ನೀಡಿದೆ.

ಪುಟ 4 ಕ್ಕೆ

ಜಯಪ್ರಕಾಶ ಹೆಗ್ಡೆ ಬಿಜೆಪಿ ಸೇರ್ಪಡೆ– ಜಾತ್ಯಾತೀತತತ್ವಕ್ಕೆ ತಿಲಾಂಜಲಿ : ಸಿಪಿಐ(ಎಂ)

ಮಾರ್ಚ್ 8 ರಂದು ಬಿಜೆಪಿಗೆ ಸೇರಿದ ಮಾಜಿ ಸಚಿವ ಹಾಗೂ ಮಾಜಿ ಸಂಸತ್ ಸದಸ್ಯ ಜಯಪ್ರಕಾಶ ಹೆಗ್ಡೆಯವರು ಈ ವರೆಗೆ ನಂಬಿಕೊಂಡು ಬಂದಿದ್ದ ಜಾತ್ಯಾತೀತತತ್ವಕ್ಕೆ ತಿಲಾಂಜಲಿ ನೀಡಿದಂತಾಗಿದೆ ಎಂದು ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿ ಅಭಿಪ್ರಾಯ ಪಡುತ್ತದೆ. ಶ್ರೀಯುತ ಹೆಗ್ಡೆಯವರು ಪ್ರಜಾಪ್ರಭುತ್ವ ವ್ಯವಸ್ಥೆ ಬಗ್ಗೆ ಅತೀವ ಕಾಳಜಿ ಹೊಂದಿದ್ದು ಎಲ್ಲಾ ಧರ್ಮದವರನ್ನು ಸಮಾನವಾಗಿ ಕಾಣುವ ಮನೋಭಾವ ಉಳ್ಳವರಾಗಿದ್ದರು. ಸುಮಾರು 30 ವರ್ಷಗಳ ರಾಜಕೀಯ ಜೀವನದಲ್ಲಿ ಬಿಜೆಪಿ ಮತ್ತು ಸಂಘ ಪರಿವಾರದ ಧೋರಣೆಗಳನ್ನು ಸತತವಾಗಿ ವಿರೋಧಿಸಿರುತ್ತಾರೆ. ಇತ್ತೀಚೆಗೆ ಕೇರಳ ಮುಖ್ಯಮಂತ್ರಿ ಮಂಗಳೂರಿಗೆ ಆಗಮಿಸಿದ ಸಂದರ್ಭದಲ್ಲಿ ಬಿಜೆಪಿ ಮತ್ತು ಸಂಘ ಪರಿವಾರದವರು ದ.ಕ.ಜಿಲ್ಲಾ ಬಂದ್‌ಗೆಕರೆ ನೀಡಿದ್ದ ಹಿನ್ನೆಲೆಯಲ್ಲಿ, 'ಬಂದ್ ಕರೆ ಅಸಂವಿಧಾನಿಕ ಮತ್ತು ಪ್ರಜಾಪ್ರಭುತ್ವಕ್ಕೆ ಮಾರಕ' ಎಂದು ಬಣ್ಣಿಸಿದ್ದರು. ಗೋ ಸಾಗಾಟದ ಹೆಸರಿನಲ್ಲಿ ಆದಿ ಉಡುಪಿಯಲ್ಲಿ ಹಾಜಬ್ಬ, ಹಸನಬ್ಬರವರ ಬೆತ್ತಲೆ ಪ್ರಕರಣವನ್ನು ಸಿಪಿಐ(ಎಂ) ಶಾಸಕರಾಗಿದ್ದ ಶ್ರೀರಾಮ ರೆಡ್ಡಿ ಮತ್ತು ಜಯಪ್ರಕಾಶ ಹೆಗ್ಡೆಯವರು ವಿಧಾನ ಸಭೆಯಲ್ಲಿ ಖಂಡ ತುಂಡವಾಗಿ ಖಂಡಿಸಿದ್ದರು.

ಇಂತಹ ವ್ಯಕ್ತಿತ್ವ ಉಳ್ಳವರು ಬಿಜೆಪಿಯವರ ಕೋಮು ಖೆಡ್ಡಾಕ್ಕೆ ಬಿದ್ದಿರುವುದು ವಿಪರ್ಯಾಸ. ಉಡುಪಿ ಜಿಲ್ಲೆಯ ಜನತೆ ಅವಕಾಶವಾದಿ ರಾಜಕಾರಣವನ್ನು ಬೆಂಬಲಿಸುವುದಿಲ್ಲ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ.ಶಂಕರ್ ನೀಡಿರುವ ಹೇಳಿಕೆಯಲ್ಲಿ ಭರವಸೆ ವ್ಯಕ್ತಪಡಿಸಿದ್ದಾರೆ.

ಚಂದ್ರಾವತ್ ಬಂಧಿಸಿ : ನರಸಿಂಹ



ಕೇರಳ ಸಿಎಂ ಪಿಣರಾಯಿ ವಿಜಯನ್ ಅವರ ತಲೆ ತೆಗೆದರೆ ಒಂದು ಕೋಟಿ ಕೊಡುವುದಾಗಿ ಬಹಿರಂಗ ಸಭೆಯಲ್ಲಿ ಹೇಳಿಕೆ ನೀಡಿದ್ದ ಆರೆಸ್ಸೆಸ್ ಮುಖಂಡನನ್ನು ಕೂಡಲೇ ಬಂಧಿಸಬೇಕೆಂದು ಸಿಪಿಐ(ಎಂ) ಕುಂದಾಪುರ ವಲಯ ಕಾರ್ಯದರ್ಶಿ ಎಚ್. ನರಸಿಂಹ ಗುಡುಗಿದರು. ಕೇರಳದಲ್ಲಿ ಸಿಪಿಐ(ಎಂ) ಪಕ್ಷದ ಜನಪರ ಕೆಲಸಗಳನ್ನು ಸಹಿಸಲಾಗದೆ ಈ ರೀತಿಯ ಹೇಳಿಕೆಗಳನ್ನು ಆರೆಸ್ಸೆಸ್ ಮುಖಂಡರು ನೀಡುತ್ತಿದ್ದಾರೆ ಎಂದು ಅವರು ನುಡಿದರು.

ಆರೆಸ್ಸೆಸ್ ನಾಯಕ ಚಂದ್ರಾವತ್ ಅವರ ಹೇಳಿಕೆ ಖಂಡಿಸಿ ಶನಿವಾರ ಸಂಜೆ ನಗರದ ಶಾಸ್ತ್ರಿ ವೃತ್ತದಲ್ಲಿ ಸಿಪಿಐ(ಎಂ) ಕುಂದಾಪುರ ಹಾಗೂ ಬೈಂದೂರು ವಲಯ ಸಮಿತಿ ಆಯೋಜಿಸಿದ್ದ ಪ್ರತಿಭಟನಾ ಸಭೆಯಲ್ಲಿ ಅವರು ಮಾತನಾಡುತ್ತಿದ್ದರು. ಇಂದು ಬಿಜೆಪಿ, ಸಿಪಿಐ(ಎಂ) ಪಕ್ಷದ ವಿರುದ್ದ ಅಪಪ್ರಚಾರದಲ್ಲಿ ತೊಡಗಿದೆ. ಹಿಂದೂ ಧರ್ಮದ ಹೆಸರಿನಲ್ಲಿ ಇಲ್ಲಸಲ್ಲದ ಆರೋಪಗಳನ್ನು ಆರೆಸ್ಸೆಸ್ ಕಮ್ಯೂನಿಸ್ಟರ ಮೇಲೆ ಹೊರಿಸುತ್ತಿದೆ. ಕೇರಳದ ಶಾಲೆ ಹಾಗೂ ದೇವಸ್ಥಾನಗಳಲ್ಲಿ ಆರೆಸ್ಸೆಸ್ ಶಸ್ತ್ರಾಸ್ತ್ರ ತಯಾರಿ ನಡೆಸುತ್ತಿದೆ. ಇದನ್ನು ಮಟ್ಟ ಹಾಕಲು ಪಿಣರಾಯಿ ವಿಜಯನ್ ಬದ್ದರಾಗಿದ್ದಾರೆ. ಆರೆಸ್ಸೆಸ್ ಕಚೇರಿಯಲ್ಲಿ ಬಾಂಬ್ ತಯಾರಿ ಮಾಡುವಾಗ ಸ್ಫೋಟಗೊಂಡರೂ ಅದನ್ನೂ ಸಿಪಿಐ(ಎಂ) ಮೇಲೆ ಆರೋಪ ಹೊರಿಸುತ್ತಿರುವುದು ಖಂಡನೀಯ. ಆರೆಸ್ಸೆಸ್ ಕೇರಳದಲ್ಲಿ ಜಗಳ, ದೊಂಬಿ, ಕೋಮು ಗಲಭೆ ಎಬ್ಬಿಸಲು ಹಾತೊರೆಯುತ್ತಿದೆ. ಆದರೆ ಸಿಪಿಐ(ಎಂ) ಅದಕ್ಕೆ ತೊಡಕಾಗಿ ನಿಂತಿದೆ. ಹೀಗಾಗಿ ಸಿಪಿಐ(ಎಂ) ವಿರುದ್ದ ಸುಖಾಸುಮ್ಮನೆ ಆರೋಪ ಹೊರಿಸುತ್ತಿದೆ ಎಂದರು.

ಕೇರಳದಲ್ಲಿ ಅಧಿಕಾರಕ್ಕೇರಲು ಬಿಜೆಪಿ ಹರಸಾಹಸಪಡುತ್ತಿದೆ. ಆದರೆ ಪಿಣರಾಯಿ ವಿಜಯನ್ ಅವರ ಜನಪರ ಕೆಲಸಗಳೆ ಮುಂದಿನ ದಿನಗಳಲ್ಲಿ ಉತ್ತರ ನೀಡಲಿಕ್ಕಿದೆ. ಕೇರಳದಲ್ಲಿ ಸಿಪಿಐ(ಎಂ) ಪಕ್ಷವನ್ನು ಬಗ್ಗುಬಡಿಯಲು ಹಿಂದೂಗಳ ಹೆಸರಿನಲ್ಲಿ ಬಿಜೆಪಿ ಓಟಿನ ರಾಜಕೀಯ ಮಾಡುತ್ತಿದೆ. ಸಿಪಿಐ(ಎಂ) ಬಡಜನರ ಪರ ಹೋರಾಟ ಮಾಡಿದ ಪಕ್ಷ ಎಂದು ಸಿಪಿಐ(ಎಂ) ಬೈಂದೂರು ವಲಯ ಕಾರ್ಯದರ್ಶಿ ಸುರೇಶ ಕಲ್ಲಾಗರ ನುಡಿದರು. ಸಿಪಿಐ(ಎಂ) ಮುಖಂಡರಾದ ಕೆ.ಶಂಕರ್, ಮಹಾಬಲ ವಡೇರಹೋಬಳಿ, ಕೆ.ಎಂ ಬಾಲಕೃಷ್ಣ, ರಮನಾಥ ಭಂಡಾರಿ, ಡಿ. ಲಕ್ಷ್ಮಣ, ಬಲ್ಕೀಸ್ ಮುಂತಾದವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಪಿಣರಾಯಿ ತಲೆದಂಡ ಹೇಳಿಕೆ ಖಂಡಿಸಿ ಸಿಪಿಐ(ಎಂ) ಪ್ರತಿಭಟನೆ

ಮಧ್ಯಪ್ರದೇಶದ ಆರ್‌ಎಸ್‌ಎಸ್ ಕಾರ್ಯಕರ್ತನೊಬ್ಬ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ತಲೆ ಕಡಿದು ಕೊಟ್ಟವರಿಗೆ ರೂ. 1 ಕೋಟಿ ಕೊಡುವುದಾಗಿ ಘೋಷಿಸಿರುವುದು ಆತನ ಮತ್ತು ಆತನ ಸಂಘಟನೆಯ ಫ್ಯಾಶಿಸ್ಟ್ ಸ್ವರೂಪವನ್ನು ಸ್ಪಷ್ಟ ಪಡಿಸುತ್ತದೆ. ತಮ್ಮ ಚಿಂತನೆಗೆ ಒಪ್ಪದ ಚಿಂತನೆಯುಳ್ಳವರನ್ನು ದ್ವೇಷಿಸುವುದು ಮಾತ್ರವಲ್ಲ ಕೊಲೆ ಮಾಡುವುದು ಕೂಡಾ ಫ್ಯಾಶಿಸಮ್ಮಿನ ಕಾರ್ಯಕ್ರಮವಾಗಿದೆ. ಫ್ಯಾಶಿಸಂ ಎಂದರೆ ಏನು ಎಂದು ಈಗಲಾದರೂ ನಮ್ಮ ದೇಶದ ಜನ ತಿಳಿಯದಿದ್ದರೆ ದೇಶವೇ ಉಳಿಯಲಾರದು ಎಂಬುದಾಗಿ ಸಿಪಿಐ(ಎಂ) ದ.ಕ ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ ಎಚ್ಚರಿಕೆ ನೀಡಿದರು.

ಅವರು ಇಂದು(ಮಾರ್ಚ್ 3) ಮಂಗಳೂರು ಜಿಲ್ಲಾಧಿಕಾರಿ ಕಛೇರಿಯೆದುರು ಮುಖ್ಯಮಂತ್ರಿ ತಲೆ ಕಡಿಯುವುದಾಗಿ ಘೋಷಿಸಿದ ಆರ್‌ಎಸ್‌ಎಸ್‌ನ ಕೃತ್ಯವನ್ನು ಖಂಡಿಸಿ ಸಿಪಿಐ(ಎಂ) ದ.ಕ ಜಿಲ್ಲಾ ಸಮಿತಿ ಏರ್ಪಡಿಸಿದ ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. ಮಧ್ಯ ಪ್ರದೇಶದ ಆರ್‌ಎಸ್‌ಎಸ್ ಕಾರ್ಯಕರ್ತ ಎಷ್ಟೊಂದು ಕ್ರೂರಿ ಎಂದರೆ ಆತ ಮುನ್ನೂರು ಜನರ ಸಾವಿಗೆ ಬದಲಿಯಾಗಿ ಮೂರು ಲಕ್ಷ ಕಮ್ಯೂನಿಸ್ಟ್ ಬೆಂಬಲಿಗರನ್ನು ಕೊಲ್ಲಿಸುತ್ತೇವೆ ಎಂದಿದ್ದಾರೆ. ಇಂತಹ ಬೆದರಿಕೆಗಳಿಗೆ ಕಮ್ಯೂನಿಸ್ಟರು ಹೆದರುವವರಲ್ಲ. ಸ್ವಾತಂತ್ರ್ಯ ಹೋರಾಟದ ವೇಳೆ ಕಮ್ಯೂನಿಸ್ಟರು ದೇಶಕ್ಕಾಗಿ ತಮ್ಮ ದೇಹಗಳನ್ನು ತ್ಯಾಗ ಮಾಡಿದ ಚರಿತ್ರೆಯಿದೆ. ಪಂಜಾಬಿನ ಖಲಿಸ್ಥಾನ ಚಳುವಳಿ ವೇಳೆ ನೂರಾರು ಕಮ್ಯೂನಿಸ್ಟ್ ಕಾರ್ಯಕರ್ತರು ದೇಶದ ಏಕತೆಗಾಗಿ ತಮ್ಮ ಪ್ರಾಣವನ್ನೂ ಅರ್ಪಿಸಿದ್ದಾರೆ ಎಂದು ವಿವರಿಸಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಜೆ. ಬಾಲಕೃಷ್ಣ ಶೆಟ್ಟಿ ಕೂಡ ಮಾತನಾಡಿದರು. ಪ್ರತಿಭಟನೆಯಲ್ಲಿ ದ.ಕ ಜಿಲ್ಲೆಯ ಸಿಪಿಐ(ಎಂ) ಮುಖಂಡರಾದ ಕೃಷ್ಣಪ್ಪ ಸಾಲ್ಯಾನ್, ಸುನಿಲ್ ಕುಮಾರ್ ಬಜಾಲ್, ಯೋಗೀಶ್ ಜಪ್ಪಿನಮೊಗರು ಹಾಗೂ ಜಿಲ್ಲಾ ಸಮಿತಿ ಸದಸ್ಯರು, ಉಳ್ಳಾಲ, ಗುರುಪುರ, ಮೂಡಬಿದ್ರಿ, ಮಂಗಳೂರು ನಗರದ ಪಕ್ಷದ ಕಾರ್ಯಕರ್ತರು ಭಾಗವಹಿಸಿದ್ದರು.

ಹಂಗಳೂರು, ಕಂಡ್ಲೂರುಗಳಲ್ಲಿ ಮನೆ ನಿವೇಶನ ರಹಿತರ ಸಮಾವೇಶ



ಏಪ್ರಿಲ್ 11 ಮತ್ತು ಏಪ್ರಿಲ್ 18 ರಂದು ಕ್ರಮವಾಗಿ ಕುಂದಾಪುರ ಮತ್ತು ಬೈಂದೂರು ಶಾಸಕರ ಮನೆ ಮುಂದೆ ಭೂಮಿ ಹಕ್ಕಿನ ಹೋರಾಟ ಧರಣಿ ಮುಷ್ಕರ ಆಯೋಜಿಸಲಾಗಿದ್ದು, ತಾಲೂಕಿನಾದ್ಯಂತ ಎಲ್ಲಾ ನಿವೇಶನ ರಹಿತ ಅರ್ಜಿದಾರರು ಭಾಗವಹಿಸಿ ಯಶಸ್ವಿಗೊಳಿಸಲು ಸಮಾವೇಶಗಳನ್ನು ಆಯೋಜಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಹಂಗಳೂರು ಗ್ರಾಮ ಪಂಚಾಯತ್ ಕಛೇರಿ ವಠಾರದಲ್ಲಿ ಮತ್ತು ಕಂಡ್ಲೂರು ಶ್ರೀ ಭವಾನಿ ಕಲ್ಯಾಣ ಮಂಟಪದಲ್ಲಿ ಸಮಾವೇಶಗಳನ್ನು ನಡೆಸಲಾಯಿತು. ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಜಿಲ್ಲಾ ಕಾರ್ಯದರ್ಶಿ ವೆಂಕಟೇಶ ಕೋಣಿ, ಅಧ್ಯಕ್ಷ ಯು. ದಾಸಭಂಡಾರಿ, ರಾಜೀವ ಪಡುಕೋಣೆ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದರು. ನಾಗರತ್ನ ನಾಡ, ಕುಶಲ, ಪದ್ಮಾವತಿ ಶೆಟ್ಟಿ, ಶೀಲಾವತಿ, ಸತೀಶ ಖಾರ್ವಿ, ವಿಲ್ಸನ್ ಆನಂದ ಕುಲಾಲ್ ಭಾಗವಹಿಸಿದರು.

ಕಪ್ಪ ಡೈರಿಗಳ ಬಗ್ಗೆ ನ್ಯಾಯಾಂಗ ತನಿಖೆ ನಡೆಸಿ...... ಪುಟ 3 ರಿಂದ

ಆದ್ದರಿಂದ, ಈ ಎರಡೂ ಪಕ್ಷಗಳು, ಮುಖಂಡರು ಹೈಕಮಾಂಡ್‌ಗಳಿಗೆ ನೀಡಲಾದ ಕಪ್ಪಕಾಣಿಕೆಗಳನ್ನು ಅವರವರ ಅವಧಿಯಲ್ಲಿ ಪಡೆಯಲಾದ ಕಿಕ್‌ಬ್ಯಾಕ್‌ಗಳ ಕುರಿತು ತಕ್ಷಣವೇ ನ್ಯಾಯಾಂಗದ ಸುಪರ್ಧಿಯಲ್ಲಿ ತನಿಖೆ ಕೈಗೊಂಡು ರಾಜ್ಯದ ಜನತೆಗೆ ಸತ್ಯಾಸತ್ಯತೆ ತಿಳಿಸಲು ತಕ್ಷಣ ಅಗತ್ಯ ಕ್ರಮಗಳನ್ನು ಕೈಗೊಂಡು ಮುಖ್ಯ ಮಂತ್ರಿಯವರು ಇದಕ್ಕೊಂದು ಅಂತ್ಯ ಹಾಡಬೇಕು ಮತ್ತು ಬರಪೀಡಿತ ಜನತೆಯ ಸಾಲ ಮತ್ತಿತರೇ ಸಮಸ್ಯೆಗಳ ಪರಿಹಾರಕ್ಕೆ ಕ್ರಮಕೈಗೊಂಡು ಅವರ ರಕ್ಷಣೆಗೆ ಮುಂದಾಗಲೂ ಸಿಪಿಐ(ಎಂ) ರಾಜ್ಯ ಸಮಿತಿ ಒತ್ತಾಯಿಸಿದೆ.

ಕೆಪಿಎಸ್‌ಸಿ ನೇಮಕಾತಿ ಆದೇಶ ವಾಪಾಸ್ಸು ಪಡೆಯಲು ಒತ್ತಾಯ :

ರಾಜ್ಯ ಸರಕಾರ ನಿನ್ನೆ ಕೆ.ಪಿ.ಎಸ್.ಸಿ ನೇಮಕಾತಿಯಂತೆ 362 ಜನರಿಗೂ ಆದೇಶ ಹೊರಡಿಸಿರುವದನ್ನು ಸಿಪಿಐ(ಎಂ) ರಾಜ್ಯ ಸಮಿತಿ ಆಕ್ಷೇಪಿಸಿದೆ. ಈ ನೇಮಕಾತಿಯಲ್ಲಿ ಅಕ್ರಮ ನಡೆದಿರುವುದನ್ನು ಇದೇ ಸರಕಾರ ಸಿಐಡಿ ಮೂಲಕ ತನಿಖೆ ನಡೆಸಿ ಅವರಲ್ಲಿ ಸುಮಾರು 46 ಮಂದಿ ಕಳಂಕಿತರನ್ನು ಗುರುತಿಸಿತ್ತು. ಈಗ ಈ ಸರಕಾರ ಈ ಕಳಂಕಿತರ ಮೇಲೆ ಅಗತ್ಯ ಕಾನೂನಿನ ಕ್ರಮವಹಿಸುವುದರ ಬದಲು ಅವರನ್ನು ಸೇರಿಸಿ ನೇಮಕಾತಿ ಆದೇಶ ನೀಡಿರುವದನ್ನು ಸಿಪಿಐ(ಎಂ) ಬಲವಾಗಿ ಖಂಡಿಸುತ್ತದೆ. ಈ ರೀತಿ ಆದಲ್ಲಿ ಪ್ರಾಮಾಣಿಕ ಅರ್ಹ ಉದ್ಯೋಗಾರ್ಥಿಗಳಿಗೆ ಅನ್ಯಾಯವಾಗುತ್ತದೆ. ಆದ್ದರಿಂದ ಇಂತಹ ಅಕ್ರಮವಾಗಿ ನೇಮಕಾತಿ ಪಡೆದವರ ನೇಮಕಾತಿ ಆದೇಶವನ್ನು ರದ್ದು ಗೊಳಿಸಿ ಅವರ ಮೇಲೆ ಅಗತ್ಯ ಕಾನೂನಿನ ಕ್ರಮವಹಿಸಲು ಒತ್ತಾಯಿಸಿದೆ.

ಕಾಂ. ಪಿಣರಾಯಿ ವಿಜಯನ್ ತಲೆದಂಡದ ಆರ್‌ಎಸ್‌ಎಸ್ ಕರೆಗೆ ಸಿಪಿಐ(ಎಂ) ಖಂಡನೆ.

ಸಿಪಿಐ(ಎಂ) ಪಕ್ಷದ ಪಾಲಿಟ್ ಬ್ಯುರೋ ಸದಸ್ಯರು ಮತ್ತು ಕೇರಳದ ಜನಪರ ಮುಖ್ಯಮಂತ್ರಿಗಳು ಆಗಿರುವ ಕಾಂ. ಪಿಣರಾಯಿ ವಿಜಯನ್‌ರವರ ತಲೆದಂಡಕ್ಕೆ ಒಂದುಕೋಟಿ ರೂಪಾಯಿಗಳ ಇನಾಮು ಘೋಷಣೆ ಮಾಡಿ ಅವರ ಕೊಲೆಗೆ ಪ್ರಚೋದನೆ ಮಾಡಿದ ಆರ್‌ಎಸ್‌ಎಸ್ ಉಜ್ಜೈನಿ ಮಹಾನಗರ ಪ್ರಮುಖ ಕುಂದನ್ ಚಂದ್ರವತ್ ಅವರನ್ನು ತಕ್ಷಣವೇ ಬಂಧಿಸಿ, ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಿ ಕಾನೂನಿನ ಕ್ರಮವಹಿಸಬೇಕೆಂದು, ಕೇಂದ್ರ ಹಾಗೂ ಅಲ್ಲಿನ ರಾಜ್ಯ ಸರಕಾರವನ್ನು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಒತ್ತಾಯಿಸಿದೆ. ಇದು ಸಿಪಿಐ(ಎಂ) ಪಕ್ಷ ದೇಶದಲ್ಲಿ ಸೌಹಾರ್ಧ ಭಾರತಕ್ಕಾಗಿ ನಡೆಸಿರುವ ಹೋರಾಟದ ಮಹತ್ವವನ್ನು ಎತ್ತಿ ತೋರಿಸಿದರೇ, ಮತಾಂಧರ ಹೇಡಿತನವನ್ನು ಬಯಲಿಗೆಳೆದಿದೆಯೆಂದು ಕುಂದನ್ ಚಂದ್ರವತ್ ಅವರ ಹೇಡಿ ಕೊಲೆಗಡುಕತನದ ನಿಲುಮೆಯನ್ನು ಬಲವಾಗಿ ಖಂಡಿಸಿದೆ. ಆರ್ ಎಸ್ ಎಸ್ ದೇಶ ಭಕ್ತ ಶಿಸ್ತಿನ ಸಿಪಾಯಿಯೆಂದು ತನ್ನನ್ನು ತಾನ ಕರೆದುಕೊಳ್ಳುವ ಭಾರತದ ಪ್ರಧಾನ ಮಂತ್ರಿ ತನ್ನದೇ ಒಬ್ಬ ಆರ್ ಎಸ್ ಎಸ್ ಸಂಘದ ಮುಖಂಡನೊಬ್ಬ ಕೇರಳ ರಾಜ್ಯದ ಮುಖ್ಯ ಮಂತ್ರಿಯನ್ನು ಕೊಲೆ ಮಾಡಲು ಪ್ರಚೋಧನೆ ಮಾಡಿರುವುದನ್ನು ಖಂಡಿಸಿ ಇದುವರೆಗೆ ಕ್ರಮವಹಿಸಿದ ಪ್ರಧಾನ ಮಂತ್ರಿಗಳ ಪ್ರಜಾಪ್ರಭುತ್ವ ವಿರೋಧಿ ನೀತಿಯನ್ನು ಸಿಪಿಐ(ಎಂ) ಖಂಡಿಸಿದೆ. ಈ ರೀತಿಯ ಪ್ರಚೋದನೆಯ ಮೂಲಕ ಜನತೆಯ ಮತ್ತು ನಾಯಕರ ಕೊಲೆಗಡುಕರಾರೆಂಬುದು ದೇಶದ ಮುಂದೆ ಬಯಲಾದಂತಾಗಿದೆಯೆಂದು ಸಿಪಿಐ(ಎಂ) ಹೇಳಿದೆ. ●

ನಾಳಿನ ಕಾರ್ಯಕ್ರಮಗಳು

1. **ಸಮಾಜವಾದಿ ಕ್ರಾಂತಿ ಮತ್ತು ಮಹಿಳೆ: ಮಾರ್ಚ್ 12, ಬೆಂಗಳೂರು**
   ಜನವಾದಿ ಮಹಿಳಾ ಸಂಘಟನೆ, ಸಮಾಜವಾದಿ ಕ್ರಾಂತಿ ಶತಮಾನೋತ್ಸವ ಸಮಿತಿ ಮತ್ತು ಇತರ ಸಂಘಟನೆಗಳ ಜತೆ ಜಂಟಿಯಾಗಿ,
2. **ರಾಜ್ಯ ಮಟ್ಟದ ಉದ್ಯೋಗ ಖಾತ್ರಿ ಸಮಾವೇಶ: ಏಪ್ರಿಲ್ 3, ಬೆಂಗಳೂರು.**
   ಕರ್ನಾಟಕ ಪ್ರಾಂತ ರೈತ ಸಂಘ, ಇತರ ಸಂಘಟನೆಗಳ ಜತೆ ಜಂಟಿಯಾಗಿ
3. **ದಲಿತ ಹಕ್ಕುಗಳ ಸಮಿತಿಯ ರಾಜ್ಯಮಟ್ಟದ ಶಾಲೆ, ಎಪ್ರಿಲ್ 14–16, ಹೊಸಪೇಟೆ (ಬಳ್ಳಾರಿ) ಅಂಬೇಡ್ಕರ್ 125 ವರ್ತಮಾನದ ಜತೆ ಮರುಓದು – ವಿಶೇಷ ಉಪನ್ಯಾಸ ಮಾಲೆ ಸಮಾರೋಪ ಎಪ್ರಿಲ್ 16, ಬೆಂಗಳೂರು**
   ಸಮುದಾಯ ಕರ್ನಾಟಕ ಇತರ ಸಂಘಟನೆಗಳ ಜತೆ ಜಂಟಿಯಾಗಿ
4. **ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯ ಸಮ್ಮೇಳನ**
   ಏಪ್ರಿಲ್ 25–27, ಹುಬ್ಬಳ್ಳಿ

ಕೊಲ್ಲಹಳ್ಳಿಯ ವಸತಿ ರಹಿತರಿಗೆ ಅಡ್ಡಗಾಲು ಹಾಕುತ್ತಿರುವ ಬಿಜೆಪಿ ಗುರುದೇವ್ ಮತ್ತು ಜೆಡಿ-ಎಸ್ ಸುಪ್ರದೀಪ್ತ

(ಸಿಐಟಿಯು ಹಾಸನ ಜಿಲ್ಲಾ ಸಮಿತಿ ಮತ್ತಿತರ ದಲಿತ-ಪ್ರಗತಿಪರ ಸಂಘಟನೆಗಳ ಪತ್ರಿಕಾ ಹೇಳಿಕೆ)

ಸಕಲೇಶಪುರ ತಾಲ್ಲೂಕು ಮಳಲಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಕೊಲ್ಲಹಳ್ಳಿ ಗ್ರಾಮದ ದಲಿತರಿಗೆ ಹಾಗೂ ಬಡವರಿಗೆ ಮನೆ ಕಟ್ಟಿಕೊಳ್ಳಲು ನಿವೇಶನ ಸಿಗದಂತೆ ಬಿಜೆಪಿ ಮುಖಂಡ ಬಿ.ಆರ್. ಗುರುದೇವ್ ಹಾಗೂ ಜೆಡಿಎಸ್‌ನ ಜಿಲ್ಲಾ ಪಂಚಾಯತಿ ಸದಸ್ಯ ಸುಪ್ರದೀಪ್ತ ಯಜಮಾನ್ ಪಿತೂರಿ ನಡೆಸುತ್ತಿದ್ದಾರೆ ಹಾಗೂ ಹೇಗಾದರೂ ಮಾಡಿ ಗ್ರಾಮತಾಣಾ ಜಾಗದ ಮೇಲೆ ಹಿಡಿತ ಸಾಧಿಸಲು ಪ್ರಯತ್ನ ನಡೆಸುತ್ತಿರುವುದನ್ನು ನಾವು ಖಂಡಿಸುತ್ತೇವೆ.

ಕೊಲ್ಲಹಳ್ಳಿ ಗ್ರಾಮದ ದಲಿತ, ಅಲ್ಪಸಂಖ್ಯಾತ ಮತ್ತು ಬಡ ಮನೆ ಮತ್ತು ನಿವೇಶನ ರಹಿತರು ಹಲವು ತಿಂಗಳಿಂದ ಕೊಲ್ಲಹಳ್ಳಿ ಗ್ರಾಮದ 2ಎಕರೆ 13ಗುಂಟೆ ಗ್ರಾಮ ಠಾಣಾ ಜಾಗದಲ್ಲಿ ಮನೆ, ನಿವೇಶನ ನೀಡುವಂತೆ ಹೋರಾಟ ನಡೆಸುತ್ತಿದ್ದಾರೆ. ಅವರ ಹೋರಾಟಕ್ಕೆ ಮಣಿದ ಮಳಲಿ ಗ್ರಾಮ ಪಂಚಾಯತಿಯು ಅರ್ಹ ಮನೆ, ನಿವೇಶನ ರಹಿತರಿಂದ ಅರ್ಜಿ ಆಹ್ವಾನಿಸಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಲು ಮುಂದಾಗಿದೆ. ಈ ಹಿನ್ನೆಲೆಯಲ್ಲಿ ಕೊಲ್ಲಹಳ್ಳಿ ಗ್ರಾಮದ ವಸತಿ ರಹಿತರು ಮಾರ್ಚ್ 2ರಂದು ಮಳಲಿ ಗ್ರಾ.ಪಂ.ಗೆ ಸಾಮೂಹಿಕವಾಗಿ ಅರ್ಜಿ ಸಲ್ಲಿಸುವ ಮುಖಾಂತರ ಅರ್ಹ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವ ಮುಖಾಂತರ ತಮ್ಮ ನಿರಂತರ ಧರಣಿ ಸತ್ಯಾಗ್ರಹವನ್ನು ಸ್ಥಗಿತಗೊಳಿಸಿದ್ದರು. ಪರಿಸ್ಥಿತಿ ಹೀಗಿದ್ದಾಗ ಮಾರ್ಚ್ 2ರ ರಾತ್ರಿ 1 ಗಂಟೆಯ ಸಮಯದಲ್ಲಿ ಸಕಲೇಶಪುರ ತಾಲ್ಲೂಕು ಹಾನ್‌ಬಾಳು ಜಿಲ್ಲಾ ಪಂಚಾಯತಿ ಕ್ಷೇತ್ರದ ಸದಸ್ಯ ಸುಪ್ರದೀಪ್ತ ಯಜಮಾನ್ ಮತ್ತು ಅವರ ಸಹಚರರಾದ ಎಪಿಎಂಸಿ ಸದಸ್ಯ ಕವನ್‌ಗೌಡ, ಅಭಿಷೇಕ್(ಸೊಳ್ಳೆ), ಪ್ರವೀಣ್ ಮತ್ತಿತರರು ಮದ್ಯಪಾನ ಮಾಡಿ ಏಕಾಏಕಿಯಾಗಿ ಬಡ ವಸತಿ ರಹಿತರು ನಿರ್ಮಿಸಿಕೊಂಡಿರುವ ಗುಡಿಸಲುಗಳಿಗೆ ನುಗ್ಗಿ ದಾಂಧಲೆ ನಡೆಸಿ ಜಾಗ ಖಾಲಿ ಮಾಡುವಂತೆ ಬೆದರಿಸಿ ದೌರ್ಜನ್ಯ ನಡೆಸಿರುತ್ತಾರೆ. ಜನರಿಂದ ಆಯ್ಕೆಯಾದ ಜನಪ್ರತಿನಿಧಿಯಾದ ಸುಪ್ರದೀಪ್ತ ಯಜಮಾನ್‌ರವರು ಜವಾಬ್ದಾರಿಯಿಂದ ವರ್ತಿಸದೆ ಅವರಿಗೆ ಸಂಬಂಧಿಸಿರದ ಕ್ಷೇತ್ರದ ವಿಷಯದಲ್ಲಿ ಅನಗತ್ಯ ಮದ್ಯಪ್ರವೇಶ ಮಾಡಿರುವುದಲ್ಲದೆ ಮದ್ಯರಾತ್ರಿಯ ಸಮಯದಲ್ಲಿ ತಮ್ಮ ಸಹಚರರೊಂದಿಗೆ ಮಧ್ಯಪಾನ ಮಾಡಿ ದಲಿತರು ಹಾಗೂ ಬಡವರನ್ನು ಹೆದರಿಸಿ, ಗೂಂಡಾಗಿರಿ ಮಾಡಿ, ದೌರ್ಜನ್ಯ ನಡೆಸಿ ಅತ್ಯಂತ ಅನಾಗರಿಕವಾಗಿ ದಲಿತ ಮತ್ತು ಜನಪರ ಸಂಘಟನೆಗಳು ತೀವ್ರವಾಗಿ ಖಂಡಿಸುತ್ತವೆ. ಪೋಲೀಸರ ಸಕಾಲಿಕ ಮದ್ಯಪ್ರವೇಶದಿಂದಾಗಿ ನಡೆಯಬಹುದಾಗಿದ್ದ ಅನಾಹುತ ತಪ್ಪಿದೆ. ಕುಡಿದು ಗೂಂಡಾಗಿರಿ ನಡೆಸಿದವರನ್ನು ಪೋಲೀಸರು ಅಂದು ರಾತ್ರಿಯೇ ವಶಕ್ಕೆ ಪಡೆದು ವೈದ್ಯಕೀಯ ತಪಾಸಣೆಗೊಳಪಡಿಸಿ ಪ್ರಕರಣ ದಾಖಲಿಸಿಕೊಂಡು ಬಡವರಿಗೆ ರಕ್ಷಣೆ ನೀಡಿರುವುದು ಪ್ರಶಂಶನೀಯ.

ಆರಂಭದಿಂದಲೂ ಕೊಲ್ಲಹಳ್ಳಿಯ ಗ್ರಾಮ ಠಾಣಾ ಜಾಗದಲ್ಲಿ ವಸತಿ ರಹಿತರಿಗೆ ನಿವೇಶನ ನೀಡುವ ವಿಚಾರದಲ್ಲಿ ಆ ಜಾಗದಲ್ಲಿ ಬಡವರಿಗೆ ನಿವೇಶನ ನೀಡದಂತೆ ಗ್ರಾಮ ಪಂಚಾಯತಿಯ ಪರೋಕ್ಷವಾಗಿ ಕೆಲವು ಶಕ್ತಿಗಳು ಒತ್ತಡ ಹೇರುತ್ತಲೇ ಇದ್ದವು. ಮಳಲಿ ಗ್ರಾಮ ಪಂಚಾಯತಿ ಹಿಂದೆ ನ್ಯಾಯಾಲಯಕ್ಕೆ ಸಲ್ಲಿಸಿದ್ದ ಪ್ರಮಾಣ ಪತ್ರದಲ್ಲಿರುವಂತೆ ಕೊಲ್ಲಹಳ್ಳಿಯ ಗ್ರಾಮ ಠಾಣಾ ಜಾಗದಲ್ಲಿ ವಸತಿ ರಹಿತರಿಗೆ ನಿವೇಶನ ನೀಡುವ ಬದಲಿಗೆ ಆ ಜಾಗದಲ್ಲಿ ಶಾಲಾ ಕಾಲೇಜು ಜೊತೆಗೆ ಇನ್ನಿತರೆ ವಾಣಿಜ್ಯ ಉದ್ದೇಶಗಳಿಗೆ ಬಳಸಿಕೊಳ್ಳುವ ಕುರಿತು ಗ್ರಾ.ಪಂ. ನಿರ್ಣಯ ಮಾಡಿಸಲು ಕೆಲವು ಶಕ್ತಿಗಳು ಯಶಸ್ವಿಯಾಗಿದ್ದವು. ಈ ಹಿನ್ನೆಲೆಯಲ್ಲಿ ಅಲ್ಲಿನ ಬಡವರು ಪ್ರತಿಭಟನೆ ಆರಂಭಿಸಿದ್ದರು. ಬಡವರ ಹೋರಾಟವನ್ನು ಹೆದರಿಸಿ ದಿಕ್ಕುತಪ್ಪಿಸಿ ಅವರನ್ನು ಅಲ್ಲಿಂದ ಒಕ್ಕಲೆಬ್ಬಿಸುವ ದುರುದ್ದೇಶದಿಂದ ಫೆಬ್ರವರಿ 18ರ ಮದ್ಯರಾತ್ರಿ ಬಡವರ ಗುಡಿಸಲುಗಳಿಗೆ ಬೆಂಕಿ ಹಾಕಿ ಪೆಟ್ರೋಲ್ ಬಾಂಬ್‌ಗಳನ್ನು ಹಾಕಲಾಗಿತ್ತು. ಸಧ್ಯ ಯಾವುದೇ ಪ್ರಾಣಾಪಾಯವಿಲ್ಲದೆ ಅಲ್ಲಿಯ ಬಡವರು ಪಾರಾಗಿದ್ದರು. ಪೋಲೀಸರು ಈ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದರು. ಇಷ್ಟೆಲ್ಲಾ ಆದರೂ ಬಡವರ ಹೋರಾಟ ನಿಂತಿರಲಿಲ್ಲ. ಕೊನೆಗೆ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಜಿಲ್ಲಾ ಪಂಚಾಯತಿಯ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಸೂಕ್ತ ಮದ್ಯಪ್ರವೇಶದಿಂದಾಗಿ ಬಡವರಿಗೆ ನಿವೇಶನ ದೊರಕಿಸಿಕೊಡುವ ನಿಟ್ಟಿನಲ್ಲಿ ಗ್ರಾಮ ಪಂಚಾಯತಿ ನಿಯಮಾನುಸಾರ ಪ್ರಕ್ರಿಯೆ ಆರಂಭಿಸಿದ್ದರಿಂದ ಆ ಜಾಗದ ಮೇಲೆ ಹಿಡಿತ ಸಾಧಿಸಲು ಅದುವರೆಗೂ ತೆರೆಮರೆಯಲ್ಲಿ ಪ್ರಯತ್ನ ನಡೆಸುತ್ತಿದ್ದ ಶಕ್ತಿಗಳಿಗೆ ಸಹಜವಾಗಿಯೇ ಹಿನ್ನಡೆ-ಯಾಗಿದೆ.

ಈ ಹಿನ್ನೆಲೆಯಲ್ಲಿಯೇ ಜಿಲ್ಲಾ ಪಂಚಾಯತಿ ಸದಸ್ಯ ಸುಪ್ರದೀಪ್ತ ಯಜಮಾನ್‌ರವರು ತಮ್ಮ ಸಹಚರರೊಂದಿಗೆ ಮದ್ಯರಾತ್ರಿಯಲ್ಲಿ ಕುಡಿದುಬಂದು ಗೂಂಡಾಗಿರಿ ನಡೆಸಿ ಬಡವರನ್ನು ಹೆದರಿಸಿ ಹಲ್ಲೆ ನಡೆಸಿ ಅಲ್ಲಿಂದ ಓಡಿಸಲು ಪ್ರಯತ್ನಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಫೆಬ್ರವರಿ 18ರ ರಾತ್ರಿ ಗುಡಿಸಲಿಗೆ ಬೆಂಕಿಹಾಕಿ ಪೆಟ್ರೋಲ್ ಬಾಂಬ್ ಹಾಕಿರುವವರೂ ಸಹ ಇವರೇ ಎನ್ನುವುದು ಸಾಭೀತಾದಂತಾಗಿದೆ. ಒಬ್ಬ ಜವಾಬ್ದಾರಿಯುತ ಜನಪ್ರತಿನಿಧಿಯಗಿ ದಲಿತರ, ಬಡವರ, ನೊಂದವರ ಹೋರಾಟಕ್ಕೆ ಬೆಂಬಲವಾಗಿ ನಿಲ್ಲುವ ಬದಲು ದಲಿತರು ಮತ್ತು ಬಡವರ ಮೇಲೆ ಗೂಂಡಾಗಳಿಂದ ದಾಳಿ ನಡೆಸಿ ದೌರ್ಜನ್ಯ ನಡೆಸಿರುವುದು ಅತ್ಯಂತ ಅಕ್ಷಮ್ಯ ಅಪರಾಧವಾಗಿದೆ. ಈ ಘಟನೆಯನ್ನು ಖಂಡಿಸಿ ಹಾಗೂ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಮಾರ್ಚ್ 3ರಂದು ಸಕಲೇಶಪುರದಲ್ಲಿ ದಲಿತ ಮತ್ತು ಜನಪರ ಮತ್ತು ಸಂಘಟನೆಗಳು ಪ್ರತಿಭಟನೆ ನಡೆಸಿ ಸಕಲೇಶಪುರ ಉಪ ವಿಭಾಗಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ. ಹಾಗೂ ಈ ಪ್ರಕರಣ-ಕ್ಕೆ ಸಂಬಂಧಿಸಿದಂತೆ ಪೋಲೀಸು ಇಲಾಖೆಗೆ ಈಗಾಗಲೇ ದೂರು ದಾಖಲಿಸಲಾಗಿದೆ. ಪೋಲೀಸರು ಕೂಡಲೆ ಸುಪ್ರದೀಪ್ತ ಯಜಮಾನ್ ಮತ್ತು ಆತನ ಸಹಚರರ ವಿರುದ್ಧ ಎಸ್‌ಸಿ/ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆ, ಗೂಂಡಾ ಕಾಯ್ದೆ ಅಡಿಯಲ್ಲಿ ಕೇಸು ಹಾಕಿ ಎಫ್‌ಐಆರ್ ದಾಖಲಿಸಿ ಕೂಡಲೇ ಅವರನ್ನು ಬಂಧಿಸಬೇಕೆಂದು ಹಾಗೂ ಸುಪ್ರದೀಪ್ತ ಯಜಮಾನ್‌ರವರನ್ನು ಜಿಲ್ಲಾ ಪಂಚಾಯತ್ ಸ್ಥಾನದಿಂದ ಹಾಗೂ ಕವನ್‌ಗೌಡ ಇವರ ಎಪಿಎಂಸಿ ಸ್ಥಾನದಿಂದ ಅನರ್ಹಗೊಳಿಸಬೇಕೆಂದು ಈ ಮೂಲಕ ಒತ್ತಾಯಿಸುತ್ತೇವೆ.

ಬಿಜೆಪಿ ಮುಖಂಡ ಹಾಗೂ ಮಾಜಿ ಶಾಸಕ ಬಿ.ಆರ್. ಗುರುದೇವ್ ಮತ್ತು ಜೆಡಿಎಸ್‌ನ ಜಿಲ್ಲಾ ಪಂಚಾಯತ್ ಸದಸ್ಯ ಸುಪ್ರದೀಪ್ತ ಯಜಮಾನ್‌ರವರು ಮಾರ್ಚ್ 4ರಂದು ಸಕಲೇಶಪುರದಲ್ಲಿ ಕೊಲ್ಲಹಳ್ಳಿಯ ದಲಿತ ಮತ್ತು ಬಡ ವಸತಿ ರಹಿತರ ವಿರುದ್ಧ ಪ್ರತಿಭಟನೆ ನಡೆಸಿ ಅವರನ್ನು ಅಲ್ಲಿಂದ ತೆರವುಗೊಳಿಸುವಂತೆ ಆಗ್ರಹಿಸಿದ್ದಾರೆ. ಹಾಗೂ ಆ ಜಾಗದಲ್ಲಿ ಶಾಲೆ, ಕಾಲೇಜು ಕ್ರೀಡಾಂಗಣ ನಿರ್ಮಿಸಬೇಕೆಂದು ಒತ್ತಾಯಿಸಿದ್ದಾರೆ. ಇದರ ವಾಸ್ತವಾಂಶ ಏನೆಂದರೆ, ಈ ಹಿಂದೆ ಕೊಲ್ಲಹಳ್ಳಿಯ ಮನೆ ಇಲ್ಲದ ಬಡವರಿಗಾಗಿ ಅತಿಕ್ರಮಿತ ಗ್ರಾಮತಾಣಾ ಜಾಗವನ್ನು ತೆರವುಗೊಳಿಸುತ್ತಿರುವುದಾಗಿ ನ್ಯಾಯಾಲಯಕ್ಕೆ ಪ್ರಮಾಣ ಪತ್ರ ಸಲ್ಲಿಸಿದ್ದ ಗ್ರಾ.ಪಂ. ಕೊನೆಗೆ ಆ ಜಾಗದಲ್ಲಿ ಶಾಲೆ, ಕಾಲೇಜು, ವಾಣಿಜ್ಯ ಸಂಕೀರ್ಣ ಇತ್ಯಾದಿ ನಿರ್ಮಾಣಕ್ಕೆ ಕಾಯ್ದಿರಿಸಿ ನಿರ್ಣಯ ಮಾಡಲಾಯಿತು. ಗ್ರಾ.ಪಂ.ನ ಈ ನಿರ್ಣಯದ ಹಿಂದೆ ಇದೇ ಸುಪ್ರದೀಪ್ತ ಯಜಮಾನ್, ಬಿ.ಆರ್. ಗುರುದೇವ್ ಹಾಗೂ ಇನ್ನಿತರೆ ಪ್ರಭಾವಿಗಳ ಒತ್ತಡ ಕೆಲಸ ಮಾಡಿದೆ. ಕಾರಣ ಗ್ರಾಮತಾಣಾ ಜಾಗದಲ್ಲಿ ಶಾಲೆ, ಕಾಲೇಜು, ಕ್ರೀಡಾಂಗಣ ನಿರ್ಮಿಸುವಷ್ಟು ಆರ್ಥಿಕ ಶಕ್ತಿ ಗ್ರಾ.ಪಂ.ಗೆ ಇರುವುದಿಲ್ಲ ಹಾಗೂ ಈಗ ಸರ್ಕಾರವೂ ಇಂತಹ ಕೆಲಸಗಳಿಗೆ ಮುಂದಾಗುವುದಿಲ್ಲ ಸರ್ಕಾರಕ್ಕೆ ಇವೆಲ್ಲ ಆದ್ಯತೆಯೂ ಅಲ್ಲ. ಪರಿಸ್ಥಿತಿ ಹೀಗಿರುವಾಗ ಶಾಲೆ, ಕಾಲೇಜು, ಕ್ರೀಡಾಂಗಣ, ಆಸ್ಪತ್ರೆ ಇತ್ಯಾದಿ ಹೆಸರಿನಲ್ಲಿ ಖಾಸಗಿ ಸಂಸ್ಥೆ, ಖಾಸಗಿ ಕಂಪನಿ, ಧಾರ್ಮಿಕ ಸಂಸ್ಥೆ - ಮಠ ಇತ್ಯಾದಿಗಳ ಹೆಸರಿನಲ್ಲಿ ಖಾಸಗಿ ಶಕ್ತಿಗಳು ಸಾರ್ವಜನಿಕ ಆಸ್ತಿಯಾದ ಬೆಲೆಬಾಳುವ ಗ್ರಾಮತಾಣಾ ಜಾಗವನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳುವ ಹುನ್ನಾರದ ಭಾಗವಾಗಿಯೇ ಈ ರೀತಿ ನಿರ್ಣಯ ಮಾಡಿಸಲಾಗಿದೆ ಎನ್ನುವುದು ಸ್ಪಷ್ಟವಾಗಿದೆ. ಇದನ್ನು ವಿರೋಧಿಸಿಯೇ ಕೊಲ್ಲಹಳ್ಳಿಯ ಬಡವರು ಹೋರಾಟಕ್ಕಿಳಿಯಬೇಕಾಯಿತು.

ಅಲ್ಲದೆ, ಕೊಲ್ಲಹಳ್ಳಿಯ 2ಎಕರೆ 13ಗುಂ-ಟೆ ಗ್ರಾಮತಾಣಾ ಜಾಗವನ್ನು ಈ ಹಿಂದೆ ಆಕ್ರಮಿಸಿಕೊಂಡು ಕಾಫಿತೋಟ ಮಾಡಿಕೊಂಡಿದ್ದವರು ಮಾಜಿ ಶಾಸಕ ಹಾಗೂ ಬಿಜೆಪಿ ಮುಖಂಡ ಬಿ.ಆರ್. ಗುರುದೇವ್‌ರವರ ಸಹೋದರರಾದ ಬಿ.ಆರ್. ಬಸವರಾಜ್‌ರವರು ಅವರ ತಮ್ಮ ಆಕ್ರಮಿಸಿಕೊಂಡ ಜಾಗವನ್ನು ಬಿಡಿಸಿದ್ದಕ್ಕಾಗಿಯೇ ಬಿ.ಆರ್. ಗುರುದೇವ್‌ರವರು ಸಹಜವಾಗಿಯೇ ಬಡವರು ಹಾಗೂ ದಲಿತರ ವಿರುದ್ಧ ನಿಂತಿದ್ದಾ-ರೆ. ಸಾರ್ವಜನಿಕರ ಹಿತಕ್ಕಾಗಿ ಶಾಲೆ, ಕಾಲೇಜು, ಕ್ರೀಡಾಂಗಣ ಇತ್ಯಾದಿ ನಿರ್ಮಿಸುವಂತಹ ಸದುದ್ದೇಶ ಹೊಂದಿರುವ ಬಿ.ಆರ್. ಗುರುದೇವ್, ಸುಪ್ರದೀಪ್ತ ಯಜಮಾನ್ ಮತ್ತು ಅವರ ಹಿಂದಿರುವ ಕೆಲವು ಪ್ರಭಾವಿಗಳು ಅವರು ಈಗ ಅನಧಿಕೃತವಾಗಿ ಆಕ್ರಮಿಸಿಕೊಂಡಿರುವ ಗ್ರಾಮತಾಣಾ ಜಾಗ ಅಥವಾ ಸರ್ಕಾರಿ ಜಾಗದಲ್ಲಿಯೇ ನಿರ್ಮಿಸಲು ಆ ಜಾಗಗಳನ್ನು ಬಿಟ್ಟುಕೊಡಬಹುದು ಆದರೆ ಅದನ್ನು ಮಾಡದೆ ದಲಿತರು ಹಾಗೂ ಬಡವರು ಸ್ವಂತ ಸೂರು ನಿರ್ಮಿಸಿಕೊಳ್ಳಲು ನಿವೇಶನಕ್ಕಾಗಿ ಕಾಯುತ್ತಿರುವ ಜಾಗವನ್ನು ಕಬಳಿಸಲು ಹೊಂಚುಹಾಕುತ್ತಿರುವುದು ಖಂಡನೀಯವಾದುದು. ಈ ಹಿನ್ನೆಲೆಯಲ್ಲಿ ಬಿಜೆಪಿ ಮತ್ತು ಜೆಡಿಎಸ್ ಪಕ್ಷ ತಮ್ಮ ನಿಲುವನ್ನು ಸಾರ್ವಜನಿಕವಾಗಿ ಬಹಿರಂಗಪಡಿಸಬೇಕೆಂದು ನಾವು ಈ ಮೂಲಕ ಒತ್ತಾಯಿಸುತ್ತಿದ್ದೇವೆ.

ಅಲ್ಲದೆ, ಆ ಕ್ಷೇತ್ರದ ಶಾಸಕರಾದ ಶ್ರೀ ಎಚ್.ಕೆ. ಕುಮಾರಸ್ವಾಮಿಯವರು ಇಷ್ಟೆಲ್ಲಾ ಆದರೂ ಕೊಲ್ಲಹಳ್ಳಿಯ ದಲಿತರು ಮತ್ತು ಬಡವರ ಹೋರಾಟದ ಬಗ್ಗೆ ತಮ್ಮ ನಿಲುವನ್ನು ಸ್ಪಷ್ಟಪಡಿಸಿರುವುದಿಲ್ಲ. ಮೀಸಲು ಕ್ಷೇತ್ರದ ಶಾಸಕರಾದಂತಹವರು ದಲಿತರು ಹಾಗೂ ಬಡವರ ಮೇಲೆ ದೌರ್ಜನ್ಯ ನಡೆಯುತ್ತಿದ್ದರೂ ಏನೂ ಆಗಿಲ್ಲವೆಂಬಂತೆ ಸುಮ್ಮನಿರುವುದನ್ನು ನೋಡಿದರೆ ಸುಪ್ರದೀಪ್ತ ಯಜಮಾನ್‌ರವರಿಗೆ ಶಾಸಕ ಎಚ್.ಕೆ. ಕುಮಾರಸ್ವಾಮಿಯವರೇ ಬೆಂಬಲಿಕ್ಕಿದ್ದಾರೆಯೆ ಎನ್ನುವ ಅನುಮಾನ ನಮ್ಮನ್ನು ಕಾಡುತ್ತಿದೆ. ಆದ್ದರಿಂದ ಕೂಡಲೇ ಶಾಸಕ ಎಚ್.ಕೆ. ಕುಮಾರಸ್ವಾಮಿಯವರು ಕೊಲ್ಲಹಳ್ಳಿಯ ದಲಿತರ ರಕ್ಷಣೆಗೆ ಮುಂದಾಗಬೇಕೆಂದು ನಮ್ಮ ಮನವಿಯಾಗಿದೆ. ಸಕಲೇಶಪುರದ ಮಾಜಿ ಶಾಸಕರಾದ ಎಚ್.ಎಂ. ವಿಶ್ವನಾಥ್ ಸಹ ಈ ಬಗ್ಗೆ ಮೌನವಾಗಿದ್ದಾರೆ. ಕಾಂಗ್ರೇಸ್ ಪಕ್ಷವೂ ಸಹ ಇದುವರೆಗೆ ಪ್ರತಿಕ್ರಿಯಿಸದಿರುವುದನ್ನು ನೋಡಿದ-ರೆ ಬಡವರ ವಿರುದ್ಧ ಎಲ್ಲಾ ಶ್ರೀಮಂತರೂ ಒಟ್ಟಾಗಿರುವಂತಿದೆ.

ಕೊಲ್ಲಹಳ್ಳಿಯ ವಸತಿ ನಿವೇಶನ ರಹಿತರಿಂದ ಗ್ರಾ.ಪಂ. ಅರ್ಜಿ ಸ್ವೀಕರಿಸುವಂತೆ ಮಾಡಿರುವ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಜಿ.ಪಂ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಅಲ್ಲಿಯ ಬಡವರು ಕೃತಜ್ಞತೆ ಸಲ್ಲಿಸುತ್ತಾರೆ. ಆದ-ರೆ, ಆ ಜಾಗದಿಂದ ಅವರನ್ನು ಒಕ್ಕಲೆಬ್ಬಿಸುವ ಪ್ರಯತ್ನ ಮಾಡಬಾರದೆಂದು ನಾವು ಮನವಿ ಮಾಡಿಕೊಳುತ್ತಿದ್ದೇವೆ. ಉಸ್ತುವಾರಿ ಸಚಿವರು ನಾನು ಕೊಲ್ಲಹಳ್ಳಿಯ ವಸತಿ ರಹಿತರ ಪರವಾಗಿದ್ದೇನೆ ಎಂದು ಹೇಳುತ್ತಿದ್ದಾರೆಯೇ ಹೊರತು ಆ ಸ್ಥಳಕ್ಕೆ ಬೇಟಿ ನೀಡಿ ಬಡವರಿಗೆ ಧೈರ್ಯ ತುಂಬುವ ಕೆಲಸ ಮಾಡುತ್ತಿಲ್ಲ. ಉಸ್ತುವಾರಿ ಸಚಿವರು ಮುತುವರ್ಜಿ ವಹಿಸಿ ಜಿ.ಪಂ. ಸಿಇಓ, ತಾ.ಪಂ. ಇಓ ಮತ್ತು ಗ್ರಾ.ಪಂ. ಅಧಿಕಾರಿಗಳು, ಚುನಾಯಿತ ಪ್ರತಿನಿಧಿಗಳು ಹಾಗೂ ವಸತಿ ರಹಿತರ ಸಭೆ ಕರೆದು ಮಾತನಾಡಿದರೆ ಸಮಸ್ಯೆಯ ಇತ್ಯರ್ಥಕ್ಕೆ ಸಹಾಯಕವಾಗುತ್ತದೆ. ಅದು ಬಿಟ್ಟು ಮೇಲ್ಮಟ್ಟದ ಹೇಳಿಕೆಗಳಿಂದ ಯಾವುದೇ ಪ್ರಯೋಜನವಾಗುವುದಿಲ್ಲ. ಇದನ್ನು ಮಾಡದೆ, ಹಾಗೂ ಕೊಲ್ಲಹಳ್ಳಿ ಗ್ರಾಮತಾಣಾ ಜಾಗವನ್ನು ವಸತಿರಹಿತರ ನಿವೇಶನಕ್ಕೆ ಕಾಯ್ದಿರಸದೆ ಅಲ್ಲಿ ಗುಡಿಸಲು ಹಾಕಿಕೊಂಡಿರುವವರನ್ನು ಒಕ್ಕಲೆಬ್ಬಿಸಲು ಹೊರಡುವುದು ನಾವು ಖಂಡಿತವಾಗಿಯೂ ವಿರೋಧಿಸುತ್ತೇವೆ. ಹಾಗೂ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಕೂಡಲೇ ಕೊಲ್ಲಹಳ್ಳಿ ಗ್ರಾಮ ಠಾಣಾ ಜಾಗವನ್ನು ಶಾಲೆ, ಕಾಲೇಜು ನಿರ್ಮಾಣಕ್ಕೆ ಮೀಸಲಿಡುವುವ ಮಳಲಿ ಗ್ರಾ.ಪಂ. ನಿರ್ಣಯವನ್ನು ವಜಾ ಮಾಡಬೇಕೆಂದು ಈ ಮೂಲಕ ಒತ್ತಾಯಿಸುತ್ತಿದ್ದೇವೆ.

ಅಂಕೋಲಾ : ಅರಣ್ಯ ಅತಿಕ್ರಮಣ ಹಕ್ಕಿಗಾಗಿ ಜಂಟಿ ಚಳವಳಿ – ಶಾಂತಾರಾಮ ನಾಯಕ



ಈ ಹಿಂದೆ ಜಾರಿಯಾಗಿದ್ದ ಕಸ್ತೂರಿ ರಂಗನ್ ವರದಿ ವಿರೋಧಿಸಿ ಪ್ರತಿಭಟನೆ ನಡೆಸಿದ ಹಿನ್ನೆಲೆಯಲ್ಲಿ ಅದನ್ನು ಸ್ಥಗಿತಗೊಳಿಸಲಾಗಿತ್ತು. ಈಗ ಮತ್ತೆ ಪುನಃ ಜಾರಿಗೊಳಿಸಲು ಸರ್ಕಾರ ಮುಂದಾಗಿದೆ. ಇದು ಮಾನವ ವಿರೋಧಿಯಾಗಿದ್ದು, ಅತಿಕ್ರಮಣ ಸಕ್ರಮಕ್ಕೆ ಮಾರಕವಾಗಲಿದೆ. ಅಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಮಾಡುವಂತಿಲ್ಲ. ಜನಪ್ರತಿನಿಧಿಗಳು ಚುನಾವಣೆಯ ಸಂದರ್ಭದಲ್ಲಿ ಅಕ್ರಮ ಸಕ್ರಮದ ಬಗ್ಗೆ ಮಾತನಾಡುವುದನ್ನು ಅರ್ಘುಂಡಾ ಮಾಡಿಕೊಂಡಿದ್ದಾರೆ ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಶಾಂತಾರಾಮ ನಾಯಕ ಹೇಳಿದರು.

ಪಟ್ಟಣದ ತಾಲ್ಲೂಕು ಪಂಚಾಯ್ತಿ ಸಭಾಭವನದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ ಹಮ್ಮಿಕೊಂಡ 3ನೇ ತಾಲ್ಲೂಕು ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು. ಜಿಲ್ಲೆಯಲ್ಲಿ ಈಗಾಗಲೇ 20 ಸಾವಿರಕ್ಕೂ ಅಧಿಕ ಅರಣ್ಯ ಅತಿಕ್ರಮಣದಾರರ ಅರ್ಜಿಗಳನ್ನು ತಿರಸ್ಕರಿಸಲಾಗಿದ್ದು, ಇವರಿಗೆ ನ್ಯಾಯ ಒದಗಿಸುವುದಕ್ಕಾಗಿ ಜಿಲ್ಲೆಯಲ್ಲಿರುವ ವಿವಿಧ ಹೋರಾಟ ಸಮಿತಿಗಳನ್ನು ಒಗ್ಗೂಡಿಸಿ ಒಂದು ಸಂಘ ರಚಿಸಿ ಆ ಮೂಲಕ 20 ಸಾವಿರದಷ್ಟು ಜನರನ್ನು ಸೇರಿಸಿ ಜಿಲ್ಲಾಧಿಕಾರಿಗಳ ಕಚೇರಿ ಎದುರು ಧರಣಿ ಮಾಡಲು ನಿರ್ಧರಿಸಲಾಗಿದೆ. ಏಪ್ರಿಲ್ 9-10 ರಂದು ಜಿಲ್ಲಾ ಮಟ್ಟದ ಸಮ್ಮೇಳನ ನಡೆಯಲಿದೆ. ಅಲ್ಲಿ ಇನ್ನೂ ಮಹತ್ವದ ವಿಚಾರಗಳು ಚರ್ಚೆಗೆ ಬರಲಿದೆ ಎಂದು ಶಾಂತಾರಾಮ ನಾಯಕ ತಿಳಿಸಿದರು.

ಜಿ.ಎಸ್.ಟಿ: ಒಕ್ಕೂಟ ತತ್ವಕ್ಕೆ ದಕ್ಕೆ?



ಪ್ರೊ. ಟಿ. ಆರ್.ಚಂದ್ರಶೇಖರ್

ಇಂದು ದೇಶಾದ್ಯಂತ ಜಿ.ಎಸ್.ಟಿ(ಗೂಡ್ಸ್ ಆಂಡ್ ಸರ್ವೀಸ್ ಟ್ಯಾಕ್ಸ್) ಯ ಆರಾಧನೆ ನಡೆದಿದೆ. ಸ್ವಾತಂತ್ರ್ಯಾನಂತರ ನಡೆದ ಒಂದು ಬೃಹತ್ ಆರ್ಥಿಕ ಸುಧಾರಣಾ ಸಾಧನೆ ಅನ್ನುವ ರೀತಿಯಲ್ಲಿ ಇದನ್ನು ಬಣ್ಣಿಸಲಾಗುತ್ತಿದೆ. ಸ್ವಾತಂತ್ರ್ಯಾನಂತರ ತೆರಿಗೆ ಸು ಧಾರಣೆಗೆ ಸಂಬಂಧಿಸಿದಂತೆ ಇದು ಆಮೂಲಾಗ್ರ ಬದಲಾವಣೆ ಎಂದು ಹೇಳಲಾಗುತ್ತಿದೆ. ಇದು ಒಂದು ರೀತಿಯಲ್ಲಿ 'ಹೆತ್ತವರಿಗೆ ಹೆಗ್ಗಣ ಮುದ್ದು' ಅನ್ನುವಂತಿದೆ. ಈ ಕ್ರಮದಿಂದ ದೇಶದಲ್ಲಿ ಒಂದು ಏಕೀಕೃತ ರಾಷ್ಟ್ರೀಯ ಮಾರುಕಟ್ಟೆ ಅಸ್ತಿತ್ವಕ್ಕೆ ಬರುತ್ತದೆ ಎಂದು ಘೋಷಿಸಲಾಗುತ್ತಿದೆ. ಹಾಗಾದರೆ ಇದುವರೆವಿಗೂ ದೇಶದಲ್ಲಿ ಇದ್ದುದು ಅ-ರಾಷ್ಟ್ರೀಯ ಮಾರುಕಟ್ಟೆಯೆ? ಇದುವರೆವಿಗೂ ಇದ್ದುದನ್ನು 'ಭಯೋತ್ಪಾದಕ ತೆರಿಗೆ ವ್ಯವಸ್ಥೆ' ಎಂದೂ ವರ್ಣಿಸಲಾಗುತ್ತಿದೆ. ಹಾಗಾದರೆ ಅಲ್ಲಿ ಭಯೋತ್ಪಾದಕರು ಯಾರು? ಸರ್ಕಾರವೇ! ಅದಕ್ಕೆ ಬಲಿಯಾಗುತ್ತಿದ್ದವರು ಉದ್ದಿಮೆಪತಿಗಳೆ/ನಾಗರಿಕರೆ!

ಹೊಸ ರಾಷ್ಟ್ರೀಯ ತೆರಿಗೆಯಾದ ಜಿ.ಎಸ್.ಟಿ.ಯನ್ನು ವಾಣಿಜ್ಯ-ವ್ಯಾಪಾರಿ ವಲಯವು ಇನ್ನಿಲ್ಲದಂತೆ ಹೊಗಳುತ್ತಿದೆ-ಸ್ವಾಗತಿಸುತ್ತಿದೆ. ಇಂದು ಇದನ್ನು ಹೊಗಳದವರೇ ಇಲ್ಲ ಅನ್ನುವಂತಾಗಿದೆ. ಇದ-ರಿಂದ ತಮ್ಮ ಸ್ವಾಯತ್ತತೆಯನ್ನು ಕಳೆದುಕೊಳ್ಳುತ್ತಿರುವ ರಾಜ್ಯಗಳು ಸಹ ಇದನ್ನು ಯಾವುದೇ ಅನುಮಾನವಿಲ್ಲದೆ ಅನುಮೋದಿಸುತ್ತಿವೆ. ನಮ್ಮ ಸಂವಿಧಾನದ ಜೀವದ್ರವ್ಯವಾದ ಒಕ್ಕೂಟ ವ್ಯವಸ್ಥೆಗೆ ದಕ್ಕೆಯುಂಟಾಗುವ ಸಾಧ್ಯತೆಯ ಬಗ್ಗೆ ಯಾರೂ ಮಾತನಾಡುತ್ತಿಲ್ಲ. ಮಾಧ್ಯಮವೂ ಸಹ ಜಿ.ಎಸ್.ಟಿ.ಗೆ ಬೆಂಬಲ ನೀಡುತ್ತಿರುವಂತೆ ಕಾಣುತ್ತಿದೆ. ಅರ್ಥಶಾಸ್ತ್ರಜ್ಞರೂ ತಮ್ಮ ಭಿನ್ನಾಭಿಪ್ರಾಯವನ್ನು ಮಂಡಿಸುತ್ತಿಲ್ಲ.

ನಮ್ಮ ಸಂವಿಧಾನದಲ್ಲಿ ತೆರಿಗೆಗಳನ್ನು ವಿಧಿಸುವ, ತೆರಿಗೆ ದರಗಳನ್ನು ನಿಗದಿ ಪಡಿಸುವ ಮತ್ತು ತೆರಿಗೆಗಳನ್ನು ಬದಲಾಯಿಸುವ ಅಧಿಕಾರವನ್ನು ಕೇಂದ್ರ ಮತ್ತು ರಾಜ್ಯಗಳಿಗೆ ಪ್ರತ್ಯೇಕವಾಗಿ ನೀಡಲಾಗಿದೆ. ರಾಜ್ಯಗಳು ತಮ್ಮ ಆರ್ಥಿಕ, ಸಾಮಾಜಿಕ, ಅಭಿವೃದ್ಧಿ ನೀತಿಗಳಿಗೆ ಅನುಗುಣವಾಗಿ ತೆರಿಗೆ ಉತ್ಪನ್ನವನ್ನು ಬಳಸಿಕೊಳ್ಳಬಹುದಾಗಿದೆ. ವಿಶೇಷ ನೈಸರ್ಗಿಕ ವಿಕೋಪಗಳನ್ನು ಎದುರಿಸಲು ಅಥವಾ ಜನಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಅವು ತೆರಿಗೆ ನೀತಿಯನ್ನು ಬದಲಾಯಿಸಿಕೊಳ್ಳಬಹುದು ಮತ್ತು ತೆರಿಗೆ ಉತ್ಪನ್ನವನ್ನು ಖರ್ಚು ಮಾಡಬಹುದು. ಇದು ರಾಜ್ಯಗಳ ಸ್ವಾಯತ್ತ ಅಧಿಕಾರ. ಇದಕ್ಕಾಗಿ ಸಂವಿಧಾನದಲ್ಲಿ ಕೇಂದ್ರ ಪಟ್ಟಿ, ರಾಜ್ಯ ಪಟ್ಟಿ ಮತ್ತು ಸಂಯುಕ್ತ ಪಟ್ಟಿ ಎಂಬ ಮೂರು ಪ್ರತ್ಯೇಕ ಜವಾಬ್ದಾರಿಗಳ ಹಂಚಿಕೆಯನ್ನು ಮಾಡಲಾಗಿದೆ. ಕೇಂದ್ರ ಮತ್ತು ರಾಜ್ಯಗಳಿಗೆ ಮಾತ್ರವಲ್ಲ, ಗ್ರಾಮ ಪಂಚಾಯತಿಗಳಿಗೆ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೂ ತೆ-ರಿಗೆ ವಿಧಿಸುವ, ತೆರಿಗೆ ಉತ್ಪನ್ನವನ್ನು ಸಂಗ್ರಹಿಸಿಕೊಳ್ಳುವ ಮತ್ತು ಅದನ್ನು ವ್ಯಯಿಸುವ ಅಧಿಕಾರವನ್ನು ಸಂವಿಧಾನ ನೀಡಿದೆ. ಇದು ಸಂವಿಧಾನಾತ್ಮಕ ಅಧಿಕಾರ. ಒಕ್ಕೂಟ ವ್ಯವಸ್ಥೆಯಲ್ಲಿ ಅದರ ಎಲ್ಲ ಅಂಗಗಳಿಗೂ ಸಮಾನ ಅಧಿಕಾರಗಳಿರುತ್ತವೆ. ಆಗ ಮಾತ್ರ ಆರೋಗ್ಯಪೂರ್ಣ ಒಕ್ಕೂಟ ವ್ಯವಸ್ಥೆ ಸಾಧ್ಯ. ನಮ್ಮ ಸಂವಿಧಾನದಲ್ಲಿ ಅದರ ಎಲ್ಲ ಪಕ್ಷಗಳಿಗೂ ಸಮಾನ ಅಧಿಕಾರಕ್ಕೆ ಅವಕಾಶ ಮಾಡಿಕೊಡಲಾಗಿದೆ. ಈಗ ಈ ಅಧಿಕಾರಕ್ಕೆ, ವ್ಯವಸ್ಥೆಗೆ ಅಪಾಯ ಬಂದಿದೆ.

'ಒಂದು ಮಾರುಕಟ್ಟೆ' ಎಂಬ ಕೂಗು

ಇಂದು ಜಿ.ಎಸ್.ಟಿ. ಹಿನ್ನೆಲೆಯಲ್ಲಿ 'ಒಂದು ರಾಷ್ಟ್ರ, ಒಂದು ತೆರಿಗೆ' ಎಂಬ ಘೋಷಣೆ ಚಲಾವಣೆಯಲ್ಲಿದೆ. ಇದರ ಜೊತೆಯಲ್ಲಿ ಏಕೀಕೃತ ರಾಷ್ಟ್ರೀಯ ಮಾರುಕಟ್ಟೆ ಎಂಬ ಘೋಷಣೆಯೂ ಕೇಳಿ ಬರುತ್ತಿದೆ. ಈ ಬಗೆಯ ಘೋಷಣೆಗಳಿಗೆ ಜಿ.ಎಸ್.ಟಿ. ಎಂಬ ತೆರಿಗೆ ಸುಧಾರಣೆ ಕ್ರಮವು ಅಡಿಪಾಯ ಒದಗಿಸಿದೆ. ಈಗ ಜಾರಿಗೆ ತರಲು ಹೊರಟಿರುವ ಜಿ.ಎಸ್.ಟಿ. ವ್ಯವಸ್ಥೆಯನ್ನು ಕ್ರಾಂತಿಕಾರಿ ಕ್ರಮವೆಂದೂ, ಬೃಹತ್ ಸುಧಾರಣೆಯೆಂದೂ ಬಣ್ಣಿಸಲಾಗುತ್ತಿದೆ. ಈಗಿರುವ ಭಯೋತ್ಪಾದಕ ತೆರಿಗೆ ವ್ಯವಸ್ಥೆಯನ್ನು ರದ್ದು ಪಡಿಸಿ ಇಡೀ ದೇಶಕ್ಕೆ ಒಂದು ತೆರಿಗೆ ವ್ಯವಸ್ಥೆಯನ್ನು ತರುವ ಕ್ರಮವೇ ಜಿ.ಎಸ್.ಟಿ.

ಒಂದು ಮಾರುಕಟ್ಟೆ ಅಸ್ತಿತ್ವಕ್ಕೆ ಬಂದರೆ ನಮ್ಮ ಜಿಡಿಪಿಯಲ್ಲಿ ಶೇ.2ರಷ್ಟು ಮೌಲ್ಯ ವರ್ಧನೆಯಾಗುತ್ತದೆ ಎಂದು ಕೇಂದ್ರ ಹಣಕಾಸು ಮಂತ್ರಿಗಳು ಹೇಳುತ್ತಿದ್ದಾರೆ. 'ಒಂದು ಮಾರುಕಟ್ಟೆ' ಎಂಬುದು ಸದ್ಗುಣಗಳ ಆಗರವಾಗುವುದಾದರೆ ನಾವು ಒಂದು ಭಾಷೆ, ಒಂದು ಧರ್ಮ, ಒಂದು ಶಿಕ್ಷಣ, ಒಂದು ಬ್ಯಾಂಕು, ಒಂದು ಪರೀಕ್ಷೆ ಮುಂತಾದ ಕ್ರಮಗಳ ಬಗ್ಗೆಯೂ ಯೋಚಿಸಬಹುದು ತಾನೆ! ಇದಕ್ಕೆ ಜಿ.ಎಸ್.ಟಿಯು ಮುನ್ನುಡಿಯೇ? ಏಕೆಂದರೆ ದೇಶದಲ್ಲಿನ ಎಲ್ಲ ಶಾಲೆಗಳಲ್ಲಿಯೂ ಸಿ.ಬಿ.ಎಸ್.ಈ. ಪಠ್ಯಕ್ರಮವನ್ನು ಅಳವಡಿಸುವ ಕ್ರಮ ನಡೆಯುತ್ತಿದೆ. ನಮ್ಮ ದೇಶದ ಅನೇಕ ರಾಜ್ಯಗಳಲ್ಲಿ ಲಾಗಾಯ್ತಿನಿಂದ ಕಾರ್ಯನಿರ್ವಹಿಸುತ್ತಿರುವ ಬ್ಯಾಂಕುಗಳಿವೆ. ಉದಾಹರಣೆಗೆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್, ಸ್ಟೇಟ್ ಬ್ಯಾಂಕ್ ಆಫ್ ಟ್ರಾವಾಂಕೂರ್, ಸ್ಟೇಟ್ ಬ್ಯಾಂಕ್ ಆಫ್ ಜೈಪುರ್ ಆಂಡ್ ಬಿಕನೇರ್ ಮತ್ತು ಸ್ಟೇಟ್ ಬ್ಯಾಂಕ್ ಆಫ್ ಪಾಟಿಯಾಲ. ಇವೆಲ್ಲ ಇದುವರೆವಿಗೂ ಭಾರತೀಯ ಸ್ಟೇಟ್ ಬ್ಯಾಂಕಿನ ಸಹಸಂಸ್ಥೆಗಳಾಗಿ ಕೆಲಸ ಮಾಡುತ್ತಿದ್ದವು. ಆದರೆ ಈಗ ಸರ್ಕಾರ ಅವುಗಳನ್ನು ವಿಲೀನಗೊಳಿಸಿ ಬೃಹತ್ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಎಂಬುದನ್ನು ಇದೇ ಏಪ್ರಿಲ್ 1 ರಂದು ಅಸ್ತಿತ್ವಕ್ಕೆ ತರಲಿದೆ. 'ಪ್ರದೇಶ-ವಿಶಿಷ್ಟತೆ' ಎಂದು ಯಾವುದನ್ನು ಕರೆಯುತ್ತೇವೆಯೋ ಅದನ್ನು ಸದರಿ ವಿಲೀನವು ಅಪ್ರಸ್ತುತವನ್ನಾಗಿ ಮಾಡಿಬಿಡುತ್ತದೆ. ಸ್ಟೇಟ್ ಬ್ಯಾಂಕ್ ಆಫ್ ಮೈಸೂರನ್ನು ಕರ್ನಾಟಕಸ್ಥರು ಮೈಸೂರು ಬ್ಯಾಂಕು ಎಂದೇ ಕರೆ-ಯುತ್ತಿದ್ದರು. ಈಗ ಅದು ಕರ್ನಾಟಕತ್ವವನ್ನು ಕಳೆದುಕೊಂಡು ಬಿಡುತ್ತದೆ. ಪ್ರಚ್ಛನ್ನವಾಗಿ ಒಂದು ಭಾಷೆಯನ್ನು ಎಲ್ಲ ರಾಜ್ಯಗಳ ಮೇಲೂ ಹೇರುವ ಕೆಲಸವನ್ನು ಮಾಡಲಾಗುತ್ತಿದೆ. ಸಾರಿಗೆ ನಿರ್ವಹಣೆಗೆ ಸಂಬಂಧಿಸಿದಂತೆ ರಾಷ್ಟ್ರೀಯ ಏಕರೂಪಿ ಶಾಸನ ತರುವ ಬಗ್ಗೆ ಚಿಂತನೆ ನಡೆದಿದೆ. ಇವೆಲ್ಲವೂ ಸಂವಿಧಾನದತ್ತವಾದ ರಾಜ್ಯಗಳ ಸ್ವಾಯತ್ತ ಅಧಿಕಾರವನ್ನು ಮೊಟಕುಗೊಳಿಸುತ್ತವೆ.

ರಾಷ್ಟ್ರೀಯ ಜಿ.ಎಸ್.ಟಿ ಮಂಡಳಿ

ಜಿ.ಎಸ್.ಟಿ ವ್ಯವಸ್ಥೆಯ ಆಡಳಿತ ನಿರ್ವಹಣೆಗೆ ಒಂದು ಶಾಸನಾತ್ಮಕ ಮಂಡಳಿ ಅಸ್ತಿತ್ವಕ್ಕೆ ಬರಲಿದೆ. ಇದರಲ್ಲಿ ರಾಜ್ಯಗಳಿಗೆ ಪ್ರಾತಿನಿಧ್ಯ ನೀಡಲಾಗಿದೆ. ಕೇಂದ್ರ ಹಣಕಾಸು ಸಚಿವರು ಅದರ ಅಧ್ಯಕ್ಷರಾಗಿರುತ್ತಾರೆ. ಎಲ್ಲ ಸದಸ್ಯ ರಾಜ್ಯಗಳಿಗೆ ಸಮಾನ ಮತದಾನದ ಹಕ್ಕು ಇರುತ್ತದೆ. ಇಲ್ಲಿ ನಿರ್ಣಯ ಅನುಮೋದನೆಯಾಗ ಬೇಕಾದರೆ ನಾಲ್ಕನೆಯ ಮೂರರಷ್ಟು ಬಹುಮತ ಅಗತ್ಯ. ಆದರೆ ಮಂಡಳಿಯ ಒಟ್ಟು ಮತಗಳಲ್ಲಿ ಮೂರನೆಯ ಒಂದರಷ್ಟು ಕೇಂದ್ರದ ವಶದಲ್ಲಿರುತ್ತದೆ. ಕೇಂದ್ರಕ್ಕೆ ಪರಮೋಚ್ಚ ಅಧಿಕಾರವಿರುತ್ತದೆ. ಈ ಕಾರಣದಿಂದ ಯಾವುದೇ ಒಂದು ರಾಜ್ಯಕ್ಕೆ ತನಗೆ ಅಗತ್ಯವಾದ ನಿರ್ಣಯವನ್ನು ಇಲ್ಲಿ ಸಾಧಿಸಿಕೊಳ್ಳುವುದು ಅಸಾಧ್ಯ. ಈ ಮಂಡಳಿಯು ಒಕ್ಕೂಟ ವ್ಯವಸ್ಥೆಗೆ ಕೊಡಲಿ ಪಟ್ಟು ನೀಡುವುದು ಖಚಿತ. ಈ ವ್ಯವಸ್ಥೆಯಲ್ಲಿ ತೆರಿಗೆಗಳಿಗೆ ಸಂಬಂಧಿಸಿದ ನೀತಿ ರೂಪಿಸುವ ಅಧಿಕಾರ ರಾಜ್ಯಗಳಿಗೆ ಇರುವುದಿಲ್ಲ. ಕೇಂದ್ರದ ಮರ್ಜಿಯಲ್ಲಿ ರಾಜ್ಯಗಳು ಕೆಲಸ ಮಾಡಬೇಕಾಗುತ್ತದೆ. ಇಲ್ಲಿ ರಾಷ್ಟ್ರೀಯ ಹಿತಾಸಕ್ತಿಯ ಹಿನ್ನೆಲೆಯಲ್ಲಿ ಕೇಂದ್ರದ ನಿಲುವನ್ನು ರಾಜ್ಯಗಳು ಅನುಮೋದಿಸಬೇಕಾಗುತ್ತದೆ. ಇಲ್ಲದಿದ್ದರೆ ಅಂತಹ ರಾಜ್ಯಗಳ ನಿಲುವನ್ನು 'ರಾಷ್ಟ್ರ-ವಿರೋಧಿ' ಎಂದು ಬಣ್ಣಿಸುವ ಸಾಧ್ಯತೆಯಿರುತ್ತದೆ. ಇನ್ನು ಮುಂದೆ ತೆರಿಗೆ ನೀತಿಗೆ ಸಂಬಂಧಿಸಿದಂತೆ ರಾಜ್ಯಗಳಿಗೆ ಯಾವುದೇ ಅಧಿಕಾರವಿರುವುದಿಲ್ಲ. ಅವು ಕೇಂದ್ರದ ಒಪ್ಪಿಗೆಯಲ್ಲಿ ನಡೆ-ಯ ಬೇಕಾಗುತ್ತದೆ. ಈ ಎಲ್ಲ ಕ್ರಮಗಳು ಒಕ್ಕೂಟ ವ್ಯವಸ್ಥೆಗೆ ಧಕ್ಕೆ ತರುವ ಸಾಧ್ಯತೆಯಿದೆ. ತೆರಿಗೆಗೆ ಸಂಬಂಧಿಸಿದ ನೀತಿಗಳನ್ನು ಕೇಂದ್ರದ ನೇತೃತ್ವದ ಮಂಡಳಿಯಲ್ಲಿ ತೀರ್ಮಾನಿಸುವುದಾದರೆ ರಾಜ್ಯಗಳ ಸ್ವಾ-ಯತ್ತತೆಗೆ ಯಾವುದೇ ಅರ್ಥ ಉಳಿಯುವುದಿಲ್ಲ. ನಮ್ಮ ಸಂವಿಧಾನದಲ್ಲಿ ತೆರಿಗೆಗಳನ್ನು ವಿಧಿಸುವ, ಸಂಗ್ರಹಿಸುವ ಮತ್ತು ವ್ಯಯಿಸುವ ಅಧಿಕಾರವನ್ನು ಗ್ರಾಮ ಪಂಚಾಯತಿಗಳಿಗೆ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೂ ನೀಡಲಾಗಿದೆ. ಆದರೆ ನಮ್ಮ ಒಕ್ಕೂಟ ವ್ಯವಸ್ಥೆಯ ಸಂವಿಧಾನಾತ್ಮಕ ಮೂರನೆಯ ಹಂತದ ಸರ್ಕಾರಗಳಿಗೆ ಮಂಡಳಿಯಲ್ಲಿ ಅವಕಾಶ ನೀಡಲಾಗಿಲ್ಲ. ಜಿ.ಎಸ್.ಟಿ ಅಸ್ತಿತ್ವಕ್ಕೆ ಬಂದ ಮೇಲೆ ಸ್ಥಳೀಯ ಸರ್ಕಾರಗಳ ತೆರಿಗೆ ಅಧಿಕಾರ ಏನಾಗುತ್ತದೆ? ಅವುಗಳು ಸಹ ಜಿ.ಎಸ್.ಟಿಯಲ್ಲಿ ವಿಲೀನಗೊಂಡು ಬಿಡುತ್ತವೆಯೇ? ಅಂದರೆ ಒಂದು ತೆರಿಗೆ, ಒಂದು ಮಾರುಕಟ್ಟೆ ಅನ್ನುವುದು ಒಕ್ಕೂಟ ತತ್ವದ ಜೊತೆಯಲ್ಲಿ ವಿಕೇಂದ್ರೀಕರಣ ತತ್ವಕ್ಕೂ ಕುತ್ತು ತರುತ್ತಿದೆಯೇ? ರಾಜ್ಯಮಟ್ಟದಲ್ಲಿ ವಿಕೇಂದ್ರೀಕರಣ ಪ್ರತಿಪಾದಕರು ಇದರ ಬಗ್ಗೆ ಗಮನ ಹರಿಸಿದ್ದು ಕಾಣುವುದಿಲ್ಲ.

ವಾಣಿಜ್ಯ-ವ್ಯಾಪಾರ ವಲಯಕ್ಕೆ ವರ; ಒಕ್ಕೂಟ ವ್ಯವಸ್ಥೆಗೆ ಶಾಪ

ಈ ಜಿ.ಎಸ್.ಟಿ ವ್ಯವಸ್ಥೆಗೆ ವಾಣಿಜ್ಯ ಮತ್ತು ವ್ಯಾಪಾರಿ ಸಂಸ್ಥೆಗಳು ಪೂರ್ಣ ಬೆಂಬಲ ನೀಡುತ್ತಿವೆ ಮತ್ತು ಅದರ ಜಾರಿಗಾಗಿ ಇನ್ನಿಲ್ಲದ ಒತ್ತಡವನ್ನು ಕೇಂದ್ರ ಸರ್ಕಾರದ ಮೇಲೆ ಅವು ಹೇರುತ್ತಿವೆ (ಸಿ.ಐ.ಐ, ಎಫ್.ಐ.ಸಿ.ಸಿ.ಐ, ಎ.ಸಿ.ಸಿ.ಐ ಮುಂತಾದವು). ಒಂದು ರಾಷ್ಟ್ರೀಯ ಮಾರುಕಟ್ಟೆ ಅಸ್ತಿತ್ವಕ್ಕೆ ಬಂದರೆ ದೊಡ್ಡ ಪ್ರಮಾಣದ ಉದ್ದಿಮೆಗಳ ಲಾಭದ ಪ್ರಮಾಣ ಹೆಚ್ಚಾಗುತ್ತದೆ. ಸಾವಕಾಶವಾಗಿ ರಾಜ್ಯ ಮಟ್ಟದಲ್ಲಿರುವ ಸಣ್ಣ-ಪುಟ್ಟ ವ್ಯಾಪಾರಿಗಳನ್ನು, ಮಾರಾಟಗಾರರನ್ನು, ಕುಶಲಕರ್ಮಿಗಳನ್ನು ಇವು ಆಪೋಶನ ತೆಗೆದುಕೊಂಡು ಬಿಡುತ್ತವೆ. ಇದರಿಂದ ಬ್ರಹ್ಮರಾಕ್ಷಸ ಸ್ವರೂಪದ ಕಂಪನಿಗಳಿಗೆ ಮಾರುಕಟ್ಟೆಯ ಮೇಲೆ ಏಕಸ್ವಾಮ್ಯ ಸ್ಥಾಪಿಸುವುದು ಸಾಧ್ಯವಾಗುತ್ತದೆ. ಬಂಡವಾಳಿಗರಿಗೆ ರಾಷ್ಟ್ರೀಯ ಮಾರುಕಟ್ಟೆ ಅನ್ನುವುದು ವರವಾದರೆ ಒಕ್ಕೂಟ ವ್ಯವಸ್ಥೆಗೆ ಅದು ಶಾಪವಾಗಿ ಪರಿಣಮಿಸುತ್ತದೆ. ರಾಷ್ಟ್ರೀಯ ಮಾರುಕಟ್ಟೆಯು ಏಕಸ್ವಾಮ್ಯತೆಗೆ ದಾರಿ ಮಾಡಿಕೊಡುತ್ತದೆ. ಸಣ್ಣ-ಪುಟ್ಟ ವ್ಯಾಪಾರಿಗಳು, ವಾಣಿಜ್ಯ ಘಟಕಗಳು, ಗೃಹ ಕೈಗಾರಿಕೆಗಳು ಬೃಹತ್ ಕಂಪನಿಗಳಲ್ಲಿ ವಿಲೀನಗೊಂಡ ಮೇಲೆ ಅಥವಾ ಮುಚ್ಚಿ ಹೋದಮೇಲೆ ಅವುಗಳನ್ನು ಅವಲಂಬಿಸಿದವರೆಲ್ಲ ನಿರುದ್ಯೋಗಿಗಳಾಗುತ್ತಾರೆ. ಈ ಕ್ರಮವು ತೀವ್ರ ವರಮಾನ ಅಸಮಾನತೆಗೆ ದಾರಿ ಮಾಡಿಕೊಡುತ್ತದೆ. ರಾಜ್ಯಗಳಿಗೆ ತೆರಿಗೆ ನೀತಿಯ ಮೇಲೆ ನಿಯಂತ್ರಣವಿರುವುದಿಲ್ಲ. ತಮ್ಮ ರಾಜ್ಯದ ಸಣ್ಣ ಉದ್ದಿಮೆಗಳಿಗೆ, ವ್ಯಾಪಾರಿಗಳಿಗೆ, ವಾಣಿಜ್ಯ ಸಂಸ್ಥೆಗಳಿಗೆ, ಗೃಹ ಕೈಗಾರಿಕೆಗಳಿಗೆ ಯಾವುದೇ ರೀತಿಯ ರಕ್ಷಣೆ, ಅನುದಾನ, ತೆರಿಗೆ ವಿನಾಯಿತಿ, ಉತ್ತೇಜನ ಸಹಾಯಧನ ಮುಂತಾದವುಗಳನ್ನು ರಾಜ್ಯಗಳಿಗೆ ನೀಡುವುದು ಸಾಧ್ಯವಾಗುದಿಲ್ಲ.

ನಮ್ಮ ದೇಶದಲ್ಲಿ ಪ್ರತಿ ರಾಜ್ಯವೂ ತಮ್ಮದೇ ವಿಶಿಷ್ಟವಾದ ಅಭಿವೃದ್ಧಿ ಮಾದರಿಗಳನ್ನು ಅನುಸರಿಸುತ್ತಿವೆ. ಉದಾ, ಕೇರಳ ಮಾದರಿ ಎಂಬುದಿದೆ. ಅದು ಮಾನವ ಅಭಿವದ್ಧಿಯಲ್ಲಿ ಕಳೆದ 30 ವರ್ಷಗಳಿಂದ ದೇಶದಲ್ಲಿ ಮೊದಲ ಸ್ಥಾನದಲ್ಲಿದೆ. ಅದರ ತಲಾ ವರಮಾನ 2014-15ರಲ್ಲಿ ರೂ1.39 ಲಕ್ಷದಷ್ಟಿತ್ತು. ತಮಿಳುನಾಡು ಕೂಡ ಜನಕಲ್ಯಾಣ ನೀತಿಯನ್ನು ಅಳವಡಿಸಿಕೊಂಡು ಮಾನವ ಅಭಿವೃದ್ಧಿಯಲ್ಲಿ ಉನ್ನತ ಸ್ಥಾನವನ್ನು ಸಾಧಿಸಿಕೊಂಡಿದೆ. ಅದರ ತಲಾ ವರಮಾನ 2014-15ರಲ್ಲಿ ರೂ 1.36 ಲಕ್ಷ. ವ್ಯಾಪಾರಿಗಳ, ವಾಣಿಜ್ಯೋದಮಿಗಳ, ಉದ್ಯಮಪತಿಗಳ ಸಮೃದ್ಧತೆಯ ಅಭಿವೃದ್ಧಿ ಮಾದರಿಯನ್ನು ಗುಜರಾತ್ ಅನುಸರಿಸಿಕೊಂಡು ಬರುತ್ತಿದೆ. ಅದರ ತಲಾ ವರಮಾನ ರೂ1.24 ಲಕ್ಷ. ಇದೇ ರೀತಿಯಲ್ಲಿ ಪಂಜಾಬ್, ಮಹಾರಾಷ್ಟ್ರ, ಪ.ಬಂಗಾಳ ಮುಂತಾದವು ತಮ್ಮ ಪ್ರದೇಶಕ್ಕೆ ವಿಶಿಷ್ಟವಾದ ಪ್ರಣಾಳಿಕೆಗಳನ್ನು ಅಳವಡಿಸಿಕೊಂಡು ಅಭಿವೃದ್ಧಿಯನ್ನು ನಿರ್ವಹಿಸುತ್ತಿವೆ. ಈ ಬಗೆಯ ಪ್ರದೇಶ-ವಿಶಿಷ್ಟ ಅಭಿವೃದ್ಧಿ ಮಾದರಿಗೆ ಅಖಂಡ ಮಾರುಕಟ್ಟೆ ಕ್ರಮವು ಅಪಾಯಕಾರಿಯಾಗುತ್ತದೆ.

ಸಹಕಾರಿ ಒಕ್ಕೂಟ ವ್ಯವಸ್ಥೆ

ಕಳೆದ ಎರಡು ಮೂರು ವರ್ಷಗಳಿಂದ ಸಹಕಾರಿ ಒಕ್ಕೂಟ ವ್ಯವಸ್ಥೆ ಬಗ್ಗೆ ಮಾತನಾಡಲಾಗುತ್ತಿದೆ. ರಾಷ್ಟ್ರೀಯ ಹಿತಾಸಕ್ತಿಯ ದೃಷ್ಟಿಯಿಂದ ರಾಜ್ಯಗಳು ತಮ್ಮ ಸ್ವಾಯತ್ತತೆಯನ್ನು ಬಿಟ್ಟುಕೊಡಬೇಕಾಗುತ್ತದೆ. ಇದರಿಂದ ರಾಷ್ಟ್ರಮಟ್ಟದಲ್ಲಿ ಉತ್ಪಾದನಾ ಕ್ಷಮತೆಯನ್ನು ಗರಿಷ್ಠೀಕರಿಸಿಕೊಳ್ಳುವುದು ಸಾಧ್ಯವಾಗುತ್ತದೆ. ಬಹುಳಾಕಾರಿ ಮಾರುಕಟ್ಟೆಗೆ ಪ್ರತಿಯಾಗಿ ಏಕಾಕಾರಿ ಮಾರುಕಟ್ಟೆಯು ಅನೇಕ ಬಗೆಯ ಅನುಕೂಲವನ್ನು ಒದಗಿಸುತ್ತದೆ. ಯಾವುದನ್ನು ಅರ್ಥಶಾಸ್ತ್ರದಲ್ಲಿ 'ದೊಡ್ಡ ಪ್ರಮಾಣದ ಉತ್ಪಾದನೆಯ ಮಿತವ್ಯಯ' (ಎಕನಾಮೀಸ್ ಆಫ್ ಸ್ಕೇಲ್) ಎಂದು ಕರೆಯುತ್ತೇವೆಯೋ ಅದು ಏಕಾಕಾರಿ ಮಾರುಕಟ್ಟೆಯಿಂದ ಸಾಧ್ಯವಾಗುತ್ತದೆ. ಸರಕು-ಸೇವೆಗಳ ಸರಬರಾಜು ಸರಪಳಿಯಲ್ಲಿ ಯಾವುದೇ ಛಿದ್ರೀಕರಣಕ್ಕೆ ಇಲ್ಲಿ ಅವಕಾಶವಿರುವುದಿಲ್ಲ. ಇದರಿಂದ ಉದ್ದಿಮೆಗಳಿಗೆ ವೆಚ್ಚದಲ್ಲಿ ತೀವ್ರ ಉಳಿತಾಯ ಸಾಧ್ಯವಾಗುತ್ತದೆ. ಈ ಉಳಿತಾಯವನ್ನು ಅನುಭೋಗಿಗಳಿಗೆ ವರ್ಗಾಯಿಸಲಾಗುತ್ತದೆಯೋ ಇಲ್ಲವೋ ಎಂಬುದು ಬೇರೆ ವಿಷಯ. ಆದರೆ ಇಂದು ಇಂತಹ ಒಕ್ಕೂಟ ವ್ಯವಸ್ಥೆಯ ಬುಡಕ್ಕೆ ಕೊಡಲಿ ಪೆಟ್ಟು

ಪುಟ 15 ಕ್ಕೆ



ಮಕ್ಕಳ ಊಟಕ್ಕೆ ಕಲ್ಲು ಹಾಕದಿರಿ





ಮಧ್ಯಾಹ್ನದ ಊಟಕ್ಕೆ ಆಧಾರ್ ಹೇರಿಕೆ ಮಕ್ಕಳ ಆಹಾರದ ಹಕ್ಕಿನ ಮೇಲಿನ ದಾಳಿಯಾಗಿದೆ. ಶಾಲೆಗಳಲ್ಲಿ ಮಕ್ಕಳಿಗೆ ನೀಡುವ ಆಹಾರದ ಲಭ್ಯತೆಯನ್ನು ಯಾವುದೇ ಷರತ್ತುಗಳ ಮೂಲಕ ನಿರ್ಬಂಧಿಸಲಾಗದು. ಆಧಾರ್ ಸಂಖ್ಯೆ ಇಲ್ಲವೆಂಬ ಒಂದೇ ಕಾರಣಕ್ಕೆ ಮಗುವನ್ನು ಊಟದಿಂದ ವಂಚಿಸುವುದು ಅಸಹ್ಯಕರ ಸಂಗತಿ. ಇದನ್ನು ತಕ್ಷಣವೇ ವಾಪಸ್ ಪಡೆಯಬೇಕು. ಸರ್ವೋನ್ನತ ನ್ಯಾಯಾಲಯದ ಅಂತಿಮ ತೀರ್ಪು ಬರುವ ವರೆಗೆ ಸರಕಾರದ ಯೋಜನೆಗಳು ಮತ್ತು ಸೌಲಭ್ಯಗಳಿಗೆ ಆಧಾರ್ ಕಡ್ಡಾಯ ಮಾಡಬಾರದೆಂಬ ಅದರ ನಿರ್ದೇಶನವನ್ನು ಸರಕಾರ ಅಕ್ಷರಶಃ ಪಾಲಿಸಬೇಕು.

–ಪ್ರಕಾಶ ಕಾರಟ್

ಆಧಾರ್‌ಗಾಗಿ ಬಲವಂತ ಮಾಡುವುದನ್ನು ನಿಲ್ಲಿಸಿ.....

ಸರಕಾರದ ಎಲ್ಲಾ ರೀತಿಯ ಯೋಜನೆಗಳು ಮತ್ತು ಸೇವೆಗಳ ಫಲ ನಾಗರಿಕರಿಗೆ ಆಧಾರ್ ಆಧಾರದಲ್ಲಿ ಮಾತ್ರವೇ ಲಭ್ಯವಾಗುವಂತೆ ಮಾಡಲು ಜನಗಳು ಆಧಾರ್ ವಿಶಿಷ್ಟ ಗುರುತು ಸಂಖ್ಯೆಯನ್ನು ಹೊಂದಿರುವಂತೆ ಬಲವಂತಪಡಿಸಬೇಕೆಂಬ ಹಠಕ್ಕೆ ನರೇಂದ್ರ ಮೋದಿ ಸರಕಾರ ಬಿದ್ದಿದೆ.

ಅದಕ್ಕೆ ಇತ್ತೀಚಿನ ಉದಾಹರಣೆಯೆಂದರೆ, ಸರಕಾರಿ ಶಾಲೆಗಳಲ್ಲಿನ ಮಕ್ಕಳು ಮಧ್ಯಾಹ್ನದ ಬಿಸಿಯೂಟ ಸೌಲಭ್ಯವನ್ನು ಪಡೆಯಬೇಕಾದರೆ ಮಕ್ಕಳು ಆಧಾರ್ ಹೊಂದಿರುವುದು ಕಡ್ಡಾಯ ಎಂಬುದಾಗಿ ಮಾನವ ಸಂಪನ್ಮೂಲ ಅಭಿವೃದ್ಧಿ ಖಾತೆ ಹೊರಡಿಸಿರುವ ಅಧಿಸೂಚನೆ. ಅಷ್ಟು ಮಾತ್ರವೇ ಅಲ್ಲ, ಬಿಸಿಯೂಟ ಯೋಜನೆಯ ಅಡುಗೆಯವರು ಮತ್ತು ಇತರ ಸಿಬ್ಬಂದಿ ಕೂಡ ಆಧಾರ್ ಸಂಖ್ಯೆ ಹೊಂದಿರುವುದು ಕಡ್ಡಾಯ ಎಂದು ಅದು ಹೇಳಿದೆ.

ಮಧ್ಯಾಹ್ನದ ಊಟಕ್ಕೆ ಆಧಾರ್ ಹೇರಿಕೆ ಮಕ್ಕಳ ಆಹಾರದ ಹಕ್ಕಿನ ಮೇಲಿನ ದಾಳಿಯಾಗಿದೆ. ಶಾಲೆಗಳಲ್ಲಿ ಮಕ್ಕಳಿಗೆ ನೀಡುವ ಆಹಾರದ ಲಭ್ಯತೆಯನ್ನು ಯಾವುದೇ ಷರತ್ತುಗಳ ಮೂಲಕ ನಿರ್ಬಂಧಿಸಲಾಗದು. ಆಧಾರ್ ಸಂಖ್ಯೆ ಇಲ್ಲವೆಂಬ ಒಂದೇ ಕಾರಣಕ್ಕೆ ಮಗುವನ್ನು ಊಟದಿಂದ ವಂಚಿಸುವುದು ಅಸಹ್ಯಕರ ಸಂಗತಿ.

ಆಘಾತಕರ ಸಂಗತಿಯೆಂದರೆ, ಸರಕಾರದ ಸೇವೆಗಳು ಮತ್ತು ಸೌಲಭ್ಯಗಳನ್ನು ಪಡೆಯಲು ಆಧಾರ್‌ಅನ್ನು ಕಡ್ಡಾಯಗೊಳಿಸಬಾರದು ಎಂಬ ಸುಪ್ರೀಂಕೋರ್ಟ್ ಪದೇಪದೇ ಹೊರಡಿಸಿದ ಆದೇಶಗಳಿಗೆ ಸರಕಾರ ಕವಡೆ ಕಾಸಿನ ಕಿಮ್ಮತ್ತು ನೀಡದೆ ಉಲ್ಲಂಘಿಸುತ್ತಿರುವುದು. 2015 ಅಕ್ಟೋಬರ್ 15ರಂದು ಅಂದಿನ ಭಾರತದ ಮುಖ್ಯ ನ್ಯಾಯಾಧೀಶರ ನೇತೃತ್ವದ ಐವರು ಸದಸ್ಯರ ಸಂವಿಧಾನ ಪೀಠ ಹೀಗೆ ಹೇಳಿತ್ತು:

"23.03.2013ರಿಂದ ಆರಂಭಿಸಿ ಈ ನ್ಯಾಯಾಲಯ ಹೊರಡಿಸಿದ್ದ ಎಲ್ಲಾ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ನಾವು ಭಾರತ ಸರಕಾರಕ್ಕೆ ಹೇಳುತ್ತಿದ್ದೇವೆ. ಆಧಾರ್ ಕಾರ್ಡ್ ಯೋಜನೆಯು ಕೇವಲ ಸ್ವಯಮಿಚ್ಛೆಯದ್ದು. ಈ ನ್ಯಾಯಾಲಯವು ಈ ವಿಚಾರದಲ್ಲಿ ಮುಂದೆ ಯಾವುದೇ ಅಂತಿಮ ನಿರ್ಧಾರ ಕೈಗೊಳ್ಳುವವರೆಗೆ ಆಧಾರ್‌ಅನ್ನು ಕಡ್ಡಾಯಗೊಳಿಸಬಾರದು ಎಂದೂ ನಾವು ಸ್ಪಷ್ಟಪಡಿಸುತ್ತಿದ್ದೇವೆ".

ಸಾರ್ವಜನಿಕ ವಿತರಣೆ ವ್ಯವಸ್ಥೆ (ಪಡಿತರ) ಮತ್ತು ಸೀಮೆ ಎಣ್ಣೆ ಹಾಗೂ ಎಲ್‌ಪಿಜಿ ಅಂದರೆ ಅಡುಗೆ ಅನಿಲ ವಿತರಣೆ ಹೊರತುಪಡಿಸಿ ಇತರ ಯಾವುದೇ ಉದ್ದೇಶಕ್ಕೆ ಆಧಾರ್ ಕಾರ್ಡ್ ಕಡ್ಡಾಯ ಮಾಡಬಾರದು ಎಂದು ತನ್ನ ಮಧ್ಯಂತರ ಆದೇಶದಲ್ಲಿ ಸುಪ್ರೀಂ ಕೋರ್ಟ್ ಹೇಳಿತ್ತು. ಈ ಆದೇಶವನ್ನು ಮೋದಿ ಸರಕಾರ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಪಿಂಚಣಿ ವಿತರಣೆ ಮತ್ತಿತರ ಸರಕಾರಿ ಯೋಜನೆಗಳಿಗೆ ಆಧಾರ್‌ನ್ನು ವಿಸ್ತರಿಸಿ ಕಡ್ಡಾಯ ಮಾಡುವ ಮೂಲಕ ಸರ್ವೋನ್ನತ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸುತ್ತಿದೆ. ರೈಲುಗಳಲ್ಲಿ ಪ್ರಯಾಣಿಸುವ ಹಿರಿಯ ನಾಗರಿಕರಿಗೆ ನೀಡುವ ರಿಯಾಯಿತಿಗೆ 2017ರ ಎಪ್ರಿಲ್ ಒಂದ–ರಿಂದ ಆಧಾರ್ ಪರಿಶೀಲನೆ ಕಡ್ಡಾಯ ಎಂದು ರೈಲ್ವೆ ಖಾತೆ ನಿರ್ಧರಿಸಿರುವುದು ಉಲ್ಲಂಘನೆ ಸರಣಿಯಲ್ಲಿ ಇತ್ತೀಚಿನ ಸೇರ್ಪಡೆಯಾಗಿದೆ. ರೈಲ್ವೆ ಇಲಾಖೆ ಆಧಾರ್ ಆಧರಿತ ರೈಲ್ವೆ ಟಿಕೆಟ್ ಕಾಯ್ದಿರಿಸುವ ವ್ಯವಸ್ಥೆಯನ್ನು ಇದೇ ಹಣಕಾಸು ವರ್ಷದಿಂದ ಜಾರಿ ಮಾಡಲಾಗುವುದೆಂದೂ ಪ್ರಕಟಿಸಿದೆ.

ಉದ್ಯೋಗ ಖಾತರಿ ಯೋಜನೆಯ ಕಾರ್ಮಿಕರಿಗೆ ಬಯೋಮೆಟ್ರಿಕ್ ವ್ಯವಸ್ಥೆ ಜಾರಿ ಮಾಡಿರುವುದರಿಂದ ಅನೇಕ ಕಾರ್ಮಿಕರಿಗೆ ಕೂಲಿಯನ್ನು ನಿರಾಕರಿಸಿರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಕಾರ್ಮಿಕರ ಬೆರಳಚ್ಚು ಗುರುತು ತಾಳೆಯಾಗದಿರುವುದೇ ಈ ಸಮಸ್ಯೆಗೆ ಕಾರಣವಾಗಿದೆ. ಇದೇ ಕಾರಣದಿಂದಾಗಿ ಪಡಿತರ ಕಾರ್ಡ್‌ದಾರರು ಪಡಿತರ ಧಾನ್ಯಗಳನ್ನು ಪಡೆಯುವಲ್ಲಿಯೂ ಸಮಸ್ಯೆಗಳಾಗುತ್ತಿವೆ. ಜನರನ್ನು ಅವರಹಕ್ಕಿನ ಸೌಲಭ್ಯಗಳಿಂದ ಹೊರಗಿಡಲೆಂದೇ ವಿಶಿಷ್ಟ ಗುರುತು ಸಂಖ್ಯೆ (ಯುಐಡಿ) ಆಧಾರ್ ವ್ಯವಸ್ಥೆಯನ್ನು ಹೇರಲಾಗುತ್ತಿದೆ.

ಬಯೋಮೆಟ್ರಿಕ್ ಮಾಹಿತಿ ಸಂಗ್ರಹವನ್ನು ಬಳಸಲಾಗುತ್ತಿರುವ ಬಗ್ಗೆ ಗಂಭೀರವಾದ ಆತಂಕಗಳು ಸೃಷ್ಟಿಯಾಗಿವೆ. ಮಾಹಿತಿ ಸಂಗ್ರಹದ ಗುತ್ತಿಗೆ ಪಡೆದಿರುವ ಅಮೆರಿಕದ ಕಂಪೆನಿಗಳಿಗೆ ಈ ಮಾಹಿತಿಗಳನ್ನು ತಿಳಿಯಲು ಮುಕ್ತ ಅವಕಾಶ ನೀಡಲಾಗಿದೆ. ಈ ಕಂಪೆನಿಗಳು ಅಮೆರಿಕದ ಬೇಹುಗಾರಿಕೆ ಮತ್ತು ಭದ್ರತಾ ಸಂಸ್ಥೆಗಳೊಂದಿಗೆ ಸಂಬಂಧ ಹೊಂದಿವೆ.

ವ್ಯಕ್ತಿಗಳ ಮಾಹಿತಿಗಳ ಖಾಸಗಿತ್ವದ ಬಗ್ಗೆ ಎದ್ದ ಕಳವಳಗಳ ಕಾರಣದಿಂದಲೇ ಆಧಾರ್‌ನ ಇಡೀ ವಿಚಾರವನ್ನು ಮತ್ತು ಅದರ ಕಡ್ಡಾಯ ಬಳಕೆಯ ಪ್ರಶ್ನೆಯನ್ನು ಪರಿಶೀಲಿಸಲು ಒಂದು ವಿಶಾಲ ಸಂವಿಧಾನ ಪೀಠ ರಚಿಸಬೇಕೆಂದು ಸುಪ್ರೀಂ ಕೋರ್ಟ್ ಶಿಫಾರಸು ಮಾಡಿತ್ತು. ದುರದೃಷ್ಟವಶಾತ್, ಅದಾಗಿ ಹದಿನಾರು ತಿಂಗಳು ಕಳೆದರೂ ಇಂತಹ ಒಂದು ಸಂವಿಧಾನ ಪೀಠವನ್ನು ರಚಿಸಲಾಗಿಲ್ಲ.

ಈ ವಿಳಂಬದ ಹಿನ್ನೆಲೆಯಲ್ಲಿ ಸರಕಾರ ಮುನ್ನುಗ್ಗುತ್ತಿದ್ದು ಆಧಾರ್‌ಅನ್ನು ಕಡ್ಡಾಯಗೊಳಿಸಿಯೇ ಬಿಟ್ಟಿದೆ. ಮುಂದಿನ ಕೆಲವು ವಾರಗಳಲ್ಲಿ ಇನ್ನೂ 50 ಯೋಜನೆಗಳಿಗೆ ಆಧಾರ್ ಕಡ್ಡಾಯಗೊಳಿಸಲು ಸರಕಾರ ಯೋಜಿಸುತ್ತಿದೆ ಎಂದು ವರದಿಯಾಗಿದೆ.

ಹಲವು ಕಲ್ಯಾಣ ಯೋಜನೆಗಳಿಗೆ ಆಧಾರ್ ಕಡ್ಡಾಯಗೊಳಿಸುವ ಭರದ ಕ್ರಮಕ್ಕೆ ತೀವ್ರ ಟೀಕೆ ವ್ಯಕ್ತವಾಗುತ್ತಿರುವುದರಿಂದ ಕೇಂದ್ರ ಸರಕಾರ ಸಂದಿಗ್ಧ ಅರ್ಥ ಬರುವಂತೆ ಮಾತಾಡುವ ತಂತ್ರದ ಮೊರೆ ಹೋಗಿದೆ. ಮಾರ್ಚ್ 7ರಂದು ಅದು ಒಂದು ಹೇಳಿಕೆ ಬಿಡುಗಡೆ ಮಾಡಿದೆ. ಆಧಾರ್ ಸಂಖ್ಯೆ ಇಲ್ಲವೆಂಬ ಕಾರಣಕ್ಕೆ ಯಾರನ್ನೂ ಅವರ ಸವಲತ್ತುಗಳಿಂದ ವಂಚಿಸಲಾಗುವುದಿಲ್ಲ, ಆಧಾರ್ ಸಂಖ್ಯೆ ನೀಡುವ ವರೆಗೆ ಸೌಲಭ್ಯಗಳನ್ನು ನೀಡಲಾಗುವುದೆಂದೂ ಆ ಹೇಳಿಕೆ ತಿಳಿಸಿದೆ.

ಅಂದರೆ, ಬಿಸಿಯೂಟ ಯೋಜನೆಯಡಿ ಫಲಾನುಭವಿ ಮಕ್ಕಳ ಆಧಾರ್ ಸಂಖ್ಯೆಯನ್ನು ಸಂಗ್ರಹಿಸುವಂತೆ ಶಾಲೆಗಳಿಗೆ ಸೂಚಿಸಲಾಗಿದೆ. ಒಂದು ವೇಳೆ ಮಕ್ಕಳಿಗೆ ಆಧಾರ್ ಸಂಖ್ಯೆ ಇಲ್ಲದಿದ್ದರೆ ಶಾಲೆಯ ಅಧಿಕಾರಿಗಳು ಆಧಾರ್ ನೊಂದಣಿ ಮಾಡಿ ಸಂಖ್ಯೆಯನ್ನು ನೀಡಬೇಕು. ಅಲ್ಲಿವರೆಗೆ ಸೌಲಭ್ಯ ಮುಂದುವರಿಯುತ್ತದೆ. ಇದ–ರಿಂದ ಶಾಲೆಗಳ ಆಡಳಿತದ ಮೇಲೆ ಇನ್ನಷ್ಟು ಹೊರೆ ಬೀಳುವುದಲ್ಲದೆ ಮಕ್ಕಳು ಹಾಗೂ ಅವರ ಪೋಷಕರಿಗೆ ಕಿರುಕುಳವೂ ಆಗುತ್ತದೆ.

ಶಾಲೆಗಳಲ್ಲಿ ಮಧ್ಯಾಹ್ನದ ಊಟಕ್ಕೆ ಆಧಾರ್ ಸಂಖ್ಯೆಯನ್ನು ಕಡ್ಡಾಯಗೊಳಿಸುವ ಆದೇಶವನ್ನು ಸರಕಾರ ತಕ್ಷಣವೇ ವಾಪಸ್ ಪಡೆಯಬೇಕು. ಸರ್ವೋನ್ನತ ನ್ಯಾಯಾಲಯದ ಅಂತಿಮ ತೀರ್ಪು ಬರುವ ವರೆಗೆ ಸರಕಾರದ ಯೋಜನೆಗಳು ಮತ್ತು ಸೌಲಭ್ಯಗಳಿಗೆ ಆಧಾರ್ ಕಡ್ಡಾಯ ಮಾಡಬಾರದೆಂಬ ಅದರ ನಿರ್ದೇಶನವನ್ನು ಸರಕಾರ ಅಕ್ಷರಶಃ ಪಾಲಿಸಬೇಕು.

ಅನು:ವಿಶ್ವ

ಮೋದಿ ರಾಜ್ಯದಲ್ಲಿ ಪೋಲಿಸ್ ಠಾಣೆಯಲ್ಲಿ ಮಹಿಳಾ ದಿನಾಚರಣೆ!



ಹೌದು ಈ ವರ್ಷದ ಅಂತರ್ರಾಷ್ಟ್ರೀಯ ಮಹಿಳಾ ದಿನವನ್ನು ಗುಜರಾತಿನ ಸುಮಾರು 3000 ಅಂಗನವಾಡಿ ಕಾರ್ಯಕರ್ತೆಯರು ಅಹಮದಾಬಾದಿನ ಪೋಲಿಸ್ ಠಾಣೆಯಲ್ಲಿ ಆಚರಿಸಬೇಕಾಗಿ ಬಂತು.

ಪ್ರಧಾನ ಮಂತ್ರಿಗಳು ತಮ್ಮ ತವರು ರಾಜ್ಯಕ್ಕೆ ಭೇಟಿಗೆ ಬರುವಾಗ ಬಿಜೆಪಿಯೇತರ ಸಂಘಟನೆಗಳ ಕಾರ್ಯಕರ್ತರನ್ನು ಬಂಧಿಸುವುದು ಈಗ ಗುಜರಾತಿನಲ್ಲಿ ವಾಡಿಕೆಯಾಗಿ ಬಿಟ್ಟಿದೆ. ಮಾರ್ಚ್ 7–8 ರಂದು ಪ್ರಧಾನಿಗಳ ಗುಜರಾತ್ ಭೇಟಿಯ ವೇಳೆಗೂ ಅದೇ ಆಯಿತು. ಇದರಿಂದಾಗಿ ಬಹಳಷ್ಟು ಸಂಘಟನೆಗಳಿಗೆ ಮಹಿಳಾ ದಿನಾಚರಣೆಗೆ 'ಅನುಮತಿ' ಸಿಗಲಿಲ್ಲ.

ಗುಜರಾತಿನ ವಿವಿಧ ಜಿಲ್ಲೆಗಳಿಂದ ಮಾರ್ಚ್ 8ರಂದು ರಾಜ್ಯಮಟ್ಟದ ರ್‍ಯಾಲಿಗೆಂದು ಬರುತ್ತಿದ್ದ ಸಾವಿರಾರು ಅಂಗನವಾಡಿ ಕಾರ್ಯಕರ್ತೆಯರನ್ನು ಪೋಲೀಸರು ತಡೆಯಲು ಪ್ರಯತ್ನಿಸಿದ್ದರೂ ಸುಮಾರು 3000 ಮಂದಿ ಅಹಮದಾಬಾದ್ ತಲುಪಿದ್ದರು. ಸಿಐಟಿಯು ರಾಜ್ಯ ಕಾರ್ಯದರ್ಶಿ ಅರುಣ್ ಮೆಹ್ತ, ಜನವಾದಿ ಮಹಿಳಾ ಸಂಘಟನೆಯ ನಳಿನಿ ಬೇನ್ ಮತ್ತು ಅಖಿಲ ಭಾರತ ಅಂಗನವಾಡಿ ಕಾರ್ಯಕರ್ತೆಯರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಎ.ಆರ್.ಸಿಂಧುರವರೂ ಸೇರಿದಂತೆ ಎಲ್ಲರನ್ನೂ ಶಾಹಿಬಾಗ್‌ನ ಪೋಲೀಸ್ ಮುಖ್ಯಾಲಯದಲ್ಲಿ ಬಂಧಿಸಿಡಲಾಯಿತು.

"ನಾವು ಅಹಮದಾಬಾದ್ ಪೋಲೀಸ್‌ಠಾಣೆಯಲ್ಲಿ ಅಂತರ್ರಾಷ್ಟ್ರೀಯ ಮಹಿಳಾ ದಿನ ಆಚರಿಸಿದ್ದೇವೆ. ರಶ್ಯಾದ ಮಹಿಳಾ ಕಾರ್ಮಿಕರ ಮುಷ್ಕರದ ಶತಮಾನೋತ್ಸವದಂದು ಐಕ್ಯತೆ ಮತ್ತು ಹೋರಾಟದ ಶಕ್ತಿಯನ್ನು ಸವಿದಿದ್ದೇವೆ" ಎಂದು ಸಿಂಧು ಅವರು ಟ್ವೀಟ್ ಮಾಡಿದ್ದಾರೆ.

ಮಹಿಳಾ ಸಮಾನತೆ ವಿಮೋಚನೆಗಳ ಸಂದೇಶ ಮುಟ್ಟಿಸಿ 1917ರ ಕ್ರಾಂತಿಯ ಮನೋಭಾವ ಬೆಳೆಸಿ: ಹೇಮಲತಾ

ರಶ್ಯನ್ ಕ್ರಾಂತಿ ಆರಂಭಿಸಿದ ಪೆಟ್ರೊಗ್ರಾಡ್ ಮಹಿಳೆಯರ ಮಹಿಳಾ ದಿನ ಮೆರವಣಿಗೆ



ಮಾರ್ಚ್ 8 , 1917

ಈ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯಂದು ಮಹಿಳಾ ಸಮಾನತೆ ಹಾಗೂ ವಿಮೋಚನೆಗಳ ಸಂದೇಶದೊಂದಿಗೆ, ಮಹಿಳೆಯರಿಗೆ ಸಭ್ಯ ಉದ್ಯೋಗ ಹಾಗೂ ಕೆಲಸದ ಸ್ಥಳಗಳಲ್ಲಿ ಭದ್ರತೆ, ಮತ್ತು ಹಲವು ತ್ಯಾಗಗಳಿಂದ ನಮ್ಮ ದೇಶದ ಮಹಿಳಾ ಕಾರ್ಮಿಕರು ಗಳಿಸಿದ ಹಕ್ಕುಗಳ ಜಾರಿಗಾಗಿ, ವಿಶಾಲವಾಗಿ ಹರಡಿಕೊಂಡಿರುವ ತಲುಪದೆ ಇರುವ ಮಹಿಳೆಯರನ್ನು ತಲುಪಲು ಪ್ರಬಲ ಅಂದೋಲನ ನಡೆಸಬೇಕಾಗಿದೆ.

(ಈ ಮಹಿಳಾ ದಿನದಂದು ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರು ಹಾಗೂ ಸಿಐಟಿಯು ಕಾರ್ಮಿಕ ಸಂಘಟನೆಯ ಪ್ರಥಮ ಮಹಿಳಾ ಮತ್ತು ಪ್ರಸ್ತುತ ಅಖಿಲ ಭಾರತ ಅಧ್ಯಕ್ಷರು ಆಗಿರುವ ಕಾ. ಹೇಮಲತಾ ಅವರ ಸಂದೇಶ.)

ಅನುವಾದ : **ಶಮಿಮಾ ಮುಜಿಬ್.**
ತುಮಕೂರು

ಮಾರ್ಚ್ 8 ರಂದು ಜಗತ್ತಿನಾದ್ಯಂತ ಮಹಿಳೆಯರು ಅಂತರಾಷ್ಟ್ರಿಯ ಮಹಿಳಾ ದಿನಾಚರಣೆಗೆ ಸಿದ್ಧರಾಗುತ್ತಿದ್ದಾರೆ. ಬ್ರಾಂಡ್‌ದಾರರು ಸರದಿ ಸಾಲಿನಲ್ಲಿ ನಿಂತು ಗೃಹ ಬಳಕೆಯ ವಸ್ತುಗಳಿಂದ ಆರಂಭಿಸಿ, ವಿಮಾನ ಯಾನದ ತನಕ ವಿವಿಧ ಸಾಮಗ್ರಿಗಳಾದ ಅಲಂಕಾರಿಕ ವಸ್ತುಗಳು, ಟೆಲಿಕಾಂ ಕಂಪನಿಗಳು, ಆಹಾರ ಸರಪಳಿ, ಆರೋಗ್ಯ ವರ್ಧಕಗಳಿಂದ ಹಿಡಿದು ಟ್ಯಾಕ್ಸಿ ಸೇವೆಯತನಕ ವಿಶೇಷ ಆಫರ್‌ಗಳನ್ನು ಮಹಿಳೆಯರಿಗೆ ಆಕರ್ಷಕವಾಗುವಂತೆ ಬೇರೆ ಬೇರೆ ಅದಾಯದ ಮಟ್ಟದ ಮಹಿಳೆಯರಿಗೆ ನೀಡುವ ಮೂಲಕ ಜಾಹಿರಾತುಗಳನ್ನು ಸಿದ್ಧಪಡಿಸಿ ಈ ಅವಧಿಯಲ್ಲಿ ಪ್ರದರ್ಶಿಸಲಾಗುತ್ತಿದೆ. ಸಲಹೆಗಾರರು ವಿವಿಧ ವಿಚಾರಗಳನ್ನು ಕುರಿತು ಉಚಿತ ಸಲಹೆಗಳನ್ನು ನೀಡುತ್ತಾರೆ. ತಾಳ್ಮೆ, ಮುತುವರ್ಜಿ ವಹಿಸುವುದು, ಸಮ ಚಿತ್ತತೆ, ಸಾಮರ್ಥ್ಯ, ನಂಬಿಕೆ, ಪ್ರೀತಿ – ಮುಂತಾದ ಮಹಿಳೆಯರ ಗುಣಗಳನ್ನು ಅದರ್ಶವಾಗಿ ಬಿಂಬಿಸಿ, ಆ ಕುರಿತಾದ ಶುಭಾಶಯ ಪತ್ರಗಳನ್ನು ಮುದ್ರಿಸಲಾಗುತ್ತಿದೆ. ಮಹಿಳಾ ಸಾಧಕಿಯರ ಹಾಗು ಸಾಧಕರ– ಜೀವನದಲ್ಲಿ ಮಹಿಳೆಯರ ಪಾತ್ರ ಕುರಿತು ಮಾಧ್ಯಮಗಳು ಚಾನಲ್‌ಗಳು ಚರ್ಚೆಗಳನ್ನು ಸಂಘಟಿಸುತ್ತಿವೆ. ತಾವು ಸಾಮಾಜಿಕ ಪ್ರಜ್ಞೆ ಹೊಂದಿದ್ದೇವೆ ಎಂಬುದನ್ನು ಬಿಂಬಿಸುತ್ತಲೇ, ಈ ಸಂದರ್ಭವನ್ನು ಬಳಸಿಕೊಂಡು ಅವರ ಉತ್ಪನ್ನಗಳ ಮಾರಾಟ ಮಾಡಿ ತಮ್ಮ ಲಾಭಾಂಶವನ್ನು ಹೆಚ್ಚಿಸಿಕೊಳ್ಳುವುದೇ ಕಾರ್ಪೊರೇಟ್ ಕಂಪನಿಗಳ ಉದ್ದೇಶವಾಗಿದೆ.

ಈ ಗದ್ದಲದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ನಿಜವಾದ ಉದ್ದೇಶ, ಕಾರಣ, ಹಿನ್ನೆಲೆಗಳು ಉದ್ದೇಶಪೂರ್ವಕವಾಗಿ ಕಳೆದು ಹೋಗಿದೆ. ನಮ್ಮ ದೇಶದ ಬಹುಪಾಲು ಮಹಿಳೆಯರು ಅಸಂಘಟಿತ ವಲಯದ ಕಾರ್ಮಿಕರಾಗಿದ್ದಾರೆ. ಬಡತನ, ಅನಕ್ಷರತೆ, ಕಡಿಮೆ ಕೂಲಿ, ಕೂಲಿ ಇಲ್ಲದ ದುಡಿತದ ಬಲೆಗೆ ಸಿಲುಕಿದ್ದಾರೆ. ವಿಶೇಷ ಆರ್ಥಿಕ ವಲಯದಲ್ಲಿರುವ ದೊಡ್ಡ ಕಂಪನಿಗಳ ಮಹಿಳಾ ಕಾರ್ಮಿಕರು, ದೊಡ್ಡ ಬ್ರಾಂಡ್‌ಗಳಿಗಾಗಿ ತಮ್ಮ ಮನೆಗಳಿಂದಲೇ ಗೃಹ ಕಾರ್ಮಿಕರಾಗಿ ದುಡಿಯುವ ಮಹಿಳಾ ಕಾರ್ಮಿಕರ ಸ್ಥಿತಿಗತಿಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಕಾರ್ಮಿಕ ಸಂಘಟನೆಯಲ್ಲಿ ಅಪಾರ ಅನುಭವವನ್ನು ಪಡೆದ್ದಿರುವ ಹಾಲಿ ಹಿರಿ ಪತ್ರಕರ್ತರಾಗಿರುವ ಸಂಗಾತಿ ಆರ್. ಜವಹಾರ್ ಅವರ ಸಂಶೋಧನಾ ಪುಸ್ತಕ "ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ– ಮಾರ್ಚ್ 8ರ ನೈಜ ಕಥೆ" ಮಹತ್ವ ಪಡೆಯುತ್ತದೆ. ಹಲವು ಅಂತರಾಷ್ಟ್ರಿಯ ಸಮ್ಮೇಳನಗಳಲ್ಲಿ ಮಹಿಳಾ ಕಮುನಿಸ್ಟ್ ನಾಯಕಿಯರು ಮಾರ್ಚ್ 8 ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ರೂಪಗೊಳಿಸುವುದರಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ಸಂಶೋದಕ ಲೇಖಕರ ಪ್ರಕಾರ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ–ಯ ಅರಂಭವು 1889 ರಲ್ಲಿ ಪ್ಯಾರಿಸಿನಲ್ಲಿ ನಡೆದ ಎರಡನೇ ಅಂತರಾಷ್ಟ್ರಿಯವಾಗಿದೆ.

ಈ ಸಮ್ಮೇಳನದಲ್ಲಿ ಜರ್ಮನಿ, ಫ್ರಾನ್ಸ್, ಅಮೆರಿಕ, ಇಂಗ್ಲೆಂಡ್, ರಷ್ಯಾ, ಮತ್ತಿತರೆ ದೇಶಗಳ ಕಮ್ಯುನಿಷ್ಟರು ಭಾಗವಹಿಸಿದ್ದರು. ಪ್ರಸಿದ್ದ ಕಮ್ಯುನಿಸ್ಟ್ ಹಾಗು ಮಹಿಳಾ ಹಕ್ಕುಗಳ ಹೋರಾಟಗಾರ್ತಿ ಕ್ಲಾರಾ ಜೇಟ್ ಕಿಂಗ್ ಅವರು ಸಹ ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಅವರು ದುಡಿಯುವ ಮಹಿಳೆಯರ ಬಗ್ಗೆ ವಾದ ಮಂಡಿಸುತ್ತ ದುಡಿಯುವ "ಮಹಿಳೆಯರ ಬಿಡುಗಡೆ–ಯ ಹೋರಾಟ ಸಮಾಜವಾದಕ್ಕೆ ದುಡಿಯುವ ಪುರುಷರು ಜೊತೆಗೂಡಿ ಕೆಲಸ ಮಾಡುವುದರಲ್ಲಿದೆ" ಎಂದು ಪ್ರತಿಪಾದಿಸಿದರು. ಈ ಸಮ್ಮೇಳನದಲ್ಲಿ "ಪುರುಷ ಮತ್ತು ಮಹಿಳೆಯರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ, ಲಿಂಗತಾರತಮ್ಯ ಇಲ್ಲದೆ ಎಲ್ಲಾ ರಾಷ್ಟ್ರಗಳಲ್ಲಿ ಜಾರಿಗೊಳಿಸಬೇಕೆಂಬ ಬೇಡಿಕೆಯನ್ನು ಅಂಗಿಕರಿಸಲಾಯಿತು. ಇದೇ ಸಮ್ಮೇಳದಲ್ಲಿ ಮೇ 1 ರಂದು 8 ಗಂಟೆಯ ಕೆಲಸಕ್ಕೆ ಜಗತ್ತಿನಾದ್ಯಂತ ಹೋರಾಟ ನಡೆಸಲು ನಿರ್ಣಯವನ್ನು ಅಂಗಿಕರಿಸಲಾಗಿತ್ತು. ಮುಂದೆ 1890 ಮೇ ದಿನಾಚರಣೆಯಾಗಿ ಜಗತ್ತಿನ ಎಲ್ಲೆಡೆ ಅಚರಿಸಲಾಗುತ್ತಿರುವುದನ್ನು ಒಳಗೊಂಡು ಅ ಸಮಯದ ಹಲವು ಅಂತರಾಷ್ಟ್ರಿಯ ಸಮ್ಮೇಳನಗಳಲ್ಲಿ ಮಹಿಳಾ ಕಮುನಿಸ್ಟ್ ನಾಯಕಿಯರು ಮಾರ್ಚ್ 8 ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ರೂಪಗೊಳಿಸುವುದರಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ.

ಪುರುಷರು ಕೊಲೆಗಳಲ್ಲಿ ತೊಡಗಿರುವಾಗ, ಜೀವ–ಜೀವನಗಳ ರಕ್ಷಣೆಗೆ ಮಹಿಳೆಯರೇ ಹೋರಾಡಬೇಕಾಗುತ್ತದೆ.



– ಕ್ಲಾರಾ ಜೆಟ್ಕಿನ್

ಜಗತ್ತಿನಾದ್ಯಂತ ಸಮಾಜವಾದಿ ಕ್ರಾಂತಿಯ ಶತಮಾನೋತ್ಸವವನ್ನು ಆಚರಿಸುತ್ತಿರುವ ಈ ಹೊತ್ತಿನಲ್ಲಿ ರಷ್ಯನ್ ಕ್ರಾಂತಿಯು ಸಹ ಮಾರ್ಚ್ 8, 1917ರಲ್ಲಿಯೆ ಅರಂಭವಾಗಿದ್ದನ್ನು ನೆನೆಯಬೇಕಾಗಿದೆ, ಆ ಸಂಧರ್ಭದಲ್ಲಿ ಜವಳಿ ಕಾರ್ಮಿಕರು ಕೆಲಸ ನಿಲ್ಲಿಸಿ ಪೆಟ್ರೋಗಾಡಿನ ಬೀದಿಗಳಲ್ಲಿ ಆಹಾರಕ್ಕಾಗಿ ಮತ್ತು ಯುದ್ದ ನಿಲ್ಲಿಸಲು ಒತ್ತಾಯಿಸಿ ಹೋರಾಟ ನಡೆಸಿದ್ದರು. ರಷ್ಯಾದ ಕ್ರಾಂತಿಕಾರಿ ಅಲೆಕ್ಸಾಂಡ್ರ ಕೊಲಂತಾಯ್ ಹೀಗೆ ಅಭಿಪ್ರಾಯ ಪಡುತ್ತಾ–ರೆ: "1917 ಕ್ರಾಂತಿಯು ಮಹಿಳೆಯರಿಂದಾಗಿಯೇ ನಡೆಯಿತು, ಪೀಟರ್ಸ್ ಬರ್ಗ್‌ನ ಮಹಿಳೆಯರು ಕ್ರಾಂತಿಯನ್ನು ಆರಂಭಿಸಿದ್ದರು. ಝಾರ್ ವಿರುದ್ದವಾಗಿ ಮೊದಲ ಧ್ವನಿಯೆತ್ತಿದವರು ಮಹಿಳೆಯರೇ, ಅದ್ದರಿಂದ ಈ ಮಹಿಳಾ ದಿನಾಚರಣೆ ಖುಷಿಯನ್ನು ದುಪ್ಪಟ್ಟುಗೊಳಿಸಿದೆ.."

ಇಂಗ್ಲೆಂಡ್ ಮತ್ತು ಅಮೆರಿಕಾ ದೇಶಗಳು ಮಹಿಳೆಯರಿಗೆ ಮತದಾನದ ಹಕ್ಕನ್ನು ನೀಡುವ ಮೊದಲೆ ಕಾರ್ಮಿಕ ವರ್ಗದ ಅಧಿಕಾರವಿದ್ದ ಸಮಾಜವಾದಿ ರಷ್ಯಾ ಮಹಿಳೆಯರಿಗೆ ಮತದಾನದ ಹಕ್ಕನ್ನು ನೀಡಿತ್ತು. ಇಂದು ಮಹಿಳೆಯರ ಹಕ್ಕನ್ನು ಸಾರ್ವತ್ರಿಕವಾಗಿ ಗುರುತಿಸಲಾಗುತ್ತಿದೆ. ಸಮಾನ ಕೆಲಸಕ್ಕೆ ಸಮಾನ ವೇತನ, ಸಮಾನ ದುಡಿಮೆಯ ಹಕ್ಕು, ಹೆರಿಗೆ ರಜೆಯೊಂದಿಗೆ ಸಂಬಳ, ಕಾನೂನಾತ್ಮಕವಾಗಿ ನೀಡಿ ಸಮಾಜವಾದಿ ದೇಶಗಳಲ್ಲಿ ಇವನ್ನು ಜಾರಿಗೊಳಿಸಲಾಯಿತು. ಮಹಿಳೆಯರನ್ನು ಒಳಗೊಂಡು ಎಲ್ಲಾ ನಾಗರಿಕರಿಗೂ ಮಹಿಳೆಯರನ್ನು ರಷ್ಯಾದಲ್ಲಿ ಭೂಮಿಯ ಹಕ್ಕನ್ನು ನೀಡಲಾಯಿತು. ಸಮಾಜವಾದಿ ರಾಷ್ಟ್ರಗಳಲ್ಲಿ ಮಹಿಳೆಯರ ವಿಮೋಚನೆಗೆ ಹಾಗು ಎಲ್ಲಾ ರಂಗಗಳಲ್ಲಿ ಮುನ್ನಡೆ ಸಾಧಿಸಲು ಗಮನ ನೀಡಲಾಯಿತು.

ಮಹಿಳೆಯ ಹಕ್ಕುಗಳಿಗೆ ಹಾಗೂ ವಿಮೋಚನೆಗೆ ನಡೆಸಿದ ಎಲ್ಲಾ ಚಳುವಳಿಗಳನ್ನು ಸ್ಮರಿಸುತ್ತಾ, ದುಡಿವ ಜನರ ಮೇಲಾಗುತ್ತಿರುವ ನವ ಉದಾರಿಕರಣ ನೀತಿಗಳ ದಾಳಿಗಳಿಂದ ಉಂಟಾಗಿರುವ ಅತೃಪ್ತಿ ಹಾಗು ಜಗತ್ತಿನಾದ್ಯಂತ ಬಲಪಂಥಿಯ ಶಕ್ತಿಗಳು ಸಮಾಜದ ಐಕ್ಯತೆಯನ್ನು ವಿಭಜನಾಕಾರಿ ಶಕ್ತಿಗಳು ತಂದೊಡ್ಡಿರುವ ಸವಾಲುಗಳನ್ನು ಎದುರಿಸಿ, ಚಳುವಳಿಯನ್ನು ಮುಂದೆ ಕೊಂಡು ಹೋಗಬೇಕಾದ ಕುರಿತು ಈ ಅಂತರಾಷ್ಟ್ರಿಯ ಮಹಿಳಾ ದಿನಾಚರಣೆ ಚರ್ಚಿಸಬೇಕಾಗಿದೆ. ಭಾರತದಲ್ಲಿ ಅರ್.ಎಸ್.ಎಸ್. ನೇತೃತ್ವದ ಬಿಜೆಪಿ ಸರ್ಕಾರ, ಅಮೇರಿಕಲ್ಲಿ ಟ್ರಂಪ್ ನೇತೃತ್ವದ ಸರ್ಕಾರವು ಸಹ ಮಹಿಳೆಯರ ಹಕ್ಕು ಬಾದ್ಯತೆಗಳ ಬಗ್ಗೆ ಪ್ರತಿಗಾಮಿ ನಿಲುವುಗಳನ್ನು ತಾಳಿದ್ದಾರೆ. ಈ ಪ್ರತಿಗಾಮಿ ನಿಲುವುಗಳ ಬಗ್ಗೆ ಮಹಿಳೆಯರು ಪ್ರಬಲ ಪ್ರತಿರೋಧ ತೋರುತ್ತಿರುವುದು ಸ್ವಾಗತಾರ್ಹವಾಗಿದೆ. ಸಾವಿರಾರು ಮಹಿಳೆಯರು, ಪುರುಷರು ಟ್ರಂಪ್ ಆಧಿಕಾರ ಸ್ವಿಕರಿಸಿದ ತಕ್ಷಣ ಅತನ ವಿರುದ್ದ ಜಗತ್ತಿನಾದ್ಯಂತ 'ವಿಮನ್ಸ್ ಮಾರ್ಚ್' ಚಳುವಳಿಯನ್ನು ನಡೆಸಿದ್ದಾರೆ.

ಈ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ–ಯಂದು ಮಹಿಳಾ ಸಮಾನತೆ ಹಾಗೂ ವಿಮೋಚನೆಗಳ ಸಂದೇಶದೊಂದಿಗೆ, ಮಹಿಳೆಯರಿಗೆ ಸಭ್ಯ ಉದ್ಯೋಗ ಹಾಗೂ ಕೆಲಸದ ಸ್ಥಳಗಳಲ್ಲಿ ಭದ್ರತೆ, ಹಲವು ತ್ಯಾಗಗಳಿಂದ ನಮ್ಮ ದೇಶದ ಮಹಿಳಾ ಕಾರ್ಮಿಕರು ಗಳಿಸಿದ ಹಕ್ಕುಗಳ ಜಾರಿಗೆ, ವಿಶಾಲವಾಗಿ ಹರಡಿಕೊಂಡಿರುವ ತಲುಪದೆ ಇರುವ ಮಹಿಳೆಯರನ್ನು ತಲುಪಲು ಪ್ರಬಲ ಅಂದೋಲನ ನಡೆಸಬೇಕಾಗಿದೆ. ಈ ದಿನ – ಮಹಿಳೆಯರ ಮೇಲೆ ದಬ್ಬಾಳಿಕೆ, ದೈನಂದಿನ ಮಹಿಳಾ ಸಮಸ್ಯೆಗಳು, ನವ ಉದಾರಿಕರಣ ನೀತಿಗಳಿಂದ ಉಂಟಾದ ಮಹಿಳೆಯರ ಶೋಚನಿಯ ಸ್ಥಿತಿ – ಇವುಗಳ ಬಗ್ಗೆ ಜಾಗೃತಿ ಮೂಡಿಸಿ, 1917ರ ಕ್ರಾಂತಿಯ ಮನೋಭಾವವನ್ನು ಬೆಳೆಸಬೇಕಾಗಿದೆ. ●



ಟ್ರಂಪ್ ಅಧ್ಯಕ್ಷ ಪದಗ್ರಹಣದಂದು ವಾಶಿಂಗ್ಟನ್ ನಲ್ಲಿ 'ವಿಮೆನ್ಸ್ ಮಾರ್ಚ್' ಜನವರಿ 21, 2017

1. ಮಹಿಳಾ ಕಾರ್ಮಿಕರಿಗೆ ಸಮಾನತೆ ಕೇವಲ ಕಾನೂನಿನಲ್ಲಿ ಮಾತ್ರವಲ್ಲ ಬದುಕಿನ ಎಲ್ಲ ಸ್ಥರದಲ್ಲಿಯೂ ದೊರಕಬೇಕು. ಅದಕ್ಕಾಗಿ ಮಹಿಳಾ ಕಾರ್ಮಿಕರು ಸಾರ್ವಜನಿಕ ಉದ್ದಿಮೆಗಳು ಮತ್ತು ಸರ್ಕಾರದ ಆಡಳಿತದಲ್ಲಿ ಪಾಲ್ಗೊಳ್ಳುವುದು ಹೆಚ್ಚಾಗಬೇಕು"
2. "ಸಮಾನ ಉದ್ಯೋಗಾವಕಾಶ, ಸಮಾನ ವೇತನ, ಸಮಾನ ವಿಶ್ರಾಂತಿ, ಮನರಂಜನೆ, ಸಾಮಾಜಿಕ ವಿಮೆ, ಶಿಕ್ಷಣ, ತಾಯಿ ಮತ್ತು ಮಗುವಿನ ರಕ್ಷಣೆಗೆ ಸರ್ಕಾರದ ಮಹತ್ವ, ಪೂರ್ಣ ವೇತನದೊಂದಿಗೆ ಹೆರಿಗೆ ರಜಾ, ದೊಡ್ಡ ಕುಟುಂಬಗಳ ಮತ್ತು ಅವಿವಾಹಿತ ತಾಯಂದಿರಿಗೆ ಸರ್ಕಾರದ ಹೆಚ್ಚುವರಿ ಸೌಲಭ್ಯ, ವ್ಯಾಪಕವಾಗಿರುವ ಹೆರಿಗೆ ಕೇಂದ್ರಗಳು ಮತ್ತು ಶಿಶುಪಾಲನಾ ಕೇಂದ್ರಗಳನ್ನು ಪಡೆಯುವ ಮೂಲಕ –ಆರ್ಥಿಕ ಸಾಮಾಜಿಕ ಸಾಂಸ್ಕೃತಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಸೋವಿಯತ್ ರಷ್ಯಾದ ಮಹಿಳೆಯರು ಮತ್ತು ಪುರುಷರು ಸಮಾನವಾದ ಅಧಿಕಾರವನ್ನು ಪಡೆಯುತ್ತಾರೆ"


ಸೋವಿಯತ್ ರಷ್ಯಾದ ಸಂವಿಧಾನದ 122 ನೇ ಕಲಮು. 1936



"ಅಡುಗೆ ಮನೆಯಿಂದ ಆಚೆಗೆ ಬನ್ನಿ" ಮಹಿಳಾ ದಿನದ ಪ್ರಚಾರಾಂದೋಲನದ ಪೋಸ್ಟರ್ 1931

"ಮಹಿಳೆಯರಿಗೆ ನಿಜವಾದ ಸ್ವಾತಂತ್ರ ಮತ್ತು ಸಮಾನತೆ ದೊರಕಬೇಕೆಂದರೆ ಹೊಸ ಸಾಮಾಜಿಕ ಮತ್ತು ಉತ್ಪಾದನಾ ವಿಧಾನಗಳಲ್ಲಿ ಅವರನ್ನು ತೊಡಗಿಸಬೇಕು. ಮಹಿಳೆಗೆ ಸಿಗುವ ಒಂದೊಂದೇ ಹಕ್ಕು ಅವಳ ವಿಮೋಚನೆಯ ದಾರಿಯ ಮೆಟ್ಟಿಲುಗಳು.

– ವಿ.ಐ.ಲೆನಿನ್



ಬದಲಾವಣೆ ಮನುಷ್ಯರಿಗೆ ಬದುಕು ಕಲ್ಪಿಸಲು ಬೇಕು, ಬದುಕು ಕಿತ್ತುಕೊಳ್ಳಲಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆ ನೀಡುವ ಆಡಳಿತ ಇದು. ಮಹಿಳೆಯರ ಸರ್ವಾಂಗೀಣ ಅಭಿವೃದ್ಧಿಗೆ ಸಂಪೂರ್ಣ ಗಮನ ಕೊಡುವತ್ತ ಪೂರ್ಣ ಲಕ್ಷ ವಹಿಸಿದ್ದ ಸಮಾಜವಾದೀ ವ್ಯವಸ್ಥೆಯೇ ಪರ್ಯಾಯ. ಬದಲಾವಣೆಗೆ ಧೈರ್ಯಮಾಡೋಣ.

ಇತಿಹಾಸ ಬಗೆಯೋಣ–ಇತಿಹಾಸ ಬರೆಯೋಣ ಮಾರ್ಚ್ 8 ರ ಯಶೋಗಾಥೆ

ಕೆ.ಎಸ್. ವಿಮಲಾ

ಅಂತರ ರಾಷ್ಟ್ರೀಯ ಮಹಿಳಾ ದಿನ ಮಾರ್ಚ್ 8. ಒಂದು ಹೊಸ ಬೆಳಗಿಗಾಗಿ, ಒಂದು ಬದಲಾವಣೆಗಾಗಿ ಹುಯ್ಲಿಟ್ಟು ಹೋರಾಟ ಮಾಡಿದ ಎಷ್ಟೊಂದು ಯಶೋಗಾಥೆಗಳ ಸಮ್ಮಿಲನದ ದಿನವಿದು. ಮೊದ ಮೊದಲು ಅಂದುಕೊಂಡಿದ್ದೆವು ಸಿದ್ಧಪಡಿಸಿದ ಕಾರ್ಖಾನೆಯ ಮಹಿಳಾ ಕಾರ್ಮಿಕರು ನಡೆಸಿದ ಹೋರಾಟದ, ಗಳಿಸಿದ ಯಶಸ್ಸಿನ ನೆನಪಿಗಾಗಿ ಈ ದಿನ. ಮತ್ತೆ ನಾವು ನಡೆಸಬೇಕಾದ ದಣಿವರಿಯದ ಹೋರಾಟದ ಮುಂಚಲನೆಗೆ ಒಂದಿಷ್ಟು ಗ್ಲೂಕೋಸ್ ಪಡೆಯುವ ದಿನವೆಂದು. ಆದರೆ ಇತಿಹಾಸ, ಇಲ್ಲಿ ಬಗೆದಷ್ಟೂ ಸಿಗುವ ಮೊಗೆಮೊಗೆದು ಬೊಗಸೆಯಲ್ಲಿ ತುಂಬಿಕೊಂಡಷ್ಟೂ ತೀರದ ಅಗಾಧ ಬುಗ್ಗೆ. ಈ ದಿನ ಕೇವಲ ಒಂದು ವರ್ಗ ತನ್ನ ಕೆಲವು ಬೇಡಿಕೆಗಳಿಗಷ್ಟೇ ಮಾಡಿದ ಹೋರಾಟದ ನೆನಪಲ್ಲ. ಬದಲಿಗೆ ಇದರ ಗರ್ಭದಲ್ಲಿ ಅಡಗಿವೆ ಹಲವು ಹೋರಾಟಗಳು.

ಮೊದಲ ಪುಟದಲ್ಲಿ ಸಿಕ್ಕಿದ್ದು '1908 ರಲ್ಲಿ 15 ಸಾವಿರ ಮಹಿಳಾ ಕಾರ್ಮಿಕರು ನಿಗದಿತ ಅವಧಿಯ ದುಡಿತ, ಉತ್ತಮ ವೇತನ ಮತ್ತು ಸಂಘಟನೆಯ ಹಕ್ಕು ಮತ್ತು ಮತದಾನದ ಹಕ್ಕಿಗಾಗಿ ಧೀ–ರೋದಾತ್ತ ಹೋರಾಟ ಪ್ರಭುತ್ವವನ್ನು ಮಣಿಸಿತು. ಹಕ್ಕುಗಳನ್ನು ಬೇಡಿಕೆಗಳನ್ನು ಪಡೆದಾಯಿತು. 1909 ರಲ್ಲಿ ಅಮೆರಿಕಾದ ಸಮಾಜವಾದಿ ಪಕ್ಷದ ಕರೆಯ ಮೇರೆಗೆ ರಾಷ್ಟ್ರೀಯ ಮಹಿಳಾ ದಿನವನ್ನು ಫೆಬ್ರುವರಿ 28 ರಂದು ಆಚರಿಸಲಾಯಿತು. ನಂತರ 1913ರ ವರೆಗೂ ಅಮೆರಿಕಾದಲ್ಲಿ ಫೆಬ್ರುವರಿ ತಿಂಗಳ ಕೊನೆಯ ದಿನವನ್ನು ರಾಷ್ಟ್ರೀಯ ಮಹಿಳಾ ದಿನವನ್ನಾಗಿ ಆಚರಿಸಲಾಗುತ್ತಿತ್ತು. ಈ ಮಧ್ಯದಲ್ಲಿ 1910 ರಲ್ಲಿ ಕೋಪನ್ ಹೇಗನ್ ನಲ್ಲಿ ನಡೆದ ಎರಡನೇ ಅಂತರ ರಾಷ್ಟ್ರೀಯ ದುಡಿಯುವ ಮಹಿಳೆಯರ ಸಮ್ಮೇಳನದಲ್ಲಿ ಜರ್ಮನಿಯ ಸಮಾಜವಾದೀ ಪಕ್ಷದ ನಾಯಕಿ ಕ್ಲಾರಾ ಝೆಟ್ಕಿನ್‌ರವರು ಎಲ್ಲ ದೇಶಗಳಲ್ಲಿ ಈ ದಿನವನ್ನು ಮಹಿಳಾ ದಿನವನ್ನಾಗಿ ಆಚರಿಸಬೇಕು ಮತ್ತು ಮಹಿಳೆಯರ ಬೇಡಿಕೆಗಳ ಹಕ್ಕೊತ್ತಾಯ ಮಂಡಿಸುವ ದಿನವದಾಗಬೇಕೆಂದು ಪ್ರಸ್ತಾಪವನ್ನು ಮುಂದಿಟ್ಟರು. 17 ರಾಷ್ಟ್ರಗಳನ್ನು ಪ್ರತಿನಿಧಿಸಿ ಪಾಲ್ಗೊಂಡ 100 ಕ್ಕೂ ಹೆಚ್ಚು ಜನ ಕಾರ್ಮಿಕ ಸಂಘಗಳ ಸಮಾಜವಾದೀ ಪಕ್ಷಗಳ ಮಹಿಳಾ ಸದಸ್ಯರು, ದುಡಿಯುವ ಮಹಿಳೆಯರು, ಮಹಿಳಾ ಕ್ಲಬ್‌ಗಳ ಸದಸ್ಯರು ಜೊತೆಗೆ ಫಿನಿಷ್ ಪಾರ್ಲಿಮೆಂಟಿನ ಮೂವರು ಚುನಾಯಿತ ಪ್ರತಿನಿಧಿಗಳು ಒಕ್ಕೊರಲಿನಿಂದ ಪ್ರಸ್ತಾಪಕ್ಕೆ ಬೆಂಬಲಿಸಿ ಕ್ಲಾರಾ ಝೆಟ್ಕಿನ್ ರವರನ್ನು ಅಭಿನಂದಿಸಿದರು. ಅಂದಿನಿಂದ ಈ ದಿನ ಅಂದರೆ ನಮ್ಮ ಕ್ಯಾಲೆಂಡರಿನ ಮಾರ್ಚ್ 8 ಅಂತರ ರಾಷ್ಟ್ರೀಯ ಮಾನ್ಯತೆ ಗಳಿಸಿತು' ಎಂದು. ಆದರೆ ಈ ಇತಿಹಾಸದ ಮೊದಲ ಪುಟಗಳಿಗಿಂತಲೂ ಮುಂಚೆಯೇ ಚರಿತ್ರೆಯನ್ನು ಸೃಷ್ಟಿಸಿದ ಸಂಗತಿಗಳಿವೆ.

ಮಹಿಳಾ ದಿನದ 'ಪೂರ್ವೇತಿಹಾಸ'

1789ರಲ್ಲಿ ನಡೆದ ಫ್ರೆಂಚ್ ಕ್ರಾಂತಿಯ ಸಂದರ್ಭದಲ್ಲಿ ಪರ್ಷಿಯನ್ ಮಹಿಳೆಯರು ಮತದಾನದ ಹಕ್ಕಿಗಾಗಿ ನಡೆಸಿದ ವರ್ಸೇಲಸ್ ಮಾರ್ಚ್ ನಲ್ಲಿ ಸ್ವಾತಂತ್ರ ಸಮಾನತೆ ಮತ್ತು ಸಹೋದರೀತ್ವ ದ ಕರೆ ನೀಡಿದರು.

1857 ರಲ್ಲಿ ಮಾರ್ಚ್ 8 ರಂದು ನ್ಯೂಯಾರ್ಕ್‌ನ ಸಿದ್ಧ ಉಡುಪು ಕಾರ್ಖಾನೆಯಲ್ಲಿ, ಮಿತಿಮೀರಿದ ದುಡಿತ, ಕಡಿಮೆ ವೇತನ, ಅಮಾನವೀಯ ದುಡಿಮೆಯ ಸ್ಥಿತಿ ಮತ್ತು ಮತದಾನದ ಹಕ್ಕಿಲ್ಲದಿರುವುದರ ವಿರುದ್ಧ ಪ್ರಥಮ ಮಹಿಳಾ ಕಾರ್ಮಿಕರ ಪ್ರತಿಭಟನೆ ನಡೆಯಿತು.

1866 ರಲ್ಲಿ ನಡೆದ ಪ್ರಥಮ ಅಂತರ ರಾಷ್ಟ್ರೀಯ ಕಾರ್ಮಿಕರ ಸಂಘದ ಕಾಂಗ್ರೆಸ್ ಮಹಿಳೆಯರ ದುಡಿಮೆಯ ಕುರಿತು ಗೊತ್ತುವಳಿಯೊಂದನ್ನು ಅಂಗೀಕರಿಸಿ ಅದುವರೆಗಿನ 'ಮಹಿಳೆಯ ಸ್ಥಾನ ಮನೆಯಲ್ಲಿ' (ಗೃಹಿಣೀ ಗೃಹಮುಚ್ಯತೆ) ಎಂಬ ಅಭಿಪ್ರಾಯಕ್ಕೆ ಕೊಡಲಿ ಪೆಟ್ಟು ನೀಡಿತು.

1889 ರಲ್ಲಿ ಪ್ಯಾರಿಸ್ ನಲ್ಲಿ ನಡೆದ ಎರಡನೇ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ತನ್ನ ಮೊದಲ ಭಾಷಣದಲ್ಲಿಯೇ ಜರ್ಮನಿಯ ಸಮಾಜವಾದಿ ನಾಯಕಿ ಕ್ಲಾರಾ ಝೆಟ್ಕಿನ್ ಮಹಿಳೆಯರ ಸಮಸ್ಯೆಗಳ ಬಗ್ಗೆ ಪ್ರಸ್ತಾಪಿಸಿದರು. ಮಹಿಳೆಯರ ಹಕ್ಕುಗಳ ಬಗ್ಗೆ ಪ್ರತಿಪಾದಿಸಿದ ಅವರು ತಾಯಿ ಮತ್ತು ಮಗುವಿನ ಸುರಕ್ಷೆಯ ಬಗ್ಗೆ ಹಾಗೂ ಮಹಿಳೆಗೆ ರಾಷ್ಟ್ರೀಯ ಹಾಗೂ ಅಂತರ ರಾಷ್ಟ್ರೀಯ ಸ್ತರದಲ್ಲಿ ನಡೆಯುವ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಸಿಗಬೇಕಾದ ಅವಕಾಶದ ಬಗ್ಗೆಯೂ ಒತ್ತಾಯಿಸಿದರು. ನಂತರ 1899 ರಲ್ಲಿ ನೆದರ್ ಲ್ಯಾಂಡ್ಸ್ ನ ಹೇಗ್ ನಲ್ಲಿ ಯುದ್ಧವಿರೋಧಿ ಮಹಿಳಾ ಸಮ್ಮೇಳನವೊಂದು ಆಯೋಜಿತಗೊಂಡಿತು. ಅದು 20 ನೇ ಶತಮಾನದ ಯುದ್ಧ ವಿರೋಧಿ ಆಂದೋಲನಕ್ಕೆ ಮುನ್ನುಡಿಯಾಯಿತೆಂದು ಹೇಳಲಾಗುತ್ತದೆ.

ಈ ಎಲ್ಲ ವಿದ್ಯಮಾನಗಳನ್ನು ಹಿನ್ನೆಲೆಯನ್ನಾಗಿ ಹೊಂದಿದ ಘಟನೆಯಾಗಿ 1907ರ ಫೆಬ್ರುವರಿ 28 ರಂದು ನಡೆದ ಪ್ರಥಮ ಮಹಿಳಾ ದಿನವನ್ನು ಗುರುತಿಸಬೇಕೆನ್ನುತ್ತದೆ ಇತಿಹಾಸ. ಇಲ್ಲಿ ಕೂಡ ಸಾಮಾನ್ಯವಾಗಿ ವಿವರಿಸುವಂತೆ 8 ಘಂಟೆಗಳ ಕೆಲಸ, ಉತ್ತಮ ವೇತನ, ಇತ್ಯಾದಿಗಳಲ್ಲದೆ ಪ್ರಮುಖ ಬೇಡಿಕೆಯಿದ್ದುದು ಮಹಿಳೆಯರಿಗೆ ಸಿಗಬೇಕಾದ ರಾಜಕೀಯ ಹಕ್ಕುಗಳಿಗಾಗಿ. 20 ನೇ ಶತಮಾನದ ಆದಿಯಲ್ಲಿ ಪ್ರಮುಖ ಕೇಂದ್ರಗಳಾದ ಮಾಂಟ್ರಿಯಲ್, ಚಿಕಾಗೋ, ಫಿಲಡೆಲ್ಫಿಯಾ ಮತ್ತು ನ್ಯೂಯಾರ್ಕ



'ವಿಶ್ವಶಾಂತಿಗಾಗಿ ಮಹಿಳೆಯರು' ಮಹಿಳಾ ದಿನದ ಗ್ರೀಟಿಂಗ್ ಕಾರ್ಡ್ 1973

ನಗರಗಳಲ್ಲಿ ನಡೆದ ಕಾರ್ಮಿಕ ಮುಷ್ಕರಗಳಲ್ಲಿ ಪಾಲ್ಗೊಂಡು ಅಮಾನವೀಯ ದುಡಿಮೆ, ಬಾಲ ಕಾರ್ಮಿಕ ಪದ್ಧತಿಗಳ ವಿರುದ್ಧ ಮತ್ತು ಉತ್ತಮ ವೇತನ, ಮತದಾನದ ಹಕ್ಕುಗಳಿಗಾಗಿ ಹೋರಾಡಿದ ಸಾವಿರಾರು ಮಹಿಳೆಯರಿಗೆ ಸನ್ಮಾನವಾಗಿ ನ್ಯೂಯಾರ್ಕ್ ನಗರದಲ್ಲಿ ಆಚರಿಸಲಾಯಿತು.

ರಾಜಕೀಯ ಹಕ್ಕಿಗಾಗಿ

1908 ರಲ್ಲಿ ಅಮೇರಿಕದ ಸಮಾಜವಾದಿ ಪಕ್ಷದ ಮಹಿಳೆಯರು ತಮ್ಮ ಪಕ್ಷದಲ್ಲಿ ಒತ್ತಾಯಿಸಿ ಮಹಿಳೆಯರ ರಾಜಕೀಯ ಹಕ್ಕಿಗಾಗಿ ಮತದಾನದ ಹಕ್ಕಿನ ದಿನವನ್ನಾಗಿ ಪ್ರತಿ ಫೆಬ್ರುವರಿಯ ಕೊನೆಯ ಭಾನುವಾರವನ್ನು ಘೋಷಿಸಲು ಒಪ್ಪಿಸಿದರಂತೆ. ಮತ್ತು 1909ರಲ್ಲಿ ಅಂಥಹ ಒಂದು ಆಚರಣೆಯನ್ನು ಸಾಧಿಸಲಾಯಿತು ಕೂಡ.

1910 ರಲ್ಲಿ ಕ್ಲಾರಾಝೆಟ್ಕಿನ್ ರವರ ಈಗಾಗಲೇ ಪ್ರಸ್ತಾಪವನ್ನು ಒಪ್ಪಿದ ಎರಡನೇ ಅಂತರ ರಾಷ್ಟ್ರೀಯ ದುಡಿಯುವ ಮಹಿಳೆಯರ ಸಮಾವೇಶದ ನಂತರ 1911 ರಲ್ಲಿ ವಿಶ್ವದ ಕೆಲವು ರಾಷ್ಟ್ರಗಳಲ್ಲಿ ಎಂದರೆ ಡೆನ್ಮಾರ್ಕ್, ಆಸ್ಟ್ರಿಯಾ ಜರ್ಮನಿ, ಸ್ವಿಟ್ಜರ್ ಲ್ಯಾಂಡ್ ಗಳಲ್ಲಿ ಮಾರ್ಚ್ 19 ರಂದು ನಡೆಸಲಾಯಿತು ಎಂದು ಚರಿತ್ರೆ ಹೇಳುತ್ತದೆ. ಒಂದು ಮಿಲಿಯನ್‌ಗೂ ಮೀರಿ ಪುರುಷ ಮಹಿಳೆಯರಿಬ್ಬರೂ ಮೆರವಣಿಗೆ, ಬಹಿರಂಗ ಸಭೆ ನಡೆಸಿದರು ಮತ್ತು ಅಲ್ಲಿ ಮಹಿಳೆಯರ ವಿರುದ್ಧದ ತಾರತಮ್ಯ ನಿವಾರಣೆ, ಕೆಲಸದ ಹಕ್ಕು, ಮತದಾನದ ಹಕ್ಕು, ತರಬೇತಿಯ ಅವಕಾಶ, ಸಾರ್ವಜನಿಕ ಹುದ್ದೆಗಳಲ್ಲಿ ಸ್ಥಾನಗಳ ಬೇಡಿಕೆ ಇಡಲಾಗಿತ್ತು.

ಕೇವಲ ಒಂದು ವಾರದ ಅಂತರದಲ್ಲಿ ಎಂದರೆ ಮಾರ್ಚ್ 25 ರಂದು ನ್ಯೂಯಾರ್ಕ್ ನಗರದಲ್ಲಿ 'ಟ್ರಯಾಂಗಲ್ ಶರ್ಟ್ ವೈಸ್ಟ್ ಕಂಪನಿ' ಯ ಬೆಂಕಿ ಅನಾಹುತದಲ್ಲಿ 140 ಜನ ವಲಸಿಗ ಮಹಿಳಾ ಕಾರ್ಮಿಕರು ಆಹುತಿಯಾದರು. ಕಾರ್ಮಿಕರು ಕೆಲಸದ ವೇಳೆಯಲ್ಲಿ ಹೊರ ಹೋಗದಂತೆ ತಡೆಯುವ ಸಲುವಾಗಿ ಕೆಲಸಮಾಡುವ ಕೋಣೆಗಳಿಗೆ ಹೊರಗಡೆಯಿಂದ ಬೀಗ ಹಾಕಿದ ಕಾರಣದಿಂದ ಬೆಂಕಿ ಹೊತ್ತಿದ್ದು ಗೊತ್ತಾದರೂ ಹೊರಬರಲಾರದೆ ಉಸಿರು ಕಟ್ಟಿ ಅವರು ಸತ್ತ ಬಗೆಯನ್ನು ಹಲವು ಲೇಖನಗಳು ವಿವರಿಸುತ್ತವೆ. ಈ ಅನಾಹುತ ಕೂಡ ಸಂಯುಕ್ತ ಸಂಸ್ಥಾನದಲ್ಲಿದ್ದ ಸಡಿಲ ಕಾರ್ಮಿಕ ಕಾನೂನು ಮತ್ತು ದುಸ್ತರದ ದುಡಿಮೆಯ ಸ್ಥಿತಿಯನ್ನು ವಿವರಿಸುತ್ತದೆ. ಆ ನಂತರ ನಡೆದ ಅಂತರ ರಾಷ್ಟ್ರೀಯ ಮಹಿಳಾ ದಿನದ ಸಂದರ್ಭದಲ್ಲಿ ಈ ಘಟನೆಗಳೂ ಕೂಡ ಪ್ರಸ್ತಾಪಿಸಲ್ಪಟ್ಟಿವೆ. ಇದರ ಜೊತೆಯೇ 1912 ರಲ್ಲಿ ಲಾರೆನ್ಸ್ ಫ್ಯಾಕ್ಟರಿಯ ಮುಷ್ಕರ ಕೂಡ ಅಷ್ಟೇ ಮಹತ್ವದ್ದು ಮತ್ತು ಅದು ಇಡೀ ವಿಶ್ವದ ದುಡಿಯುವ ವರ್ಗದ ಹೋರಾಟದ ಒಂದು ಮಹತ್ವದ ಮಜಲೆಂದು ಹೇಳಲಾಗುತ್ತದೆ.

'ಬ್ರೆಡ್ ಅಂಡ್ ರೋಸ್' ಮುಷ್ಕರ

ಈ ಮುಷ್ಕರವನ್ನು 'ಬ್ರೆಡ್ ಅಂಡ್ ರೋಸ್' ಮುಷ್ಕರವೆಂದೇ ಕರೆಯಲಾಗುತ್ತದೆ. ಕವಿಯೊಬ್ಬ(ಜಾನ್ ಓಪೆನ್ಹೇಮ್) ಜನರ ದಾರುಣತೆಯನ್ನು ವಿವರಿಸುತ್ತ ಮನುಷ್ಯನಿಗೆ ಕೇವಲ 'ಆಹಾರವಷ್ಟೇ ಅಲ್ಲ ಬದುಕಿನ ರಸಮಯ ಕ್ಷಣಗಳನ್ನು ಅನುಭವಿಸುವ ಅಗತ್ಯ, ಅವಕಾಶಗಳೂ ಬೇಕೆಂಬ' ಅರ್ಥದಲ್ಲಿ ಬರೆದ ಕವನದ ಸಾಲುಗಳಿವು. ವಿಶ್ವದಲ್ಲಿಯೇ ಪ್ರಥಮ ಔದ್ಯೋಗಿಕ ಮುಷ್ಕರವಿದೆಂದು ಹೇಳಲಾಗುತ್ತದೆ. ಅಂದು ಕೂಡ ಪ್ರಭುತ್ವ ಮತ್ತು ಬಂಡವಾಳದ ಸಾಂಗತ್ಯ ದುಡಿಯುವ ವರ್ಗವನ್ನು ಕಿತ್ತು ತಿನ್ನುತ್ತಿತ್ತು. ಬಟ್ಟೆ ಕಾರ್ಖಾನೆಗಳಲ್ಲಿ ಅತಿ ಹೆಚ್ಚು ದುಡಿಯುತ್ತಿದ್ದವರು ಮಹಿಳೆಯರು ಮತ್ತು ಮಕ್ಕಳು. ಅದೂ ಬಡತನ ದಾರಿದ್ರ್ಯದಲ್ಲಿ ಬದುಕಲಾರದೇ ತಾಯ್ನಾಡಿನಿಂದ ದೂರ ಬದುಕರಸಿ ವಲಸೆ ಬಂದವರು. ಶೋಷಣೆಯ ಬಾಧೆಯನ್ನು ಸಹಿಸಿ ಸಹಿಸಿ ತಾಳಲಾರದ ಸ್ಥಿತಿ ಉಂಟಾದಾಗ ಸಣ್ಣ ಕಿಡಿಯಾಗಿ ಪ್ರಾರಂಭವಾದ ಮುಷ್ಕರ ನಂತರ ಹೊತ್ತಿ ಉರಿದ ಜ್ವಾಲೆಯಾಯಿತು. ಸುಮಾರು ಎರಡು ತಿಂಗಳುಗಳ ಕಾಲ ನಡೆದ ಮುಷ್ಕರದಲ್ಲಿ ಮಹಿಳೆಯರ ಪಾತ್ರ ಅತ್ಯಂತ ಗಣನೀಯವಾದುದು ಎಂದು ಲೇಖಕರು ಬರೆಯುತ್ತಾರೆ. ಮತ್ತು ಅದು ಇಂದಿನ ದುಡಿಯುವ ವರ್ಗದ ಚಳುವಳಿಯ ಬುನಾದಿಯಾಯಿತು ಎಂದೂ ಹೇಳುತ್ತಾರೆ. 'ಇಂಡಸ್ಟ್ರಿಯಲ್ ವರ್ಕರ್ಸ್ ಆಫ್ ದಿ ವರ್ಲ್ಡ್' ಸಂಘಟನೆ ಈ ದಮನಿತರ ಪರವಾಗಿ ನಿಂತಿತಲ್ಲದೆ, ಒಂದು ವಿಶ್ವವ್ಯಾಪಕತೆಯನ್ನೂ ತಂದುಕೊಟ್ಟಿತೆಂದು

ಪುಟ 10 ಕ್ಕೆ



ಎಲ್ಲಾ ರಂಗಗಳಲ್ಲೂ ಮಹಿಳೆ–ಸೋವಿಯೆಟ್ ಪೋಸ್ಟರ್

ಇತಿಹಾಸ ಬಗೆಯೋಣ–ಇತಿಹಾಸ ಬರೆಯೋಣ....

ಪುಟ 9 ರಿಂದ

ಹೇಳಲಾಗುತ್ತದೆ.

ಉಳ್ಳವರನ್ನು ಎದುರಿಸುವುದೆಂದರೆ ಮುಳ್ಳಿನ ಮೇಲೆ ಬಿದ್ದಂತೆ ಎಂಬುದು ಗೊತ್ತಿದ್ದರೂ ಅದನ್ನು ಎದುರಿಸಲು ಮಹಿಳೆಯರು ಮುನ್ನುಗ್ಗಿದ್ದರು. ಪ್ರಭುತ್ವ ನಡೆಸುತ್ತಿದ್ದ ದಾಳಿ ದಬ್ಬಾಳಿಕೆ, ಆಕ್ರಮಣಗಳನ್ನೆದುರಿಸಲು ಪ್ರತಿಭಟನೆಯ ಮುಂಚೂಣಿಯಲ್ಲಿ ಮಹಿಳೆಯರು ನಿಲ್ಲುತ್ತಿದ್ದರು. ಮಹಿಳೆಯರು ಮತ್ತು ಮಕ್ಕಳ ಮೇಲೆ ದೌರ್ಜನ್ಯ ನಡೆಯಲಾರದು! ಎಂಬ ಭಾವನೆಯಲ್ಲಿ ಮಹಿಳೆಯರು ಮುಂಚೂಣಿಯಲ್ಲಿ ನಿಲ್ಲುತ್ತಿದ್ದರೆ, ಪೋಲೀಸ್ ಅಥವಾ ಮಿಲಿಟರಿ ಮಹಿಳೆಯರು ಮಕ್ಕಳು ಎಂದು ಲೆಕ್ಕಿಸದೆ ದಾಳಿ ನಡೆಸುತ್ತಿದ್ದರು. ಆದರೆ ಜಗ್ಗದೇ ಮಹಿಳೆಯರು ಪ್ರತಿಭಟನೆಯ ಹಾಡುಗಳನ್ನು ಹೇಳುತ್ತ ಮುನ್ನುಗ್ಗುತ್ತಿದ್ದರು. ಪ್ರತಿಭಟನೆಯ ಕಾರಣದಿಂದಾಗಿ ಚಿಕ್ಕ ಮಕ್ಕಳು ತೊಂದರೆಗೀಡಾಗ ಬೇಕಾಗಿ ಬಂದಿತ್ತು. ಆಗ ಯುರೋಪ್ ದೇಶಗಳಲ್ಲಿ ಪರಸ್ಪರ ಸಹಾಯದ ನೆಲೆಯಲಿ ಪ್ರಚಲಿತವಿದ್ದ ಪರಿಚಯಸ್ಥರು ಮತ್ತೊಬ್ಬರ ಮಕ್ಕಳನ್ನು ನೋಡಿಕೊಳ್ಳುವ ಪರಿಪಾಠ. ಅದೆಂದರೆ ಮಕ್ಕಳನ್ನು ನೋಡಿಕೊಳ್ಳುವ ಸಾಧ್ಯತೆಗಳಿದ್ದ ಕುಟುಂಬಗಳಿರುವ ಊರಿಗೆ ಮಕ್ಕಳನ್ನು ರವಾನಿಸುವುದು. ಅಂಥಹ ಒಂದು ತೀರ್ಮಾನವನ್ನು ಮಹಿಳಾ ಕಾರ್ಮಿಕರೇ ತೆಗೆದುಕೊಂಡಿದ್ದರು. ಆ ಮೂಲಕ ಮಕ್ಕಳಿಗೆ ಸಿಗುವ ಸೌಲಭ್ಯಗಳ ಜೊತೆ ಇಲ್ಲಿನ ದಾರುಣ–ತೆಯ ಮತ್ತು ಮುಷ್ಕರದ ಬಗ್ಗೆ ಹೊರ ಜಗತ್ತಿಗೆ ತಿಳಿಸುವುದೂ ಸಾಧ್ಯವಾಗಿತ್ತು. ಹಾಗೆ ಮಕ್ಕಳನ್ನು ಪರ ಊರಿಗೆ ಕಳಿಸುವ ಪ್ರಯತ್ನದಲ್ಲಿ ರೈಲು ಹತ್ತಿಸುವಾಗ ಪೋಲೀಸರಿಂದ ಹಲ್ಲೆಗೊಳಗಾದ ತಾಯಂದಿರೂ ಇದ್ದರು. ಈ ಹೊತ್ತಿಗೆ ಮಹಿಳಾ ದಿನದ ಪ್ರಾಮುಖ್ಯತೆ ಫ್ರಾನ್ಸ್, ನೆದರ್ ಲ್ಯಾಂಡ್ಸ್, ಸ್ವೀಡನ್ ಗಳಿಗೂ ತಲುಪಿಯಾಗಿತ್ತು.

1913 ರ ಹೊತ್ತಿಗೆ ನ್ಯೂಯಾರ್ಕ್ ನಗರದಲ್ಲಿ ನಡೆದ 1880ರ ಮಹಿಳಾ ಕಾರ್ಮಿಕರ ಹೋರಾಟದ ಚಿರಸ್ಥಾಯೀ ನೆನಪಿಗಾಗಿ ಮಹಿಳಾ ದಿನದ ಆಚರಣೆಯನ್ನು ಮಾರ್ಚ್ 8 ಕ್ಕೆ ವರ್ಗಾಯಿಸಲಾಗಿರುತ್ತದೆ. ಇದು ಅಮೇರಿಕಾ ಮತ್ತಿತರ ರಾಷ್ಟ್ರಗಳ ಮಹಿಳಾ ಕಾರ್ಮಿಕರ ಹೋರಾಟದ ಇತಿಹಾಸವಾದರೆ ಇನ್ನು ರಷ್ಯಾದ ಮಹಿಳೆಯರು 1913 ರ ಫೆಬ್ರುವರಿ ತಿಂಗಳ ಕೊನೆಯ ಭಾನುವಾರ ಮಹಿಳಾ ದಿನವನ್ನು ಆಚರಿಸಿದರೆಂದು ಹೇಳಲಾಗುತ್ತದೆ. ಪೀಟರ್ಸ್ ಬರ್ಗನಲ್ಲಿ ಪೋಲೀಸರ ಸರ್ಪಕಾವಲನ್ನೂ ಲೆಕ್ಕಿಸದೇ ಮಹಿಳೆಯರು ಮೆರವಣಿಗೆ ನಡೆಸುತ್ತಾರೆ. ಅವರ ಹೋರಾಟವೂ ಚಿರಸ್ಮರಣೀಯ ಹೋರಾಟವೇ. 1917 ರ ರಷ್ಯಾ ಕ್ರಾಂತಿಯ ಮುನ್ನುಡಿ ಬರೆದವರು ರಷ್ಯಾದ ಮಹಿಳೆಯರು ಎಂದು ಇತಿಹಾಸ ಹೇಳುತ್ತದೆ.

ಮಹಿಳಾ ವಿಮೋಚನೆಗೆ ಹಾದಿ ತೆರೆದ ರಷ್ಯನ್ ಕ್ರಾಂತಿ

ಪ್ರಥಮ ಮಹಾಯುದ್ಧದ ಸಂದರ್ಭವದು. ಶಾಂತಿಯ ಪ್ರಚಾರವಾಗಿ ರಷ್ಯಾದ ಮಹಿಳೆಯರು ಅಂತರ ರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸುತ್ತಾರೆ. ನಂತರದ ದಿನಗಳಲ್ಲಿ ಅದನ್ನು ವಿಶ್ವದ ಇತರ ರಾಷ್ಟ್ರಗಳ ಜೊತೆ ಸೇರಿಸಿ ಮಾರ್ಚ್ 8 ರಂದು ಆಚರಿಸುವ ನಿರ್ಧಾರಕ್ಕೆ ಬರಲಾಗುತ್ತದೆ. 1914ರಲ್ಲಿ ಯುರೋಪಿನ ಹಲವು ರಾಷ್ಟ್ರಗಳಲ್ಲಿ ಯುದ್ಧವಿರೋಧಿ ದಿನವನ್ನಾಗಿ ಅಂತರ ರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸಿ ಶಾಂತಿಗಾಗಿ ಮಹಿಳೆಯರ ಬೆಂಬಲವನ್ನು ಸಾರಲಾಗುತ್ತದೆ. ಲಂಡನ್ನಿನಲ್ಲಿ ಬೋ ದಿಂದ ಟ್ರಫಾಲ್ಗರ್ ಚೌಕದ ವರೆಗೆ 1914ರ ಮಾರ್ಚ್ 8 ರಂದು ಮೆರವಣಿಗೆ ನಡೆಸುತ್ತಾರೆ. ಅಲ್ಲಿ ಭಾಷಣ ಮಾಡಲು ಹೋಗುತ್ತಿದ್ದ ಸಿಲ್ವಿಯಾ ಪಾಂಕ್ಹರ್ಟ್ ಎಂಬ ಮಹಿಳೆಯನ್ನು ಬಂಧಿಸಲಾಗುತ್ತದೆ.

ರಷ್ಯಾದಲ್ಲಿ 1917 ಮಾರ್ಚ್ 8 ರಂದೇ ರಷ್ಯಾದ ಮಹಿಳೆಯರು ಝಾರಶಾಹಿಯನ್ನು ಕಿತ್ತೊಗೆದ ಕ್ರಾಂತಿಯ ಮುನ್ನುಡಿ ಬರೆಯುತ್ತಾರೆ. ಯುದ್ಧದ ಭೀಕರತೆ ಮತ್ತು ಆಹಾರದ ಅಲಭ್ಯತೆಯಿಂದ ರೊಚ್ಚಿಗೆದ್ದ ರಷ್ಯನ್ ಮಹಿಳೆಯರು ಬೀದಿಗಿಳಿಯುತ್ತಾರೆ. ಮತ್ತು ಯುವಕರು ಪುರುಷರು ಕಾರ್ಮಿಕರನ್ನು ಬೆಂಬಲಕ್ಕೆಳೆಯುತ್ತಾರೆ. ಪೋಲೀಸರ ಲಾಠಿ ಬೂಟುಗಳಿಗೂ ಅವರನ್ನು ಹಿಮ್ಮೆಟ್ಟಿಸಲು ಸಾಧ್ಯವಾಗುವುದಿಲ್ಲ. ‘ಆಹಾರ ಮತ್ತು ಶಾಂತಿ’ ಗಾಗಿ ಪ್ರಾರಂಭವಾದ ಪ್ರತಿಭಟನೆಗೆ ಮುಖ್ಯ ಕಾರಣ ಸರಿ ಸುಮಾರು 2 ಮಿಲಿಯನ್ ರಷ್ಯಾದ ಸೈನಿಕರು ಯುದ್ಧದಲ್ಲಿ ಮೃತರಾಗಿದ್ದರು. ‘ನಮ್ಮ ಮಕ್ಕಳಿಗೆ ಆಹಾರ ಬೇಕು. ಗಂಡಸರು ಯುದ್ಧಭೂಮಿಯಿಂದ ವಾಪಸಾಗಬೇಕು’ ಎಂಬ ಕೂಗು ಎಷ್ಟು ಗಟ್ಟಿಯಿತ್ತೆಂದರೆ ನಾಲ್ಕೇ ದಿನದಲ್ಲಿ ಝಾರ್ ದೊ–ರೆ ಸ್ಥಾನಿಕ ಸರ್ಕಾರವನ್ನು ರಚಿಸಿ ಮಹಿಳೆಯರಿಗೆ ಮತದಾನದ ಹಕ್ಕು ನೀಡಬೇಕಾಗಿ ಬಂತು. ಹಾಗೆ ಮಹಿಳೆಯರು ಪ್ರತಿಭಟನೆ ಪ್ರಾರಂಭಿಸಿದ ದಿನ ರಷ್ಯಾದ ಜ್ಯೂಲಿಯನ್ ಕ್ಯಾಲೆಂಡರ್ ಪ್ರಕಾರ ಫೆಬ್ರುವರಿ 23 ಕೊನೆಯ ಭಾನುವಾರ. ಆದರೆ ಅದೇ ಉಳಿದ ಗ್ರೆಗೋರಿಯನ್ ಕ್ಯಾಲೆಂಡರ್ ಗಳಲ್ಲಿ ಮಾರ್ಚ್ 8.

ಹೀಗೆ ಝಾರ್ ದೊರೆಯನ್ನೇ ಮಣಿಸಿದ ರಷ್ಯಾ ಸಮಾಜವಾದೀ ಕ್ರಾಂತಿಯ ಮುನ್ನುಡಿ ಬರೆದಿದ್ದು ಅಲ್ಲಿನ ಮಹಿಳೆಯರು. ಝಾರ್ ನ ದುರಾಡಳಿತದ ವಿರುದ್ಧ ದುಡಿಯುವ ವರ್ಗ ಮತ್ತು ಜನಪರ ರಾಜಕೀಯ ನಾಯಕತ್ವ ನಡೆಸುತ್ತಿದ್ದ ಹೋರಾಟದ ಜೊತೆಗೆ ಸೇರಿದ ಮಹಿಳಾ ಹೋರಾಟ ಕ್ರಾಂತಿಗೆ ಬಲ ತುಂಬಿತು. ಮುಂದಿನ ಹೋರಾಟ, ಸಾಧಿಸಿದ ಕ್ರಾಂತಿ ಅಲ್ಲಿ ಬಂದ ಜನರ ಆಡಳಿತ ಇವೆಲ್ಲವೂ ಕನಸೆಂಬಂತೆ ತೋರುತ್ತಿದೆ. ಅಂಥಹ ಕ್ರಾಂತಿಗೀಗ ಶತಮಾನದ ಸಂಭ್ರಮ. 1880ರ ಕಾಲಘಟ್ಟದಿಂದಲೂ ಬೆಳೆದು ಬಂದ ಮಹಿಳಾ ದಿನದ ಇತಿಹಾಸಕ್ಕೆ ಸುವರ್ಣಾಕ್ಷರದಲ್ಲಿ ಬರೆದಿಡಬಹುದಾದ ಘಟ್ಟವೆಂದರೆ ಸಮಾಜವಾದಿ ಕ್ರಾಂತಿ ಮತ್ತು ಆ ನಂತರದ ಸೋವಿಯತ್ ಯೂನಿಯನ್ ನ ಏಳು ದಶಕಗಳ ಚರಿತ್ರೆ.

ಕ್ರಾಂತಿಯಾದ ಕೆಲವೇ ದಿನಗಳಲ್ಲಿ ಸೋವಿಯತ್ ರಷ್ಯಾದಲ್ಲಿ ಮಹಿಳೆಯರ ಬದುಕಿನ ಗತಿಯೇ ಬದಲಾಗಿ ಬಿಟ್ಟಿತೆಂದರೆ ಅತಿಶಯೋಕ್ತಿಯಲ್ಲ. 1917 ರ ಅಕ್ಟೋಬರ್ ಕ್ರಾಂತಿಯೆಂದೇ ಕರೆಯಿಸಿಕೊಳ್ಳುವ ಆದರೆ ನವೆಂಬರ್ ನಲ್ಲಿ ನಡೆದ ರಷ್ಯಾ ಕ್ರಾಂತಿ ಅಲ್ಲಿನ ಮಹಿಳೆಯರ ವಿಮೋಚನೆಯ ದಾರಿಯನ್ನು ತೆರೆದಿಟ್ಟಿತು. ಅಲ್ಲದೇ ಮಹಿಳಾ ವಿಮೋಚನೆಯ ದಾರಿಯಲ್ಲಿ ಮುಗಿಯದ ಪಯಣವನ್ನು ಮಾಡುತ್ತಿರುವ ನಮಗೆ ಮಾರ್ಗಸೂಚಿಗಳೂ ಅಲ್ಲಿಂದಲೇ ಸಿಗುತ್ತವೆ. ಯಾಕೆಂದರೆ ಮಹಿಳೆ ಎಂದರೆ ತಾಯಿ, ಸೋದರಿ ಹೆಂಡತಿ ಮಗಳು ಇತ್ಯಾದಿ ನಿರ್ದಿಷ್ಟ ಪಾತ್ರಗಳನ್ನು ವಹಿಸುವಲ್ಲಿ ಗಡಿ ರೇಖೆಗಳ ವ್ಯತ್ಯಾಸವೇ ಇಲ್ಲ. ರಷ್ಯಾದಲ್ಲಿಯೂ ಕ್ರಾಂತಿಗಿಂತ ಮುಂಚೆ ಹಾಗೆಯೇ ಇತ್ತು ಮತ್ತು ಸಮಾಜವಾದೀ ವ್ಯವಸ್ಥೆಯ ಕುಸಿತದ ನಂತರ ಅದೇ ಸ್ಥಿತಿಯೇ ಮುಂದುವರೆಯುತ್ತಿದೆ. ಆದರೆ ಆ ಏಳು ದಶಕಗಳ ನಿಜವಾಗಿಯೂ ಅಚ್ಚ–ರಿಯ ಸಾಧನೆ ಅರಿಯಲೇ ಬೇಕು.

‘ಅಡುಗೆಮನೆ ಜೀತದ ವಿರುದ್ಧ ಸಿಡಿದೇಳಿ’

ಕ್ರಾಂತಿಯ ಮುಂಚೂಣಿಯಲ್ಲಿದ್ದ ಮತ್ತು ನಂತರ ಅಧಿಕಾರ ನಡೆಸಿದ ಬೋಲ್ಷೆವಿಕ್ ಸರ್ಕಾರ ಮಹಿಳಾ ಪರವಾದ ಹಲವು ಕಾನೂನುಗಳನ್ನು ತಂದಿತು. ದುಡಿಮೆಯ ಮತ್ತು ಅದರಾಚೆಯ ಸಾಮಾಜಿಕ ಮತ್ತು ರಾಜಕೀಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಅವಕಾಶ ಕಲ್ಪಿಸಲಾಯಿತು. ಅಡುಗೆ ಮನೆಯ ದಾಸ್ಯದಿಂದ ಹೊರಬರಲು ಬೇಕಾದ ಹಲವು ವ್ಯವಸ್ಥೆಗಳನ್ನು ಜಾರಿಗೆ ತರಲಾಯಿತು. ಫ್ಯಾಕ್ಟರಿ ಕ್ಯಾಂಟೀನುಗಳನ್ನು ತೆರೆದು ಸ್ವಾದಿಷ್ಟ, ಪೌಷ್ಟಿಕ ಆಹಾರ ದೊರಕುವಂತೆ ಕ್ರಮ ಕೈಗೊಳ್ಳಲಾಯಿತು. ಮಹಿಳೆ ಪುರುಷನಿಗಿಂತ ಕೀಳು ಎಂಬ ಭಾವನೆಯನ್ನು ತೆ–ಊಡೆದು ಹಾಕಲು ಬೇಕಾದ ಅಗತ್ಯ ಕ್ರಮಗಳನ್ನು ಸೂಚಿಸಲಾಯಿತು. ಮಹಿಳೆಯರಿಗೆ ರಾಜಕೀಯ ತಿಳುವಳಿಕೆ ನೀಡಲು ಅಗತ್ಯವಾದ ಪ್ರಕಟಣೆಗಳು, ತರಬೇತಿ ಶಿಬಿರಗಳನ್ನು ನಡೆಸಲಾಯಿತು. ನವೆಂಬರ್ 1917 ರಲ್ಲಿ ಕ್ರಾಂತಿಯಾಗಿದೆ, ಡಿಸೆಂಬರ್‌ನಲ್ಲಿ ಹೆರಿಗೆ ಮತ್ತು ಆರೋಗ್ಯದ ವಿಮೆ ಮಾಡಿಸುವ ಕಾನೂನನ್ನು ಅಂಗೀಕರಿಸಲಾಯಿತು. ಕಾರ್ಮಿಕರ ವಿಮಾ ನಿಧಿಯನ್ನು ರಚಿಸಲಾಯಿತು. ಮಹಿಳಾ ಕಾಮಿಕರು ಮತ್ತು ಪುರುಷ ಕಾರ್ಮಿಕರ ಹೆಂಡತಿಯರನ್ನು ಅದರ ಫಲಾನುಭವಿಗಳಾಗಿ ಗುರುತಿಸಲಾಯಿತು.

ಕ್ರಾಂತಿ ಜಯಗಳಿಸಿದ ನಂತರ ಅಲೆಕ್ಸಾಂಡ್ರಾ ಕೊಲಾಂತೈ ಹೊಸ ಸೋವಿಯತ್ ಸರ್ಕಾರದ ಸಾಮಾಜಿಕ ಸೇವೆಗಳ ಕಮಿಷನರ್ ಆಗಿ ನೇಮಕಗೊಂಡರು. ಈ ಕಾರಣದಿಂದಾಗಿ ಮಹಿಳೆಯರು ಪುರುಷರಿಗೆ ಸರಿಸಮನಾದ ಸ್ಥಾನ ಮಾನ ಪಡೆಯುವ ಕಾನೂನುಗಳನ್ನು ಜಾರಿ ಮಾಡಲು ಸಹಾಯಕವಾಯಿತು. ಕ್ರಾಂತಿಯಾದ 6 ವಾರಗಳಲ್ಲಿ ಸಿವಿಲ್ ವಿವಾಹ ಕಾಯ್ದೆಯನ್ನು ಜಾರಿಗೆ ತರಲಾಯಿತು. ಒಂದು ವರ್ಷದಲ್ಲಿ ಹೊಸ ನಾಗರಿಕ ಸಂಹಿತೆಯನ್ನು ತಂದು ಪುರುಷ ಮತ್ತು ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ನೀಡಲಾಯಿತು. ವಿವಾಹ ವಿಚ್ಛೇದನವನ್ನು ಸರಳೀಕರಿಸಲಾಯಿತು. ವಿವಾಹೇತರ ಸಂಬಂಧದ ಮಕ್ಕಳು ಮತ್ತು ವಿವಾಹ ಸಂಬಂಧದ ಮಕ್ಕಳ ಮಧ್ಯೆ ವ್ಯತ್ಯಾಸವಿರದಂತೆ ಕ್ರಮ ವಹಿಸಲಾಯಿತು. ಪರಸ್ಪರ ಸಮ್ಮತದ ವಿಚ್ಛೇದನ ಸಾಧ್ಯವಾಗದಿದ್ದಲ್ಲಿ ನ್ಯಾಯಾಲಯಗಳ ಮಧ್ಯಪ್ರವೇಶ, ಆರ್ಥಿಕ ಸಮಸ್ಯೆ ನಿರುದ್ಯೋಗದ ಸಂದರ್ಭದಲ್ಲಿ ಜೀವನಾಂಶಗಳನ್ನು ಖಚಿತಗೊಳಿಸಲಾಯಿತು. ಹೆರಿಗೆ ರಜಾ ಸೌಲಭ್ಯಕ್ಕಾಗಿ ಒಂದು ಇಲಾಖೆಯನ್ನೇ ತೆರೆಯಲಾಯಿತು. ಗರ್ಭಿಣಿ ಕಾರ್ಮಿಕರಿಗೆ ಮತ್ತು ಮಗುವಿನ ತಾಯಿಗೆ ಹೊರೆಯಾಗುವ ಕೆಲಸ ನೀಡದಂತೆ, ರಾತ್ರಿ ಪಾಳಿ ನೀಡದಂತೆ ಗಮನ ವಹಿಸಲಾಯಿತು. ಹೆರಿಗೆಗೆ ಮುನ್ನ ಮತ್ತು ನಂತರ ಪೂರ್ಣ ವೇತನದ 16 ವಾರಗಳ ರಜಾ ಸೌಲಭ್ಯ ನೀಡಲಾಯಿತು. ವಿಶೇಷ ಹೆರಿಗೆ ಆಸ್ಪತ್ರೆಗಳನ್ನು ತೆರೆಯಲಾಯಿತು. ತಾಯಿ ಮತ್ತು ಮಗುವಿನ ಆರೈಕೆಗೆ ಬೇಕಾದ ಸೌಕರ್ಯಗಳು, ಅವಿವಾಹಿತ ತಾಯಂದಿರಿಗೂ ಎಲ್ಲ ರೀತಿಯ ಸೌಲಭ್ಯಗಳು, ಸರ್ಕಾರೀ ಪ್ರಾಯೋಜಿತ ಶಿಶುಪಾಲನಾ ಮತ್ತು ಸೌಕರ್ಯ ಕೇಂದ್ರಗಳನ್ನು ತೆರೆಯಲಾಯಿತು.

> “1917 ಕ್ರಾಂತಿಯು ಮಹಿಳೆಯರಿಂದಾಗಿಯೇ ನಡೆಯಿತು, ಪೀಟರ್ಸ್ ಬರ್ಗ್‌ನ ಮಹಿಳೆಯರು ಕ್ರಾಂತಿಯನ್ನು ಆರಂಭಿಸಿದ್ದರು. ಝಾರ್ ವಿರುದ್ಧವಾಗಿ ಮೊದಲ ಧ್ವನಿಯೆತ್ತಿದವರು ಮಹಿಳೆಯರೇ, ಅದ್ದರಿಂದ ಈ ಮಹಿಳಾ ದಿನಾಚರಣೆ ಖುಷಿಯನ್ನು ದುಪ್ಪಟ್ಟುಗೊಳಿಸಿದೆ..”
>
> **– ಅಲೆಕ್ಸಾಂಡ್ರಾ ಕೊಲಂತಾಯ್**

1931ರಲ್ಲಿ ರಷ್ಯಾ ದೇಶದಲ್ಲಿ ಮಾರ್ಚ್8 ನ್ನು ‘ಅಡುಗೆಮನೆ ಜೀತದ ವಿರುದ್ಧ ಸಿಡಿದೇಳಿ’ ಎಂಬ ಘೋಷಣೆಯಡಿಯಲ್ಲಿ ಆಚರಿಸಲಾಗಿತ್ತು. ಸ್ವತಃ ಲೆನಿನ್ ರವರೇ ಹೇಳಿದಂತೆ ‘ಕೌಟುಂಬಿಕ ಜವಾಬ್ದಾರಿಗಳಿಂದ, ಜರ್ಝರಿತಗೊಳಿಸುವ ಅಡುಗೆ ಮನೆಯಿಂದ ಮಹಿಳೆಗೆ ಬಿಡುಗಡೆ ದೊರಕುವ ವರೆಗೂ ಮಹಿಳಾ ವಿಮೋಚನೆ ಸಾಧ್ಯವಿಲ್ಲ’ ಎಂಬ ಮಾತಿಗೆ ಅನುಗುಣವಾಗಿ ಮಹಿಳೆಯರನ್ನು ಸಾಮೂಹಿಕ ಉತ್ಪಾದನಾ ಕ್ಷೇತ್ರಕ್ಕೆ ಹೆಚ್ಚು ಹೆಚ್ಚು ಒಳಗೊಳಿಸುವ ಪ್ರಯತ್ನವೂ ಆಯಿತು. ಹೀಗೆ ಹಲವು ಹತ್ತು ಸಾಧನೆಗಳ ಮೆಟ್ಟಿಲೇರಿದ ಇತಿಹಾಸ ನಮ್ಮ ಕಣ್ಣ ಮುಂದಿದೆ. ಅಂಥಹ ಸಮಾಜವಾದಿ ಕ್ರಾಂತಿಗೀಗ ಶತಮಾನ.

‘ಬದಲಾವಣೆಗೆ ಧೈರ್ಯಮಾಡಿ’

ಮಹಿಳಾ ಮತ್ತು ಮಹಿಳಾ ಪರ ಚಳುವಳಿಗಳ ನಿರಂತರ ಪರಿಶ್ರಮದ ಕಾರಣದಿಂದ ಜಗತ್ತಿನ ಇತರ ರಾಷ್ಟ್ರಗಳಲ್ಲಿಯೂ ಸಮಾಜವಾದಿ ಚಿಂತನೆಯ ನೆಲೆಯಲ್ಲಲ್ಲವಾದರೂ ಬಾಹ್ಯೋಪಚಾರದ ಲೆಕ್ಕದಲ್ಲಿಯಾದರೂ ಮಹಿಳಾ ಪರ ಯೋಜನೆಗಳು ಪ್ರಕಟಗೊಳ್ಳುತ್ತಿವೆ. ಕೋಪನ್ ಹೇಗನ್‌ನಲ್ಲಿ ಕ್ಲಾರಾ ಝೆಟ್ಕಿನ್ ಇಟ್ಟ ಅಡಿಗಲ್ಲಿನ ಮೇಲೆ ದೊಡ್ಡ ಸೌಧವಲ್ಲದಿದ್ದರೂ ಚಿಕ್ಕ ಚಿಕ್ಕ ಇಟ್ಟಿಗೆಗಳಾಗಿ ನಡೆದ ಹಲವು ಚರ್ಚೆ ಸಂವಾದ ವಿಚಾರ ಮಂಥನಗಳಿಂದಾಗಿ ವಿಶ್ವಸಂಸ್ಥೆ 1975ನ್ನು ಅಂತರ ರಾಷ್ಟ್ರೀಯ ಮಹಿಳಾ ವರ್ಷವನ್ನಾಗಿ ಘೋಷಿಸಿತು. ಅಲ್ಲದೇ ಹಲವು ವಿಶ್ವಮಟ್ಟ ದ ಸಮ್ಮೇಳನಗಳು, ಗೋಷ್ಠಿಗಳು ನಡೆದಿವೆ. ಅವೆಲ್ಲದರ ಭಾಗವಾಗಿಯೇ ತನ್ನ ಸದಸ್ಯ ರಾಷ್ಟ್ರಗಳನ್ನು ಮಹಿಳಾ ಪರ ಬದ್ಧತೆ–ಗೆ ಒಳಪಡಿಸುವ ಪ್ರಯತ್ನವನ್ನು ವಿಶ್ವಸಂಸ್ಥೆ ಮಾಡುತ್ತಲೇ ಇದೆ. ಈ ಬಾರಿಯ ವಿಶ್ವಸಂಸ್ಥೆಯ ಕರೆ ‘ಬದಲಾವಣೆಗೆ ಧೈರ್ಯಮಾಡಿ’ (ಛಜ ಛಠಟಜ ಜಿಂಡಿ ಛಿಚಿಟಿಂಜ) ಈ ಘೋಷಣೆಯನ್ನು ಅತ್ಯಂತ ನಿರ್ಣಾಯಕವೆಂದುಕೊಳ್ಳಬೇಕು. ಯಾಕೆಂದರೆ ಕೇವಲ ಔಪಚಾರಿಕ ನೆಲೆಯಲ್ಲಿ ಮಾಡುವ ಘೋಷಣೆಗಳು, ಒಡಂಬಡಿಕೆಗಳು ಒಪ್ಪಿಗೆಗಳಷ್ಟೇ ಬದಲಾವಣೆಯನ್ನು ತರಲು ಸಾಧ್ಯವಿಲ್ಲ.

ಬದಲಾವಣೆಗೆ ಮನಸ್ಸು ಬೇಕು. ಧೈರ್ಯ ಮಾಡಬೇಕು. ಭಾರತದಲ್ಲಿಯೇ ನೋಡಿದ–ರೆ ‘ಬೇಟಿ ಬಚಾವೊ ಬೇಟೀ ಪಢಾವೊ’ ಎನ್ನುವ ಆಕರ್ಷಕ ಘೋಷಣೆ ಅದೆಷ್ಟು ಹುಸಿ ಎಂಬುದು ಸರ್ಕಾರ ಶಿಕ್ಷಣ ಕ್ಷೇತ್ರಕ್ಕೆ ಕೊಡುವ ಬಜೆಟ್, ಶಿಕ್ಷಣದ ಹಕ್ಕಿನಡಿಯಲ್ಲಿ ಪಡೆಯಬಹುದಾದ ಅಲ್ಪಸ್ವಲ್ಪ ಅವಕಾಶಗಳ ಅನುಷ್ಠಾನದಲ್ಲಿ ತೋರಿಸುತ್ತಿರುವ ಅಸಡ್ಡೆಗಳಿಂದಲೇ ಅರ್ಥವಾಗುತ್ತದೆ. ದಾರಿದ್ರ್ಯಕ್ಕೆ ತಳ್ಳಲ್ಪಡುತ್ತಿರುವ ಜನ ತಮ್ಮ ಮಕ್ಕಳ ಶಿಕ್ಷಣದ ಬಗ್ಗೆ ಹೆಚ್ಚು ಗಮನ ಕೊಡಲು ಸಾಧ್ಯವಾಗುವುದಿಲ್ಲ. ಆ ನೆಲೆಯಲ್ಲಿ ಸಣ್ಣ ಆಸರೆಯಾಗಿ ಬಂದ ಬಿಸಿಯೂಟ ಎಷ್ಟೋ ಮಕ್ಕಳಿಗೆ ಅದರಲ್ಲಿಯೂ ಹೆಣ್ಣುಮಕ್ಕಳಿಗೆ ವಿದ್ಯಾಭ್ಯಾಸದ ಅವಕಾಶವನ್ನು ಸೃಷ್ಟಿಸಿತ್ತು. ಈಗ ಸರ್ಕಾರ ಬಿಸಿಯೂಟದ ಎರಡು ತುತ್ತು ಅನ್ನ ತಿನ್ನಲು ಆಧಾರ ಕಾರ್ಡ ಕಡ್ಡಾಯ ಮಾಡುತ್ತಿದೆ. ಬದಲಾವಣೆ ಮನುಷ್ಯರಿಗೆ ಬದುಕು ಕಲ್ಪಿಸಲು ಬೇಕು, ಬದುಕು ಕಿತ್ತುಕೊಳ್ಳಲಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆ ನೀಡುವ ಆಡಳಿತ ಇದು. ಮಹಿಳೆಯರ ಸರ್ವಾಂಗೀಣ ಅಭಿವೃದ್ದಿಗೆ ಸಂಪೂರ್ಣ ಗಮನ ಕೊಡುವತ್ತ ಪೂರ್ಣ ಲಕ್ಷ ವಹಿಸಿದ್ದ ಸಮಾಜವಾದೀ ವ್ಯವಸ್ಥೆಯೇ ಪರ್ಯಾಯ. ಬದಲಾವಣೆಗೆ ಧೈರ್ಯಮಾಡೋಣ.

●



ಈ ಸುದ್ದಿ ವಾಹಿನಿಗಳಿಗೆ ಏನಾಗಿದೆ? ಇಡೀ ಮುಸ್ಲಿಂ ಸಮುದಾಯ ಸುಹಾನ ವಿರುದ್ಧ ಬಹಿಷ್ಕಾರ ಹಾಕಿದಂತೆ ಹಂಗಾಮ ಸೃಷ್ಟಿಸಲಾಗುತ್ತಿದೆ. ಯಾರೋ ತಲೆಕೆಟ್ಟ ಮುಖರಹಿತರು ಸೋಷಿಯಲ್ ಮೀಡಿಯಾದಲ್ಲಿ ಹಾಕಿದ ಪೋಸ್ಟ್ ಗಳನ್ನು ಬಿಟ್ಟರೆ ಯಾರೊಬ್ಬ ಮುಸ್ಲಿಂ ಧಾರ್ಮಿಕ ಮುಖಂಡರು, ಸಾಮಾಜಿಕ, ರಾಜಕೀಯ ನಾಯಕರು ಸುಹಾನ ವಿರುದ್ಧ ಒಂದು ಶಬ್ದ ಮಾತಾಡಿದ್ದು ಎಲ್ಲಿಯೂ ವರದಿಯಾಗಿಲ್ಲ. ಕೆಲವು ಚಾನಲ್ ಗಳಂತೂ ಮುಸ್ಲಿಂ ಸಮುದಾಯದ ವಿರುದ್ಧ ಜನಾಭಿಪ್ರಾಯ ರೂಪಿಸಲು ಕೋಮುಶಕ್ತಿಗಳೊಂದಿಗೆ ಶಾಮೀಲಾದಂತೆ ಕಾಣಿಸುತ್ತಿದೆ. ಅದರಲ್ಲೂ ಪಬ್ ದಾಳಿ, ಹೋಂ ಸ್ಟೇ ದಾಳಿಯ ರೂವಾರಿಗಳು, ಸಮರ್ಥಕರು ಈ ಚಾನಲ್ ಗಳಲ್ಲಿ ಮಾತಾಡುತ್ತಿರುವ ರೀತಿ ಚಾನಲ್ ಗಳ ಅಜೆಂಡಾಗಳನ್ನು ಅನಾವರಣಗೊಳಿಸುತ್ತಿದೆ.

– ಮುನೀರ್

ಬರ ಪರಿಹಾರದ ಕುರಿತು ಮತ್ತೆ ಕೋಳಿಜಗಳ



ಕರ್ನಾಟಕದಲ್ಲಿ ಬರ ಪರಿಹಾರದ ಕುರಿತು ಕೇಂದ್ರ–ರಾಜ್ಯ ಸರಕಾರಗಳು ಮತ್ತು ಬಿಜೆಪಿ–ಕಾಂಗ್ರೆಸುಗಳ ನಡುವೆ ಮತ್ತೆ ಕೋಳಿಜಗಳ ನಡೆದಿದೆ. ಮೊದಲ ಕೋಳಿಜಗಳ ಬರ ಪರಿಹಾರದ ಅಂದಾಜು, ಮಂಜೂರಿ ಮತ್ತು ಪಾವತಿಯಲ್ಲಿ ವಿಳಂಬದ ಬಗ್ಗೆ ಇತ್ತು. ಈಗಿನದು ಕೇಂದ್ರ ಸರಕಾರದ ಮೊದಲ ಕಂತನ್ನು ರೈತರಿಗೆ ಹಂಚುವುದರಲ್ಲಿ ವಿಳಂಬದ ಬಗ್ಗೆ ಇತ್ತು. 'ಗಂಡ ಹೆಂಡಿರ ಜಗಳದಲ್ಲಿ ಕೂಸು ಬಡವಾಯಿತು' ಎಂಬಂತೆ ಇದರಿಂದ ಸೋತು ಸುಣ್ಣವಾದವರು ಬರಗಾಲ ಮತ್ತು ನವ–ಉದಾರವಾದಿ ನೀತಿಗಳ ಪೀಡಿತ ರೈತರು.

26 ಜಿಲ್ಲೆಗಳ 160 ತಾಲ್ಲೂಕುಗಳು ಬರ ಪೀಡಿತವಾಗಿದ್ದು, ರೂ. 4,782 ಕೋಟಿ ಅನುದಾನಕ್ಕೆ ಬೇಡಿಕೆ ಸಲ್ಲಿಸಲಾಗಿದೆ. ಕೇಂದ್ರ ಸರ್ಕಾರ ರೂ. 1,782 ಕೋಟಿ ಮಂಜೂರು ಮಾಡಿದ್ದು, ಅದರಲ್ಲಿ ರೂ. 450 ಕೋಟಿಯನ್ನು ಫೆಬ್ರುವರಿಯಲ್ಲಿ ಬಿಡುಗಡೆ ಮಾಡಿದೆ. ಒಂದು ತಿಂಗಳ ಹಿಂದೆ ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ಈ ಹಣವನ್ನು ರೈತರಿಗೆ ಹಂಚಿಕೆ ಮಾಡುವ ವಿಷಯದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ನಡುವೆ ಸಂಘರ್ಷ ನಡೆದಿತ್ತು. ಪೂರ್ತಿ ಹಣ ಕೊಡುವಂತೆ ರಾಜ್ಯ ಪಟ್ಟು ಹಿಡಿದಿತ್ತು. ಕೊಟ್ಟಿರುವ ಹಣ ಬಳಕೆ ಮಾಡಿ ಪ್ರಮಾಣ ಪತ್ರ ಕಳಿಸಿದರೆ ಉಳಿದ ಹಣ ನೀಡುವುದಾಗಿ ಕೇಂದ್ರ ಹೇಳಿತ್ತು.

ರಾಜ್ಯಕ್ಕೆ ಮಂಜೂರು ಮಾಡಿರುವ ಪೂರ್ತಿ ಹಣ ಬಂದ ನಂತರ ಬರಪೀಡಿತವಾಗಿರುವ 26 ಜಿಲ್ಲೆಗಳಿಗೂ ಹಂಚಿಕೆ ಮಾಡಲು ಸರ್ಕಾರ ಈ ಮೊದಲು ತೀರ್ಮಾನಿಸಿತ್ತು. ಮೊದಲ ಕಂತಿನ ರೂ. 450 ಕೋಟಿ ಮಾತ್ರ ಹಂಚಿಕೆ ಮಾಡಿದರೆ ಎಲ್ಲ ಜಿಲ್ಲೆಗಳಿಗೂ ಸಾಕಾಗುವುದಿಲ್ಲ. ಕೆಲವು ರೈತರಿಗೆ ಕೊಟ್ಟು ಕೆಲವರನ್ನು ಕೈಬಿಟ್ಟರೆ ತಾರತಮ್ಯ ಮಾಡಿದಂತಾಗುತ್ತದೆ ಎಂಬುದು ಸರ್ಕಾರದ ಉದ್ದೇಶವಾಗಿತ್ತು. ಆದರೆ, ಕೇಂದ್ರ ಬಿಡುಗಡೆ ಮಾಡಿದ ಹಣ ಸುಮ್ಮನೆ ಇಟ್ಟುಕೊಳ್ಳಲಾಗಿದೆ ಎಂಬ ಆರೋಪ ಬರಬಾರದೆಂಬ ಕಾರಣಕ್ಕೆ ಈಗ ಅದನ್ನು 11 ಜಿಲ್ಲೆಗಳಿಗೆ ಹಂಚಿಕೆ ಮಾಡಲಾಗುವುದು ಎಂದು ಕಂದಾಯ ಸಚಿವ ಕಾಗೋಡು ತಿಮ್ಮಪ್ಪ ಹೇಳಿದರು. '11 ಜಿಲ್ಲೆಗಳನ್ನು ಅಧಿಕಾರಿಗಳೇ ಗುರುತಿಸಿದ್ದಾರೆ. ಅರ್ಹ ರೈತರ ಬ್ಯಾಂಕ್ ಖಾತೆಗಳ ವಿವರ ಪಡೆಯಲಾಗಿದ್ದು, ಇನ್ನೊಂದು ವಾರದೊಳಗೆ ಆರ್.ಟಿ.ಜಿ.ಎಸ್. ಮೂಲಕ ನೇರವಾಗಿ ರೈತರ ಖಾತೆಗೆ ಹಣ ಜಮೆ ಆಗಲಿದೆ' ಎಂದು ಅವರು ಹೇಳಿದರು. ಕೇಂದ್ರದಿಂದ ಪೂರ್ತಿ ಹಣ ಬಂದ ನಂತರ ಉಳಿದ ಜಿಲ್ಲೆಗಳಿಗೂ ಹಂಚಿಕೆ ಮಾಡಲಾಗುವುದು. 26 ಜಿಲ್ಲೆಗಳ ಬೆಳೆ ನಷ್ಟ ಗಮನಿಸಿದರೆ ಕೇಂದ್ರ ಸರ್ಕಾರದ ಅನುದಾನದ ಜೊತೆಗೆ ರಾಜ್ಯ ಸರ್ಕಾರ ರೂ. 200 ಕೋಟಿಯಿಂದ ರೂ.300 ಕೋಟಿಯಷ್ಟು ಹೆಚ್ಚುವರಿ ಅನುದಾನ ನೀಡುವ ಅಗತ್ಯ ಬೀಳಬಹುದು. ಸರ್ಕಾರ ಅದನ್ನು ನೀಡಲಿದೆ ಎಂದು ಅವರು ಹೇಳಿದರು.

ಇನ್ನಾದರೂ ಬರಪರಿಹಾರ ರೈತರನ್ನು ಶೀಘ್ರವಾಗಿ ತಲುಪಬಹುದೇ? ಅಥವಾ ರೈತ ಕೃಷಿಯನ್ನು ನಾಶ ಮಾಡ ಹೊರಟಿರುವ ಕಾಂಗ್ರೆಸ್–ಬಿಜೆಪಿ ಸರಕಾರಗಳು ಇನ್ನೂ ಯಾವುದಾದರೂ ನೆಪಕ್ಕೆ ಕೋಳಿಜಗಳ ತೆಗೆಯಬಹುದೇ? ಕಾದು ನೋಡಬೇಕು.

ಪಕ್ಷಾಂತರ ಪರ್ವ ಆರಂಭ



ಕರ್ನಾಟಕದ ವಿಧಾನಸಭಾ ಚುನಾವಣೆಗಳು ಹತ್ತಿರ ಬರುತ್ತಿದ್ದಂತೆ ಪಕ್ಷಾಂತರ ಪರ್ವ ಆರಂಭವಾಗಿದೆ. ಪ್ರಮುಖ ಬೂರ್ಜ್ವಾ–ಭೂಮಾಲಕ ಪಕ್ಷಗಳಾದ ಕಾಂಗ್ರೆಸ್, ಬಿಜೆಪಿ, ಜೆ.ಡಿ–ಎಸ್. ಗಳಲ್ಲಿ ಯಾವುದೂ ತಾನು ಪವಿತ್ರವೆನ್ನುವಂತಿಲ್ಲ. ಮೂರೂ ಪಕ್ಷಗಳ ನಡುವೆ ಚುನಾವಣೆ ಮೊದಲು ಮತ್ತು ಫಲಿತಾಂಶ ನಂತರವೂ ಓಡಾಡುವ 'ಆಯಾ ರಾಂ, ಗಯಾ ರಾಂ'ಗಳಿದ್ದಾರೆ. ಇದು ವಿಧಾನಸಭೆ ಚುನಾವಣೆಗಳಿಗೆ ಸೀಮಿತವಾಗಿಯೂ ಇಲ್ಲ. ಯಾವುದೇ ಚುನಾವಣೆಗಳ ಮೊದಲು ನಂತರವೂ, ಸಂಪುಟ ಪುನರ್ರಚನೆಯ ನಂತರವೂ ಆಗಬಹುದು. ಈ ಮೂರೂ ಪಕ್ಷಗಳ ನಡುವೆ ಯಾವುದೇ ವ್ಯತ್ಯಾಸವಿಲ್ಲ. ಇವು ಬೂರ್ಜ್ವಾ–ಭೂಮಾಲಕ ವರ್ಗ ಆಳ್ವಿಕೆಯನ್ನು ಎತ್ತಿ ಹಿಡಿಯುವ ಬೇರೆ ಬೇರೆ ಬೋರ್ಡು ಇರುವ ರಾಜಕೀಯ ಸಂಘಟನೆಗಳು ಮಾತ್ರ ಎಂದು ಈ ಪಕ್ಷಾಂತರ ಪರ್ವಗಳು ಮತ್ತೆ ಮತ್ತೆ ರುಜುವಾತು ಪಡಿಸುತ್ತಿವೆ. ಈ ವಾರ ಕಾಂಗ್ರೆಸಿನಿಂದ ಬಿಜೆಪಿಗೆ ಎಸ್.ಎಂ. ಕೃಷ್ಣ, ಜಯಪ್ರಕಾಶ ಹೆಗಡೆ ಯವರುಗಳ ಪಕ್ಷಾಂತರದೊಂದಿಗೆ ಈ ಪರ್ವದಲ್ಲಿ ಬೂರ್ಜ್ವಾ–ಭೂಮಾಲಕ ರಾಜಕೀಯ ಅತ್ಯಂತ ಕೀಳು ಮಟ್ಟ ಮುಟ್ಟಿದೆ ಎಂದರೆ ಬಹುಶಃ ಅತಿಶಯೋಕ್ತಿ ಆಗಲಾರದು

ಇಬ್ಬರೂ ಒಂದೇ ಪಕ್ಷಕ್ಕೆ ದೀರ್ಘ ಕಾಲದಿಂದ ಬದ್ಧತೆಯಿದ್ದವರು ಎಂದಲ್ಲ. ಎಸ್.ಎಂ. ಕೃಷ್ಣ ತಮ್ಮ ರಾಜಕೀಯ ಜೀವನ ಪಿ.ಎಸ್.ಪಿ. (ಪ್ರಜಾ ಸೋಶಲಿಸ್ಟ್ ಪಕ್ಷ) ದಿಂದ ಆರಂಭಿಸಿ ಕಾಂಗ್ರೆಸಿಗೆ ಪಕ್ಷಾಂತರ ಮಾಡಿದವರು. ಜನತಾ ಪರಿವಾರದಲ್ಲಿದ್ದ ಜಯಪ್ರಕಾಶ್ ಹೆಗ್ಡೆ ಕಾಂಗ್ರೆಸ್ ಸೇರಿದ್ದರು. ಇಬ್ಬರೂ ಕನಿಷ್ಠ ಸೆಕ್ಯುಲರ್ ಆಗಿದ್ದವರು. ಜಯಪ್ರಕಾಶ್ ಹೆಗ್ಡೆ ಒಂದೇ ವಾರದ ಹಿಂದೆ ಸಿಪಿಐ(ಎಂ)ನ ಮಂಗಳೂರಿನ ಕೋಮುವಾದಿ–ವಿರೋಧಿ ಸೌಹಾರ್ದ ರ್‍ಯಾಲಿಗೆ ಬೆಂಬಲ ವ್ಯಕ್ತ ಪಡಿಸಿದವರು! ಎಸ್.ಎಂ. ಕೃಷ್ಣ ಎಂ.ಎಲ್.ಎ.ದಿಂದ ಆರಂಭಿಸಿ, ಮಂತ್ರಿ, ಮುಖ್ಯಮಂತ್ರಿ, ರಾಜ್ಯಪಾಲ, ಕೇಂದ್ರ ಮಂತ್ರಿಗಳಾಗಿದ್ದವರು. 80ರ ಇಳಿ ವಯಸ್ಸಿನಲ್ಲಿ ತಮ್ಮ ಅಳಿಯನ ಕಮರ್ಶಿಯಲ್ ಹಿತಾಸಕ್ತಿಗೆ ಧಕ್ಕೆಯಾಗಬಹುದೆಂದು ಎಲ್ಲರಿಂದ ಛೀ ಥೂ ಎನಿಸಿಕೊಂಡು ಪಕ್ಷಾಂತರ ಮಾಡುತ್ತಾರೆ. ಜಯಪ್ರಕಾಶ್ ಹೆಗ್ಡೆ ಒಂದು ಬಾರಿ ಸೀಟು ಕೊಡಲಿಲ್ಲವೆಂದು ಬಿಜೆಪಿ ಸೇರುತ್ತಾರೆ. ಇನ್ನೂ ದಲಿತ ನಾಯಕ ಶ್ರೀನಿವಾಸ್ ಪ್ರಸಾದ್ ಮಂತ್ರಿ ಪದವಿ ಹೋಗಿದ್ದಕ್ಕೆ ಮನುವಾದಿ ಬಿಜೆಪಿ ಸೇರುವ ಭೀಕರ ವ್ಯಂಗ್ಯ ಹಳೆಯದಾಯಿತು.



ನೀರಿಗೆ ಹಾಹಾಕಾರ



ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿದೆ. ಇನ್ನಷ್ಟು ತೀವ್ರವಾಗುತ್ತಿದೆ. ಸುಮಾರು 21 ಜಿಲ್ಲೆಗಳ 720 ಗ್ರಾಮಗಳಲ್ಲಿ ಗಂಭೀರ ಸ್ಥಿತಿಯಿದೆ. ಪ್ರತಿನಿತ್ಯ 1 ಸಾವಿರಕ್ಕೂ ಹೆಚ್ಚಿನ ಟ್ಯಾಂಕರ್‌ಗಳಲ್ಲಿ ಎರಡರಿಂದ ಮೂರು ಟ್ರಿಪ್ಪಳಲ್ಲಿ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಈ ಗ್ರಾಮಗಳ ಸಂಖ್ಯೆ ತಿಂಗಳ ಕೊನೆಯ ವೇಳೆಗೆ 1,000 ದಾಟಬಹುದು ಎಂದು ತಿಳಿದು ಬಂದಿದೆ. ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಕುಡಿಯುವ ನೀರಿಗಾಗಿ ಬೋರ್‌ವೆಲ್ಲಳನ್ನು ಕೊರೆದರೂ ಶೇ 50 ಕ್ಕೂ ಹೆಚ್ಚು ಬೋರ್‌ವೆಲ್ಲಳಲ್ಲಿ ನೀರು ಸಿಗುತ್ತಿಲ್ಲ. ಅಲ್ಲದೆ, ನೀರಿನ ಮಟ್ಟವೂ ನೆಲ ಕಚ್ಚಿರುವುದರಿಂದ ಗುಣಮಟ್ಟವೂ ಕುಸಿದಿದೆ. ಲವಣಾಂಶ ಮತ್ತು ಫ್ಲೋರೈಡ್ ಅಂಶವೂ ಹೆಚ್ಚುತ್ತಿದೆ ಎನ್ನಲಾಗಿದೆ.

ಇದಕ್ಕೆ ಸತತ ಬರ ಮತ್ತು ಅಂತರ್ಜಲದ ಕುಸಿತ ಕಾರಣವಾಗಿದೆ. ರಾಜ್ಯದ 143 ತಾಲ್ಲೂಕುಗಳಲ್ಲಿ ಅಂತರ್ಜಲ ಮಟ್ಟ ದಿನೇದಿನೇ ಕುಸಿಯುತ್ತಿದೆ ಎಂದು ರಾಜ್ಯ ಅಂತರ್ಜಲ ನಿರ್ದೇಶನಾಲಯದ ಸಮೀಕ್ಷೆ ಹೇಳುತ್ತದೆ. ರಾಜ್ಯದ ಒಟ್ಟು 177 ತಾಲ್ಲೂಕುಗಳಲ್ಲಿ ಅಂತರ್ಜಲ ಮಟ್ಟ ಏರಿಕೆಯಾದ ತಾಲ್ಲೂಕುಗಳು ಬರಿಯ 34. ಸತತ ಬರಗಾಲಕ್ಕೆ ತುತ್ತಾಗಿರುವ ಬಯಲುಸೀಮೆಯ ಜಿಲ್ಲೆಗಳಲ್ಲಿ ಅಂತರ್ಜಲದ ಮಟ್ಟ ಆತಂಕಕಾರಿಯಾಗಿ ಕುಸಿತ ಕಂಡಿದೆ. ಕೋಲಾರ ಜಿಲ್ಲೆಯಲ್ಲಿ 2007ರಲ್ಲಿ ಸ್ಥಿರ ಜಲಮಟ್ಟ 18.07 ಮೀಟರ್‌ನಷ್ಟಿದ್ದರೆ, 2016ರಲ್ಲಿ ಈ ಮಟ್ಟ 64.55 ಮೀಟರ್‌ಗೆ ಕುಸಿದಿದೆ.


ರಾಮನಗರ, ತುಮಕೂರು, ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಸ್ಥಿರ ಜಲಮಟ್ಟ ಗಣನೀಯವಾಗಿ ಕುಸಿಯುತ್ತಿದೆ. ಬಾಗಲಕೋಟೆ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ಕೋಲಾರ, ತುಮಕೂರು, ಬಳ್ಳಾರಿ, ದಾವಣಗೆರೆ ಜಿಲ್ಲೆಗಳಲ್ಲಿ ಅಂತರ್ಜಲ ಬಳಕೆ ಮಿತಿ ಮೀರಿದ್ದು, ಅಂತರ್ಜಲ ಕಳವಳ ಪಡುವ ಮಟ್ಟಕ್ಕೆ ಇಳಿದಿದೆ. ಅಂತರ್ಜಲವನ್ನು ಮಿತಿ ಮೀರಿ ಬಳಸಿದ ತಾಲ್ಲೂಕುಗಳ ಸಂಖ್ಯೆದ ಈಗ 43 ಇದ್ದು, 2011ರಲ್ಲಿ ನಡೆದ ಸಮೀಕ್ಷೆಯಲ್ಲಿ ಕೇವಲ 30 ತಾಲ್ಲೂಕುಗಳಿದ್ದವು. ಹೂವಿನ ಹಡಗಲಿ, ಬಾಗೇಪಲ್ಲಿ, ಹೊಸದುರ್ಗ, ಮುಂಡರಗಿ, ನರಗುಂದ, ಯಲಬುರ್ಗ ತಾಲ್ಲೂಕುಗಳ ಅಂತರ್ಜಲ ಮಟ್ಟ ಗಂಭೀರವಾಗಿದೆ. 2011ರಲ್ಲಿ 70 ತಾಲ್ಲೂಕುಗಳಲ್ಲಿ ಅಂತರ್ಜಲ ಬಳಕೆ ಸುರಕ್ಷಿತ ಮಟ್ಟದಲ್ಲಿತ್ತು.

2013ರಲ್ಲಿ ಈ ಸಂಖ್ಯೆ 65ಕ್ಕೆ ಇಳಿದಿದೆ. ಇಂತಹ ತಾಲ್ಲೂಕುಗಳಲ್ಲಿ ಮಾತ್ರ ಕೊಳವೆ ಬಾವಿ ಕೊರೆಯಲು ಅವಕಾಶ ಇದೆ. 10 ವರ್ಷದ ಹಿಂದೆ ಕರಾವಳಿ, ಮಲೆನಾಡು ಭಾಗದಲ್ಲಿ 120 ಅಡಿಯಿಂದ ಗರಿಷ್ಠ 300 ಅಡಿ ಆಳಕ್ಕೆ ಕೊಳವೆಬಾವಿ ಕೊರೆಯಿಸಿದರೆ ನೀರು ಸಿಗುತ್ತಿತ್ತು. 2016ರಲ್ಲಿ ಈ ಆಳ 400 ಅಡಿಗಳಿಂದ 600 ಅಡಿಗಳ ಆಳಕ್ಕೆ ಕುಸಿದಿದೆ. ಬಯಲುಸೀಮೆಯಲ್ಲಿ 600 ಅಡಿಗಳಿಂದ 800 ಅಡಿ ಆಳದಲ್ಲಿ ಸಿಗುತ್ತಿದ್ದ ನೀರು ಈಗ 1,400 ಅಡಿಗಳಿಂದ 1,800 ಅಡಿ ಆಳಕ್ಕೆ ತಲುಪಿದೆ ಎಂದು ಅಂತರ್ಜಲ ನಿರ್ದೇಶನಾಲಯ ತಿಳಿಸಿದೆ

ಉರಿ ಬೇಗೆ ಮತ್ತು ನೀರಿನ ಬವಣೆಯಿಂದ ಬಳಲುವ ಕಲಬುರ್ಗಿ, ಬಳ್ಳಾರಿ, ರಾಯಚೂರು, ಯಾದಗಿರಿ ಜಿಲ್ಲೆಗಳಲ್ಲಿ ಸ್ಥಿರ ಜಲಮಟ್ಟ ಆತಂಕಕಾರಿ ಮಟ್ಟಕ್ಕೆ ಕುಸಿದಿಲ್ಲ. ಕೊಪ್ಪಳ ಜಿಲ್ಲೆಯಲ್ಲಿ ಸ್ಥಿರ ಜಲಮಟ್ಟ ಏರಿಕೆಯಾಗಿದೆ. ಅರಣ್ಯ ಪ್ರದೇಶ ದಿನದಿಂದ ದಿನಕ್ಕೆ ಕುಗ್ಗುತ್ತಿರುವುದು, ವಾಡಿಕೆ ಮಳೆ ಪ್ರಮಾಣ ಕಡಿಮೆಯಾಗುತ್ತಿರುವುದರಿಂದ ಅಂತರ್ಜಲ ಪಾತಾಳದತ್ತ ಸರಿಯುತ್ತಿದೆ. ಬಹುತೇಕ ಜಿಲ್ಲೆಗಳಲ್ಲಿ ಅಂತರ್ಜಲ ಮಿತಿ ಮೀರಿ ಬಳಕೆಯಾಗಿದೆ. ಜಲಸಂರಕ್ಷಣೆಗೆ ಆದ್ಯತೆ ನೀಡದೆ ಇದ್ದರೆ ಮುಂದಿನ ದಶಕದಲ್ಲಿ ಕರ್ನಾಟಕವನ್ನು ಭೀಕರ ಜಲಕ್ಷಾಮ ಆವರಿಸಲಿದೆ.

ರಾಜ್ಯದ ಹಲವು ಕಡೆ ಕಾಡ್ಗಿಚ್ಚು

ಬಂಡೀಪುರ ಹುಲಿ ಸಂರಕ್ಷಿತಾ ಅರಣ್ಯ, ಕಪ್ಪತಗುಡ್ಡ ಸೇರಿದಂತೆ ರಾಜ್ಯದ ಹಲವೆಡೆ ಕಾಣಿಸಿಕೊಂಡಿರುವ ಕಾಡ್ಗಿಚ್ಚಿಗೆ ನೂರಾರು ಎಕರೆಗಳಷ್ಟು ಕಾಡು ನಾಶವಾಗಿ ಗಂಭೀರ ಪರಿಸ್ಥಿತಿ ಉಂಟಾಗಿದೆ. ಸುಂಟಿಕೊಪ್ಪ (ಕೊಡಗು) ಸಮೀಪದ ಕಲ್ಲೂರು ಬೆಟ್ಟ ಹಾಗೂ ಆನೇಕಾಡು ಮೀಸಲು ಅರಣ್ಯ ಪ್ರದೇಶದಲ್ಲಿ ಕಾಣಿಸಿಕೊಂಡಿದ್ದ ಕಾಳ್ಗಿಚ್ಚಿಗೆ 700 ಎಕರೆಯಷ್ಟು ಅರಣ್ಯ ಪ್ರದೇಶ ನಾಶವಾಗಿದೆ. ಆನೆಕಾಡು, ಅತ್ತೂರು ವ್ಯಾಪ್ತಿಯಲ್ಲಿ ಕಾಳ್ಗಿಚ್ಚು ಹತೋಟಿಗೆ ಬಂದಿದೆ. ಕಾಡಿಗೆ ಆಕಸ್ಮಿಕವಾಗಿ ಬೆಂಕಿ ಬಿದ್ದಿದಿಯೋ ಅಥವಾ ಕೀಡಿಗೇಡಿಗಳು ಬೆಂಕಿ ಹಚ್ಚಿದ್ದರೋ ಎಂಬ ಬಗ್ಗೆ ತನಿಖೆಗೆ ಆಜ್ಞೆ ಮಾಡಲಾಗಿದೆ. ಬಂಡೀಪುರ ಹುಲಿ ಸಂರಕ್ಷಣಾ ಪ್ರದೇಶದ ಕಲ್ಕೆರೆ ವಲಯದಲ್ಲಿ ಇತ್ತೀಚೆಗೆ ಬೆಂಕಿ ನಂದಿಸುವ ವೇಳೆ ಅರಣ್ಯ ರಕ್ಷಕ ಪ್ರಾಣ ಕಳೆದುಕೊಂಡಿದ್ದಾರೆ. ಅರಣ್ಯ ರಕ್ಷಣೆಯ ವಿಧಾನಗಳು, ಅದರ ಜಾರಿಯ ವೈಖರಿ, ಅರಣ್ಯ ರಕ್ಷಕರ ಸಂಖ್ಯೆ ಪರಿಕರಗಳ ಕೊರತೆ, ಅರಣ್ಯ ಅಧಿಕಾರಿಗಳ ನಿರ್ಲಕ್ಷ್ಯ, ಅರಣ್ಯಗಳನ್ನು ಅಕ್ರಮವಾಗಿ ಪ್ರವೇಶಿಸಿ ಟಿಂಬರ್ ಮುಂತಾದ ಅರಣ್ಯ ಉತ್ಪನ್ನಗಳ ಕಳ್ಳ ಸಾಗಾಣಿಕೆಗಾಗಿ ಮಾಫಿಯಾದ ಕಿಡಿಗೇಡಿ ಕೃತ್ಯಗಳ ಸಾಧ್ಯತೆ ಇವೆಲ್ಲವೂ ಮುನ್ನೆಲೆಗೆ ಬಂದಿದೆ. 'ಕಳೆದ ಮೂರು ವರ್ಷಗಳಲ್ಲಿ ಮಳೆ ಪ್ರಮಾಣ ಕುಸಿದಿದೆ. ಅರಣ್ಯ ಪ್ರದೇಶದಲ್ಲಿ ತೇವಾಂಶ ಕೊರತೆಯಿಂದ ಹುಲ್ಲು ಮತ್ತು ಗಿಡಗಂಟಿಗಳು ಒಣಗಿವೆ. ಈ ಹಿಂದಿನ ಬೇಸಿಗೆಗೆ ಹೋಲಿಸಿದರೆ, ಈ ಬಾರಿ ಅರಣ್ಯವನ್ನು ಬೆಂಕಿಯಿಂದ ರಕ್ಷಿಸುವುದು ಸವಾಲಿನ ಕೆಲಸ? ಕೆಲವು



ಭಾಗಗಳಲ್ಲಿ ವ್ಯಾಪಕವಾಗಿ ಬೆಳೆದಿರುವ ಲಂಟಾನ ಸಸ್ಯ ಪ್ರಬೇಧವು ಸಮಸ್ಯೆ ಉಲ್ಬಣಗೊಳ್ಳುವಂತೆ ಮಾಡಿದೆ. ರಾಷ್ಟ್ರೀಯ ನೀತಿ ಮತ್ತು ಕೋರ್ಟ್ ಆದೇಶ ಪ್ರಕಾರ ಕಾಡಿನಲ್ಲಿ ಬಿದ್ದ ಮರಗಳನ್ನು ತೆರವು ಮಾಡುವಂತಿಲ್ಲ. ಇದರಿಂದಲೂ ಬೆಂಕಿ ವ್ಯಾಪಕವಾಗಿ ಹಬ್ಬುತ್ತದೆ' ಎಂದು ಹೇಳಲಾಗಿದೆ. ಈ ನಡುವೆ ಡಿ.ಎಫ್.ಓ. ನಿವಾಸವನ್ನು ಸರದಿ ಪ್ರಕಾರ ರಾತ್ರಿ ಕಾವಲು ಕಾಯುವಂತೆ ಉಪ ವಲಯ ಅರಣ್ಯಾಧಿಕಾರಿಗಳು ಮತ್ತು ಅರಣ್ಯ ರಕ್ಷಕರನ್ನು ನಿಯೋಜಿಸಿರುವುದನ್ನು ವಿರೋಧಿಸಿ ನೌಕರರು ಮತ್ತು ಸಿಬ್ಬಂದಿ ಸಾಮೂಹಿಕ ರಜೆ ಹಾಕಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಕಚೇರಿ ಎದುರು ಅಹೋರಾತ್ರಿ ಅರೆಬೆತ್ತಲೆ ಧರಣಿ ನಡೆಸಿದ್ದು, ಅರಣ್ಯ ಸಂರಕ್ಷಣಾ ವ್ಯವಸ್ಥೆಯ ಸಮಸ್ಯೆಗಳು ಬೆಳಕಿಗೆ ಬಂದಿವೆ.

ರಾಜ್ಯದ ಹಲವೆಡೆ ಕಾಣಿಸಿಕೊಂಡಿರುವ ಕಾಳ್ಗಿಚ್ಚಿಗೆ ಸಂಬಂಧಿಸಿದಂತೆ ಸಿಐಡಿ ತನಿಖೆ ನಡೆಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶ ನೀಡಿದ್ದಾರೆ. ಈ ಸಮಸ್ಯೆಗೆ ಸೂಕ್ತ ಮತ್ತು ಶಾಶ್ವತ ಪರಿಹಾರ ಕಂಡುಕೊಳ್ಳಬೇಕಾಗಿದೆ.

ಚುನಾವಣಾ ಜಾಹೀರಾತಿನಲ್ಲಂತೂ ಬಿಜೆಪಿಗೆ ಮೂರನೇ ಎರಡು ಪಾಲು!



ಈ ಸಂಚಿಕೆ ಓದುಗರ ಕೈಸೇರುವ ವೇಳೆಗೆ ವಿಧಾನ ಸಭಾ ಚುನಾವಣೆಗಳ ಫಲಿತಾಂಶಗಳು ಬಂದಿರುತ್ತವೆ. ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಹಲವು ಎಕ್ಸಿಟ್ ಪೋಲ್‌ಗಳು ಬಿಜೆಪಿಗೆ ಅಡ್ವಾನ್ಸ್ ವಿಜಯಮಾಲೆ ಹಾಕಿವೆ. ಕೆಲವಂತೂ ಮೂರನೇ ಎರಡು ಬಹುಮತ ಕೊಟ್ಟಿವೆ.

ಅದೇನೇ ಇರಲಿ, ಭ್ರಷ್ಟಾಚಾರವನ್ನು ನಿಗ್ರಹಿಸುವ ಹೆಸರಲ್ಲಿ ನೋಟು ರದ್ಧತಿ ಮಾಡಿದ ನಂತರ, ರಾಜಕೀಯ ನಿಧಿ ಸಂಗ್ರಹದಲ್ಲಿ ಪಾರದರ್ಶಕತೆಯ ಮಾತುಗಳ ನಂತರ ನಡೆದಿರುವ ಈ ಚುನಾವಣೆಗಳಲ್ಲಿ ಜಾಹೀರಾತುಗಳಿಗೆ ಖರ್ಚು ಮಾಡುವಲ್ಲಿ ಬಿಜೆಪಿಗೆ ಸರಿಸಾಟಿಯಾಗಿ ಯಾರೂ ಇರಲಿಲ್ಲ ಎಂಬುದರಲ್ಲಿ ಮಾತ್ರ ಯಾವ ಸಂದೇಹವೂ ಇಲ್ಲ. ಇಕನಾಮಿಕ್ ಟೈಂಸ್‌ನಲ್ಲಿ ಪ್ರಕಟವಾದ ಒಂದು ವರದಿ (ಗೌರವ್ ಲಗಾಟೆ, ಇಟಿ ಬ್ಯುರೊ, ಫೆ.20) ಇದನ್ನು ದೃಢಪಡಿಸಿದೆ. ನೋಟು ರದ್ಧತಿಯ ಅದರ ‘ಮಿಂಚಿನ ಪ್ರಹಾರ’(ಸರ್ಜಿಕಲ್ ಸ್ಟ್ರೈಕ್) ಆಗಿತ್ತೋ ಇ ಲ್ಲವೋ ಟಿವಿ, ರೇಡಿಯೋ ಮತ್ತು ಮುದ್ರಣ ಮಾಧ್ಯಮಗಳಲ್ಲಿ ಅದರ ಎಡೆಬಿಡದ ಪ್ರಚಾರ ಮಾತ್ರ ಖಂಡಿತವಾಗಿಯೂ ‘ಕಾರ್ಪೆಟ್ ಬಾಂಬಿಂಗ್’ ಆಗಿತ್ತು ಎಂದು ಈ ಲೇಖನ ವಿಶ್ಲೇಷಿಸಿದೆ.

ಮಾಧ್ಯಮ ಜಾಹಿರಾತು ಉದ್ದಿಮೆಯ ಮೂಲಗಳ ಪ್ರಕಾರ ನವಂಬರ್ 2016ರಿಂದ ಈ ವರ್ಷದ ಫೇ.4, 2017ರ ವರೆಗೆ ಬಿಜೆಪಿ ಈ ಮೂರು ಮಾಧ್ಯಮಗಳಲ್ಲಿ ಪ್ರಚಾರಕ್ಕೆ 150 ಕೋಟಿ ರೂ. ಖರ್ಚು ಮಾಡಿದೆ. ಇದು ಚುನಾವಣಾ ವೆಚ್ಚದ ಬಾಬ್ತಿಗೆ ಸೇರುವುದಿಲ್ಲ ಎಂದು ಗಮನಿಸಬೇಕು ಆಡ್‌ಎಕ್ಸ್ ಇಂಡಿಯಾ ಎಂಬ ಜಾಹೀರಾತು ಕಂಪನಿಯ ಮಾಹಿತಿಯ ಪ್ರಕಾರ ಫೆ.4 ರ ವರೆಗೆ ಉತ್ತರ ಪ್ರದೇಶ, ಪಂಜಾಬ್, ಗೋವಾ ರಾಜ್ಯಗಳಲ್ಲಿ ಜಾಹಿರಾತುಗಳ ಪಕ್ಷವಾರು ಪಾಲು ಹೀಗಿದೆ:

ಬಿಜೆಪಿ ಏಕಾಂಗಿಯಾಗಿ	59%
ಬಿಜೆಪಿ–ಅಕಾಲಿದಳ ಜಂಟಿಯಾಗಿ	11%
ಸಮಾಜವಾದಿ ಪಕ್ಷ	13%
ಬಿಎಸ್‌ಪಿ	12%
ಕಾಂಗ್ರೆಸ್	4%
ಲೋಕದಳ	0.7%
ಆಮ್ ಆದ್ಮಿ	0.1%

ಜನವರಿ ತಿಂಗಳಲ್ಲಿ ಅತಿ ಹೆಚ್ಚು ಜಾಹಿರಾತುಗಳು ಪ್ರಕಟವಾದವು ಎನ್ನುತ್ತದೆ ಈ ಮಾಹಿತಿ. ಟಿವಿ ಚಾನೆಲ್‌ಗಳಲ್ಲಿ 27,133, ರೇಡಿಯೋದಲ್ಲಿ 11,722 ಮತ್ತು ಪತ್ರಿಕೆಗಳಲ್ಲಿ 2797 ಜಾಹಿರಾತುಗಳು ಪ್ರಕಟವಾದವು. ಸಹಜವಾಗಿ ಚುನಾವಣೆ ಕಾವು ತುತ್ತತುದಿಗೇರಿದ ಫೆಬ್ರುವರಿ ಮತ್ತು ಮಾರ್ಚ್ ತಿಂಗಳಲ್ಲಿ, ಅದೂ ಕಬ್ರಿಸ್ತಾನ್–ಸ್ಮಶಾನದ ಮಾತುಗಳ ಆರಂಭವಾದಾಗ ಬಿಜೆಪಿಯ ‘ಲೀಡ್’ ಮತ್ತಷ್ಟು ಹೆಚ್ಚಿರಬೇಕು ಎಂದು ಸಹಜವಾಗಿಯೇ ನಿರೀಕ್ಷಿಸಬಹುದು.

ರಾಜ್ಯವಾರು ನೋಡಿದಾಗ, ಉತ್ತರಪ್ರದೇಶದಲ್ಲಿ ಬಿಜೆಪಿಯ ಜಾಹಿರಾತು ಪಾಲು 69% ತಲುಪಿತು. 2014ರ ಸ್ಥಾನವನ್ನು ಉಳಿಸಿಕೊಳ್ಳಲು ಎರಡೂವರೆ ವರ್ಷಗಳ ‘ಅಚ್ಚೇದಿನ್’ ಹೊರತಾಗಿಯೂ ಇದು ಅತ್ಯಗತ್ಯ ಎಂದು ಈ ಕೇಂದ್ರದ ಆಳುವ ಪಕ್ಷಕ್ಕೆ ಅನಿಸಿರುವುದು ಸ್ವಯಂವೇದ್ಯ.

ಸಮಾಜವಾದಿ ಪಕ್ಷದ ಪಾಲು 17% ಮತ್ತು ಬಿಎಸ್‌ಪಿ ಪಾಲು 12%. ಲೋಕದಳ ಮತ್ತು ಕಾಂಗ್ರೆಸ್ ತಲಾ 1% ಮಾತ್ರ.

ಉತ್ತರಪ್ರದೇಶದ ಪ್ರಚಾರದ ಕೊನೆಯ ಎರಡು ದಿನಗಳಲ್ಲಿ ಪ್ರಧಾನಿಗಳು ತಮ್ಮ ಕ್ಷೇತ್ರ ವಾರಣಾಸಿಯಲ್ಲೇ ಕ್ಯಾಂಪ್ ಮಾಡಿದ್ದರು. ರೋಡ್ ಶೋಗಳ ಸ್ಪರ್ಧೆಯಲ್ಲಿ ಮೋದಿ ಶೋ ನಂತರ ನಡೆದ ಅಖಿಲೇಶ್–ರಾಹುಲ್ ರೋಡ್ ಶೋ ಅದಕ್ಕೆ ಸರಿಸಾಟಿಯಾಗಿದ್ದರೂ, ಇದಕ್ಕೆ ಮಾಡಿದ ಖರ್ಚಿನಲ್ಲಿ ಮಾತ್ರ ಬಿಜೆಪಿ ಭಾರೀ ‘ಲೀಡ್’ಪಡೆದಿತ್ತು ಎಂದು ಪ್ರತ್ಯೇಕ ವರದಿಗಳು ಹೇಳುತ್ತಿವೆ. ಭಾರೀ ಜಯಗಳಿಸಿದ ಎರಡೂವರೆ ವರ್ಷಗಳ ನಂತರವೂ ದೇಶದ ಪ್ರಧಾನ ಮಂತ್ರಿಗಳು ಇಂತಹ ರೋಡ್‌ಶೋಗೆ ಇಳಿದಿರುವುದು ‘ಶೋಭೆ ತರುವಂತದ್ದಲ್ಲ ಎಂದು ಬಿಜೆಪಿಯ ಮಿತ್ರಪಕ್ಷಗಳ ಮುಖಂಡರೇ ಹೇಳುವಂತಾಗಿದೆಯಂತೆ.

ಪಂಜಾಬಿನಲ್ಲಿ ಬಿಜೆಪಿ ಮತ್ತು ಅಕಾಲಿ ಪಕ್ಷಗಳ ಜಂಟಿ ಜಾಹಿರಾತುಗಳ ಪಾಲು 93%, ಇದರ ಜೊತೆಗೆ ಬಿಜೆಪಿಯ ಪ್ರತ್ಯೇಕ ಜಾಹಿರಾತುಗಳ ಪ್ರಮಾಣ 4% , ಕಾಂಗ್ರೆಸ್2% ಮತ್ತು ಆಮ್ ಆದ್ಮಿ ಪಕ್ಷದ್ದು 1%.

ಗೋವಾದಲ್ಲಿ ಮಾತ್ರ ಬಿಜೆಪಿ ಪಾಲು 37% , ಕಾಂಗ್ರೆಸಿನದ್ದು

ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳ ಈ ಅಪಾರ ಹಣಬಲದ ಮೂಲಗಳು ಎಲ್ಲಿವೆ ಎಂಬುದು ಸಹಜವಾಗಿ ಮತ್ತೆ ಏಳುವ ಪ್ರಶ್ನೆ.

ಈ ಬಾರಿ ಮೂರು ಪಟ್ಟು ಚುನಾವಣಾ ನಗದು ವಶ!

ನೋಟು ರದ್ಧತಿಯ ನಂತರ ನಡೆಯುತ್ತಿರುವ ಮೊದಲ ಚುನಾವಣೆಗಳು ಇದಾಗಿದ್ದು ಇದರಲ್ಲಿ ನಗದಿನ ಅಟಾಟೋಪ ಇರುವುದಿಲ್ಲ ಎಂಬ ನಿರೀಕೆ ಮತ್ತೊಮ್ಮೆ ಸಂಪೂರ್ಣ ಸುಳ್ಳಾಗಿದೆ. ವಾಸ್ತವವಾಗಿ ಚುನಾವಣಾ ಅಧಿಕಾರಿಗಳು ವಶಪಡಿಸಿಕೊಂಡಿರುವ ನಗದಿನ ಪ್ರಮಾಣ ಈ ರಾಜ್ಯಗಳಲ್ಲಿ 2012ರ ಚುನಾವಣೆಗಳಿಗೆ ಹೋಲಿಸಿದರೆ ಮೂರು ಪಟ್ಟಿಗಿಂತಲೂ ಹೆಚ್ಚು ಎನ್ನಲಾಗಿದೆ. 2012ರಲ್ಲಿ 50.78 ಕೋಟಿ ರೂ.ವಶಪಡಿಸಿಕೊಂಡಿದ್ದರೆ ಈ ಬಾರಿ ಅದು 184.85 ಕೋಟಿ ರೂ. ನೋಟುರದ್ಧತಿ ಚುನಾವಣೆಗಳನ್ನು ಸ್ವಚ್ಛಗೊಳಿಸಿಲ್ಲ ಎಂಬುದು ಇದರಿಂದ ಸ್ವಯಂವೇದ್ಯ.

ವಶಪಡಿಸಕೊಂಡ ಮದ್ಯ, ಮಾದಕ ದ್ರವ್ಯಗಳು ಮತ್ತು ಚಿನ್ನ ಮುಂತಾದವುಗಳನ್ನೂ ದೊಡ್ಡ ಪ್ರಮಾಣದಲ್ಲಿ ವಶಪಡಿಸಿಕೊಳ್ಳಾಗಿದೆ. ಈ ಎಲ್ಲದರಲ್ಲೂ ಉತ್ತರಪ್ರದೇಶದ್ದೇ ಮೇಲುಗೈ. ಮದ್ಯ, ಮಾದಕ ದ್ರವ್ಯಗಳಲ್ಲಿ ಇತ್ತೀಚೆಗೆ ಪಂಜಾಬ್ ಹೆಸರು ಮಾಡಿದ್ದರೂ, ಈ ಚುನಾವಣೆಯಲ್ಲಿ ಅದಕ್ಕೆ ಉತ್ತರಪ್ರದೇಶವನ್ನು ಹಿಂದಕ್ಕೆ ತಳ್ಳುವದಾಗಿಲ್ಲ ಎನ್ನಲಾಗಿದೆ.

‘ಜನಧನ’: ಕೀರ್ತಿ ಪ್ರಧಾನಿಗಳಿಗೆ, ಹೊರೆ ಸಾಮಾನ್ಯ ಬ್ಯಾಂಕ್ ಖಾತೆದಾರರಿಗೆ!

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಅಧ್ಯಕ್ಷೆ ಬ್ಯಾಂಕ್ ಖಾತೆಗಳಿಂದ ನಗದು ನಿಕಾಲೆಗಳಿಗೆ ಶುಲ್ಕದ ರೂಪದಲ್ಲಿ ‘ದಂಡ’ವಿಧಿಸುವುದನ್ನು ಸಮರ್ಥಿಸಿಕೊಳ್ಳುತ್ತ ‘ಜನಧನ’ ಖಾತೆಗಳನ್ನು ಸಮರ್ಥವಾಗಿ ನಡೆಸುವ ಹೊಣೆ ನಿಭಾಯಿಸಲು ಇದು ಅಗತ್ಯ ಎಂದಿದ್ದಾರೆ.

ಇದು ಒಂದಂಶವನ್ನು ಅನಾವರಣ ಗೊಳಿಸಿದೆ. ಭಾರತ ಸರಕಾರದ, ಅದರಲ್ಲೂ ಪ್ರಧಾನಿಗಳ ಈ ‘ಅತಿ ದೊಡ್ಡ ಸಾಧನೆ’ಯ ಹೊರೆ ಅವರ ಸರಕಾರದ ಮೇಲೆ ಎಳ್ಳಷ್ಟೂ ಇಲ್ಲ. ಅದರ ಹೊರೆಯನ್ನು ಸಂಪೂರ್ಣವಾಗಿ ಬ್ಯಾಂಕುಗಳ ಮೇಲೆ ಹಾಕಲಾಗಿದೆ. ಈ ಬ್ಯಾಂಕುಗಳು ಅದನ್ನು ಬಡ ಖಾತೆದಾರರಿಂದ ವಸೂಲಿ ಮಾಡುತ್ತಿದ್ದಾರೆ. ಬಡ ಖಾತೆದಾರರು ಏಕೆಂದರೆ 25,000ರೂ. ಗಿಂತ ಹೆಚ್ಚು ಬ್ಯಾಂಕ್ ಬ್ಯಾಲೆನ್ಸ್ ಇರುವವರಿಗೆ ಸ್ಟೇಟ್ ಬ್ಯಾಂಕಿನ ಎಟಿಎಂಗಳಿಂದ ನಗದು ತೆಗೆದರೆ ‘ದಂಡ’ ಇಲ್ಲ. 1ಲಕ್ಷ ರೂ.ಗಿಂತ ಹೆಚ್ಚು ಬ್ಯಾಂಕ್ ಬ್ಯಾಲನ್ಸ್ ಇದ್ದರಂತೂ ಯಾವ ಬ್ಯಾಂಕಿನ ಎಟಿಎಂನಿಂದ ತೆಗೆದರೂ ‘ದಂಡ’ ಇಲ್ಲ. ಅಂದರೆ ಇದರ ಸಂಪೂರ್ಣ ಹೊರೆ 25,000ರೂ.ಗಿಂತ ಕಡಿಮೆ ಬ್ಯಾಂಕ್ ಬ್ಯಾಲನ್ಸ್ ಇರುವವರ ಮೇಲೆಯೇ!

ಮಲ್ಯನಂತವರಿಗೆ ಬೇಕಾಬಿಟ್ಟಿ ಸಾಲ ನೀಡಿ ಕೈಸುಟ್ಟುಕೊಂಡರೂ ಅವರನ್ನು ಮುಟ್ಟಲಾರದ ಈ ಬ್ಯಾಂಕ್ ಮತ್ತು ಬೇರೆ ಬ್ಯಾಂಕುಗಳಿಗೆ ‘ಜನಧನ’ ಹೊರೆ ನಿಭಾಯಿಸಲು ಕಣ್ಣಿಗೆ ಬಿದ್ದಿರುವುದು ಬಡ ಖಾತೆ–ದಾರರು ಮಾತ್ರ!

ಮಹಾತ್ಮ ಗಾಂಧಿ ಹೆಸರಿನ ಯೋಜನೆಯಲ್ಲಿ 1 ರೂ. ಹೆಚ್ಚಳ: ಅಚ್ಛೇದಿನ್‌ಗಳ ‘ಚಾರಿತ್ರಿಕ ದಾಖಲೆ’

ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ(ಮನರೇಗ)ಯ ಅಡಿಯಲ್ಲಿ ಈ ಬಾರಿ ಮಾಡಿದ ದಿನಗೂಲಿ ಹೆಚ್ಚಳ ಹಲವು ರಾಜ್ಯಗಳಲ್ಲಿ ಕೇವಲ 1ರೂ. ಗ್ರಾಮೀಣ ಕೂಲಿಕಾರರು ಒಂದು ಹಕ್ಕಾಗಿ ಪಡೆದ ಈ ಯೋಜನೆಯ 11 ವರ್ಷಗಳ ಇತಿಹಾಸದಲ್ಲಿ ಅತೀ ಕಡಿಮೆ ಹೆಚ್ಚಳ ಎಂಬ ಹೊಸ ದಾಖಲೆ ಸೃಷ್ಟಿಸಿದ ಕೀರ್ತಿ ಈ ಅಚ್ಚೇ ದಿನ್‌ಗಳದ್ದು.

ಹನ್ನೊಂದು ರಾಜ್ಯಗಳಲ್ಲಿ ಮನರೇಗ ಕೂಲಿ ಆಯಾ ರಾಜ್ಯದ ಕನಿಷ್ಟ ಕೂಲಿಗಿಂತಲೂ ಕಡಿಮೆಯಿದೆ. ಇದು ಕಳೆದ ವಾರ ಕೇಂದ್ರ ಗ್ರಾಮೀಣ ಅಭಿವೃದ್ಧಿ ಮಂತ್ರಾಲಯ ಪ್ರಕಟಿಸಿದ ಎಪ್ರಿಲ್ 1ರಿಂದ ಅನ್ವಯವಾಗುವ ಕೂಲಿದರಗಳಿಂದ ವ್ಯಕ್ತವಾಗಿರುವ ಸಂಗತಿ.


ರಾಜ್ಯ	2016 ಕೂಲಿ	2017 ಕೂಲಿ	ರಾಜ್ಯದಲ್ಲಿನ ಕನಿಷ್ಟ ಕೂಲಿ
ಅಸ್ಸಾಂ	182	183	240
ಬಿಹಾರ	167	168	181
ಝಾರ್ಖಂಡ್	167	168	210
ಉತ್ತರಾಖಂಡ	174	175	200
ಒಡಿಶ	174	176	200
ಪ.ಬಂಗಾಲ	176	180	211

ಕೇರಳ ಮತ್ತು ಹರ್ಯಾಣದಲ್ಲಿ ಗರಿಷ್ಟ, ಅಂದರೆ 18 ರೂ. ಹೆಚ್ಚಳವಾಗಿದೆ. ಈ ಮೊದಲು ಮನರೇಗ ಕೂಲಿ ಆಯಾರಾಜ್ಯದ ಕನಿಷ್ಟ ಕೂಲಿಗೆ ಸಮನಾಗಿತ್ತು. ಆದರೆ ಕೇಂದ್ರ ಸರಕಾರ ಅದು ರಾಜ್ಯದ ಕೃಷಿ ಕಾರ್ಮಿಕರ ಸೂಚ್ಯಂಕಕ್ಕೆ ಅನುಗುಣವಾಗಿರಬೇಕು ಎಂದು ನಿರ್ಧರಿಸಿ ಅದನ್ನು ಈಗಿನ ಮಟ್ಟಕ್ಕೆ ಇಳಿಸಿತು ಎಂಬುದನ್ನು ಇಲ್ಲಿ ಗಮನಿಸಬಹುದು.

ಆರ್ಥಿಕ ತಜ್ಞ ಮಹೇಂದ್ರ ದೇವ್ ನೇತೃತ್ವದ ಒಂದು ಸಮಿತಿ 2014ರಲ್ಲಿ ಮನರೇಗ ಕೂಲಿ ಮತ್ತು ರಾಜ್ಯದ ಕನಿಷ್ಟ ಕೂಲಿಯನ್ನು 2014ರಲ್ಲಿ ಒಂದೇ ಮಟ್ಟಕ್ಕೆ ತಂದು ನಂತರ ರಾಜ್ಯದ ಗ್ರಾಮೀಣ ಕಾರ್ಮಿಕರ ಸೂಚ್ಯಂಕಕ್ಕೆ ಲಗತ್ತಿಸಿದ್ದರೆ ಈ ಅಂತರ ಇಲ್ಲವಾಗುತ್ತಿತ್ತು ಎಂಬುದು ಈ ರಂಗದಲ್ಲಿ ಕೆಲಸ ಮಾಡುತ್ತಿರುವ ಸಾಮಾಜಿಕ ಕಾರ್ಯಕರ್ತರ ಅಭಿಪ್ರಾಯ. ಅಚ್ಛೇದಿನ್ ಸರಕಾರದ ಹಣಕಾಸು ಮಂತ್ರಾಲಯಕ್ಕೆ ಈ ಶಿಫಾರಸು ಪಥ್ಯವಾಗಿಲ್ಲವಂತೆ. ಯಾಕೆ ಎಂಬುದಕ್ಕೂ ಈಗ ಕಾರಣಕ್ಕೆ ತಡಕಾಡಬೇಕಿಲ್ಲ ತಾನೇ?

ರಾಜ್ಯದ ಕನಿಷ್ಟ ಕೂಲಿಗಿಂತ ಕಡಿಮೆ ಕೂಲಿ ಕೊಡುವುದು ಬಲವಂತದ ದುಡಿಮೆಯಾಗುತ್ತದೆ ಎಂದು ಸುಪ್ರಿಂ ಕೋರ್ಟ್ ಹೇಳಿದರೇನಂತೆ? ಕಾರ್ಪೊರೇಟ್‌ಗಳಿಂದ ಲಕ್ಷ ಕೋಟಿ ರೂ.ಗಳನ್ನು ಬಿಟ್ಟು ಕೊಟ್ಟ ಮೇಲೆ ಈ ಕ್ರಮಕ್ಕೆ ಬೇಕಾಗುವ ಕೇವಲ 3000 ಕೋಟಿ ರೂ. ಅದರ ಬಳಿ ಎಲ್ಲಿದೆ, ಪಾಪ!

ಕಳೆದ 13 ದಿನಗಳಲ್ಲಿ ಅಮೆರಿಕಾದಲ್ಲಿ 4 ಭಾರತೀಯರ ಮೇಲೆ ದೇಶ ಬಿಟ್ಟು ಹೋಗಿ ಎಂದು ಹಲ್ಲೆ ನಡೆದಿದೆ. ಅವರಲ್ಲಿ ಇಬ್ಬರು ಪ್ರಾಣ ಕಳಕೊಂಡಿದ್ದಾರೆ. ಸ್ವಲ್ಪ ವಿಳಂಬವಾಗಿಯಾದರೂ ಅಮೆರಿಕಾದ ಅಧ್ಯಕ್ಷರು ಏನೋ ಬಾಯಿ ತೆರೆದರೂ ನಮ್ಮ ಪ್ರಧಾನಿಗಳು ಇದುವರೆಗೂ ಮೌನ ಧರಿಸಿರುವುದೇಕೆ ಎಂದು ಲೋಕಸಭೆಯಲ್ಲಿ ಪ್ರತಿಪಕ್ಷಗಳು ಪ್ರಶ್ನಿಸಿವೆ. ಈ ಬಗ್ಗೆ ವ್ಯಂಗ್ಯಚಿತ್ರಕಾರ ಅಜಿತ್ ನೈನನ್(ಟೈಂಸ್ ಆಫ್ ಇಂಡಿಯಾ)ರವರ ಈ ಮಾರ್ಮಿಕ ವ್ಯಂಗ್ಯಚಿತ್ರವನ್ನು ನೋಡಿ.



ಚಮಚಾ ಬಂಡವಾಳಿಗರಿಗೆ ‘ಅಚ್ಛೇ ದಿನ್”

ಟೆಲಿಕಾಂ ಇಲಾಖೆಯಲ್ಲಿ ಕಳೆದ ಏಳು ವರ್ಷಗಳಿಂದ ಕಾರ್ಯದರ್ಶಿಯಾಗಿ ಅಲ್ಲಿ ನಡೆದ ಹಗರಣಗಳ ಒಳ–ಹೊರಗನ್ನು ಅರಿತಿದ್ದ ಜೆ.ಎಸ್.ದೀಪಕ್ ಅವರನ್ನು ಅಲ್ಲಿಂದ ಇದ್ದಕ್ಕಿದ್ದಂತೆ ವಾಣಿಜ್ಯ ಇಲಾಖೆಗೆ ವರ್ಗಾವಣೆ ಮಾಡಿರುವುದು ಉನ್ನತ ಸರಕಾರೀ ಅಧಿಕಾರಿಗಳು ಮತ್ತು ಟೆಲಿಕಾಂ ಉದ್ದಿಮೆಯ ಎಕ್ಸ್‌ಕ್ಯುಟಿವ್‌ಗಳಿಗೂ ಬಹಳ ಆಶ್ಚರ್ಯ ತಂದಿದೆಯಂತೆ. ಇವರು ಅಂಬಾನಿಯ ರಿಲಯನ್ಸ್ ಜಿಯೊ ಮತ್ತು ಅದರ ಬೆಂಬಲಕ್ಕೆ ನಿಂತ ಟೆಲಿಕಾಂ ನಿಯಂತ್ರಣ ಪ್ರಾಧಿಕಾರದೊಂದಿಗೆ ಘರ್ಷಣೆಗೆ ಇಳಿದದ್ದೇ ಇದಕ್ಕೆ ಕಾರಣ ಎನ್ನಲಾಗಿದೆ.

‘ಅಚ್ಛೆ ದಿನ್’ಗಳು ಕಾಂಗ್ರೆಸ್ ಮುಕ್ತವಾದರೂ ‘ಚಮಚಾ ಬಂಡವಾಳಶಾಹಿ– ಮುಕ್ತ’ ವಾಗುವುದಿಲ್ಲ, ಬದಲಾಗಿ ಅದು ಇನ್ನೂ ಹೆಚ್ಚು ರಾರಾಜಿಸುತ್ತಿದೆ ಎಂಬುದಕ್ಕೆ ಇದು ಇನ್ನೊಂದು ಸಾಕ್ಷಿ ಎನ್ನಲಾಗಿದೆ.

“ನನ್ನ ತಂದೆಯವರನ್ನು 2007ರಲ್ಲಿ ಈಶಾನ್ಯದ ಉಗ್ರರು ಅಮಾನುಷವಾಗಿ ಕೊಂದರು”, “ಈಗ ಅವರು ಬಿಜೆಪಿ ಸೇರಿ ನನ್ನ ಜಿಲ್ಲೆ ಅಸ್ಸಾಂನ ದಿಮ ಹಸವೊದ ಆಳರಸರಾಗಿದ್ದಾರೆ” -ಇವು ಅಸ್ಸಾಂನ ಹಾಡುಗಾರ ಡೇನಿಯಲ್ ಲಂಗ್ತಸ ತನ್ನ ಫೇಸ್‌ಬುಕ್‌ನಲ್ಲಿ ಹಾಕಿದ 13 ಚಿತ್ರಗಳಲ್ಲಿ ಎರಡು. ಇದಕ್ಕಾಗಿ ಈಗ ಸಂಘ ಪರಿವಾರದ ಟ್ವಿಟರ್ ಗ್ಯಾಂಗ್‌ಗಳು ಅವರ ಬೆನ್ನು ಬಿದ್ದಿದ್ದಾರಂತೆ. ಏಕೆಂದರೆ ಅವರು “ಪ್ರಿಯ ಬಿಜೆಪಿ ಮತ್ತು ಎಬಿವಿಪಿ ನನಗೆ ಉತ್ತರ ಕೊಡುತ್ತೀರಾ” ಎಂದು ಕೇಳಿದ್ದರು. ಕೇಸರಿ ಟ್ರಾಲ್‌ಗಳ ಸಾಲುಗಳನ್ನು ಕಂಡ ಇವರು ಜಗತ್ತು ಇಷ್ಟೊಂದು ದ್ವೇಷದಿಂದ ತುಂಬಿದೆ ಎಂದು ನನಗೆ ಗೊತ್ತಿರಲಿಲ್ಲ ಎಂದಿದ್ದಾರೆ, ಹತ್ತು ವರ್ಷ ಹಾಡುಗಳ ಮೂಲಕ ನೋವನ್ನು ಅಭಿವ್ಯಕ್ತಿಸುತ್ತಿದ್ದವ ಈ ಪ್ರಶ್ನೆ ಕೇಳುವ ಧೈರ್ಯ ಮಾಡಿದ್ದೇ ತಪ್ಪಾಯಿತೇ ಎಂದು ಅವರು ಕೇಳುತ್ತಿದ್ದಾರೆ.



ಅಂಕಿ ಅಂಶಗಳ ಮಾಯಾಜಾಲ ಸೃಷ್ಟಿಗೆ ಸರ್ಕಾರಿ ಸಂಸ್ಥೆಯ ನಾಚಿಕೆಹೀನ ಬಳಕೆ



ಕೆ.ಎಂ.ನಾಗರಾಜ್

ನರೇಂದ್ರ ಮೋದಿಯವರ ಆಳ್ವಿಕೆಯು 1975ರ ತುರ್ತು ಪರಿಸ್ಥಿತಿಯನ್ನು ಜ್ಞಾಪಿಸಿಕೊಳ್ಳುವಂತೆ ಮಾಡಿದೆ. ಆಗ, ಪ್ರಭುತ್ವದ ಬಲವನ್ನು ತಮ್ಮ ವಿರೋಧಿಗಳನ್ನು ಹತ್ತಿಕ್ಕಲು ಬಳಸಲಾಗಿತ್ತು. ಅದು ತುರ್ತು ಪರಿಸ್ಥಿತಿಯೇ ಆಗಿದ್ದರೂ, ವಿಚಾರ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿಯನ್ನು ಹತ್ತಿಕ್ಕಲು ಇಂದು ನಾವು ಕಾಣುವ ಪುಂಡು ಪೋಕರಿಗಳನ್ನೊಳಗೊಂಡ 'ಜಾಗರಣೆ ಗ್ಯಾಂಗ್'ಗಳ ಬಳಕೆಯಾಗಿರ'ಲಿಲ್ಲ. ಆದರೆ, ಅಂದಿನ ಸರ್ಕಾರವೂ ತುರ್ತು ಪರಿಸ್ಥಿತಿ ಹೇರುವ ಸಲುವಾಗಿ ಅಂಕಿ ಅಂಶಗಳನ್ನು ತಿರುಚಲು ಇದೇ ಸಿಎಸ್ಒ ವನ್ನು ಬಳಸಿಕೊಂಡಿತ್ತು. ಇಂದಿನ ಸರ್ಕಾರವೂ ಅದೇ ಕೆಲಸ ಮಾಡಿದೆ ಎನ್ನುತ್ತಾರೆ

ಪ್ರೊ.ಪ್ರಭಾತ್ ಪಟ್ನಾಯಕ್.

'ನ್ಯೂಸ್‌ಕ್ಲಿಕ್' ವೆಬ್‌ಪತ್ರಿಕೆ ಪ್ರಕಟಿಸಿರುವ ಈ ಕುರಿತ ಅವರ ಲೇಖನದ ಭಾವಾನುವಾದ

ಸಾರ್ವಜನಿಕ ಹಿತ ಸಂಬಂಧಿಸಿ ನ್ಯಾಯ-ನೀತಿ-ತತ್ವಗಳ ಬಗ್ಗೆ ಸ್ವತಂತ್ರ ಭಾರತದಲ್ಲಿ ಅನೇಕ ಚರ್ಚೆಗಳಾಗಿವೆ. ಆದರೆ, ನೋಟು ರದ್ದತಿಯ ನಂತರದ ಚರ್ಚೆಯಲ್ಲಿ ಕಾಣುತ್ತಿರುವಂತಹ 'ತರ್ಕವನ್ನು ತಲೆಕೆಳಗು' ಮಾಡುವ ಸರ್ಕಾರದ ವೈಖರಿ ಹಿಂದೆಂದೂ ಕಾಣ ಬಂದಿರಲಿಲ್ಲ.

ಅರ್ಥವ್ಯವಸ್ಥೆಯ ಮೇಲೆ ಕಪ್ಪು ಹಣದ ಪ್ರಭಾವ ಕೊನೆಗೊಳಿಸುವ ಉದ್ದೇಶದಿಂದ ಸರ್ಕಾರ ಕೈಗೊಂಡ ನೋಟು ರದ್ದತಿಯ ಕ್ರಮ ವಿಫಲವಾಗಿದೆಯೆಂದು ಟೀಕಾಕಾರರು, ಸರ್ಕಾರದ ಸಂಸ್ಥೆಗಳೇ ಒದಗಿಸಿದ ಅಂಕಿ ಅಂಶಗಳನ್ನು ಆಧರಿಸಿ, ಬೊಟ್ಟುವಾಡಿ ತೋರಿಸಿದರು. ಆದರೆ, ನೋಟು ರದ್ದತಿಯು ಅಸಾಧಾರಣ ಧೈರ್ಯದಿಂದ ಕೂಡಿದ ಒಂದು ಕ್ರಮವೆಂದು ಸರ್ಕಾರ ಸಮರ್ಥಿಸಿಕೊಂಡಿತು.

ಅಂದರೆ ಯಾವುದೇ ಕ್ರಮ ಅದು ಎಷ್ಟೇ ಅತಾರ್ಕಿಕವಾಗಿರಲಿ, ಅದರಲಲಿ 'ಕೆಚ್ಚು' ಇದ್ದ-ರೆ, ಅಂದರೆ "ಆಘಾತ ಮತ್ತು ಭಯ ಭಕ್ತಿ" ಉಂಟುಮಾಡುವಂತಿದ್ದರೆ ಅದು ಸಮರ್ಥನೀಯ ಎಂದು ತರ್ಕಿಸಿದಂತಾಗುತ್ತದೆ. ಇದು 'ತರ್ಕವನ್ನು ತಲೆಕೆಳಗು' ಮಾಡುವ ಸಂಗತಿಯಲ್ಲದೇ ಬೇರೇನೂ ಅಲ್ಲ.

ಇತ್ತೀಚೆಗೆ ಪ್ರಕಟಿಸಿದ ಜಿಡಿಪಿಯ ಅಂದಾಜು ಅಂಕಿ ಅಂಶಗಳ ಬಗ್ಗೆ ನಡೆಯುತ್ತಿರುವ ಚರ್ಚೆಗಳಲ್ಲಿಯೂನೀ 'ತರ್ಕವನ್ನು ತಲೆಕೆಳಗು' ಮಾಡುವ ಪರಿಸ್ಥಿತಿ ಮುಂದುವರೆಯುತ್ತಿದೆ. ಮನೆಯ ಹತ್ತಿರದ ಒಂದು ಕಿರಾಣಿ ಅಂಗಡಿಗೆ ಹೋಗಿ ಬಂದವರಿಗೂ, ನೋಟು ರದ್ದತಿಯಿಂದಾಗಿ ಅಂಗಡಿ ವ್ಯಾಪಾರ ಕಡಿಮೆಯಾಗಿರುವುದು ಗೊತ್ತಾಗುತ್ತದೆ.

ನಾನು ದಿನಸಿ ಕೊಳ್ಳುವ ಕಿರಾಣಿ ಅಂಗಡಿಯ ಮಾಲೀಕ, ನೋಟು ರದ್ದತಿಯ ತಕ್ಷಣದ ದಿನಗಳಲ್ಲಿ ವ್ಯಾಪಾರ ಶೇ.50-60ರಷ್ಟು ಕಡಿಮೆಯಾಗಿತ್ತೆಂದೂ ಮತ್ತು ನೋಟು ರದ್ದತಿಯ ಮೊದಲಿನ ಪರಿಸ್ಥಿತಿಗೆ ಹೋಲಿಸಿದರೆ ಈಗಲೂ ವ್ಯಾಪಾರ ಶೇ.20ರಷ್ಟು ಕಡಿಮೆಯೇ ಎಂದು ಹೇಳುತ್ತಾನೆ. ಆತ ಹೇಳಿದ ಮಾತನ್ನೇ ದೇಶದ ಎಲ್ಲ ಕಿರಾಣಿ ವ್ಯಾಪಾರಸ್ತರೂ ಸಾಮಾನ್ಯವಾಗಿ ಹೇಳುತ್ತಾರೆ. ಅವರೊಂದಿಗೆ ಅಭಿಪ್ರಾಯ ಹಂಚಿಕೊಂಡಿರುವ ಪತ್ರಕರ್ತರು ಮತ್ತು ಜನ ಸಂಪರ್ಕದಲ್ಲಿರುವ ಹೆಚ್ಚಿನ ಮಂದಿಯ ಅಭಿಪ್ರಾಯವೂ ಇದೇ.

ನೋಟು ರದ್ದತಿಯಿಂದಾಗಿ ಅರ್ಥವ್ಯವಸ್ಥೆಯಲ್ಲಿ ಹಿಂಜರಿತ ಉಂಟಾದದ್ದು ನಿರ್ವಿವಾದಿತ ಮತ್ತು ದೃಢಪಟ್ಟಿರುವ ವಿಷಯ. ಹಾಗಿದ್ದರೂ, ಕೇಂದ್ರ ಸರ್ಕಾರದ ಅಂಕಿ ಅಂಶಗಳ ಸಂಸ್ಥೆ ಪ್ರಕಟಿಸಿರುವ ಜಿಡಿಪಿಯ ಅಂದಾಜು ಅಂಕಿ ಅಂಶಗಳು ಕೊಡುವ ಚಿತ್ರಣ ಬೇರೆಯೇ. ಸರ್ಕಾರ, ಈ ಅಂಕಿ ಅಂಶಗಳನ್ನು ಆಧರಿಸಿ, ಆರ್ಥಿಕ ಹಿಂಜರಿತ ಉಂಟಾಗಿಲ್ಲವೆಂದು ಸಾಧಿಸುವ ಬದಲು, ಜಿಡಿಪಿಯ ಅಂದಾಜಿನ ಈ ಅಂಕಿ ಅಂಶಗಳು ಎಲ್ಲಿ ತಪ್ಪಿವೆ, ಅವು ಪರಿಸ್ಥಿತಿಯನ್ನು ಏಕೆ ಸರಿಯಾಗಿ ಬಿಂಬಿಸುತ್ತಿಲ್ಲ ಎಂಬುದರ ಕಾರಣಗಳನ್ನು ಹುಡುಕುವ ಕೆಲಸ ಮಾಡಬೇಕಿತ್ತು.

ಸರ್ಕಾರ ಆ ಕೆಲಸ ಮಾಡುತ್ತಿಲ್ಲ. ಅದಕ್ಕೆ ವ್ಯತಿರಿಕ್ತವಾಗಿ, ಒಟ್ಟಾರೆ ಬೇಡಿಕೆಯಲ್ಲಿ ಕುಸಿತವಾಗಿಲ್ಲ ಎಂಬ ಸಮರ್ಥನೆಯ ಜೊತೆಗೆ ಟೀಕಾಕಾರರನ್ನೇ ಅಣಕಿಸುತ್ತಿದೆ. ಮೇರು ವ್ಯಕ್ತಿತ್ವದ ಪ್ರೊ.ಅಮಾರ್ತ್ಯ ಸೇನ್ ಅವರನ್ನೂ ಅಪಹಾಸ್ಯಮಾಡುವ ಕೀಳು ಮಟ್ಟಕ್ಕೆ ಪ್ರಧಾನ ಮಂತ್ರಿಯವರೇ ಇಳಿದಿದ್ದಾರೆ. ವಿಚಾರಗಳು ತಲೆಕೆಳಗಾದ ಪರಿಸ್ಥಿತಿ ಅನ್ನುವುದು ಇದನ್ನೇ. "ನಾನು ಬಟ್ಟೆ ತೊಟ್ಟೇ ಇಲ್ಲ ಎಂದು ಹೇಳುವ ಇವರೆಲ್ಲಾ ಎಂತಹ ಮೂರ್ಖರು. ನಾನು ಬಟ್ಟೆ ತೊಟ್ಟಿದ್ದೇನೆ ಎಂದು ನನ್ನ ವಂಧಿಮಾಗದರೆಲ್ಲರೂ ಹೇಳಿರುವರು" ಎಂದು ಬೆತ್ತಲೆಯಾಗಿ ಮೆರವಣಿಗೆ ಹೊರಟಿದ್ದ ಚಕ್ರವರ್ತಿ ಹೇಳಿದ ಮಾತುಗಳ ರೀತಿಯಲ್ಲಿಯೇ ಇವೆ ಇವರ ಮಾತುಗಳು.

ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಬಹಳ ಕಾಲ ಬೋಧನೆ ಮಾಡಿದ್ದ ಬ್ರಿಟನ್ನಿನ ಪ್ರಖ್ಯಾತ ಸಂಖ್ಯಾಶಾಸ್ತ್ರಜ್ಞ ಆರ್ಥರ್ ಬೌಲ್ ಹೇಳುತ್ತಿದ್ದರು: ಸಾಮಾಜಿಕ ಜೀವನದ ಕೆಲವು ಮಹತ್ವದ ಸಂಗತಿಗಳನ್ನು ನಿಖರವಾಗಿ ಅಳತೆ ಮಾಡುವುದು ಸಾಧ್ಯವಿಲ್ಲ. ಆದರೆ, ಅವುಗಳನ್ನು ಚನ್ನಾಗಿ ಗಮನಿಸಬಹುದು". ನೋಟು ರದ್ದತಿಯಿಂದಾದ ತೊಂದರೆಗಳನ್ನು ನಾವು ಕಣ್ಣಾರೆ ಕಂಡಿರುವೆವು. ಈ ತೊಂದರೆಗಳ ಬಗ್ಗೆ ಅಧಿಕಾರದಲ್ಲಿರುವವರ ಮೂಗಿನ ನೇರಕ್ಕೆ ಅಳೆದದ್ದೇ ಅಳತೆ. ಅವರು ಹೇಳಿದ್ದೇ ವೇದವಾಕ್ಯ. ನಾವು ಕಣ್ಣಾರೆ ಕಂಡದ್ದನ್ನೇ ಮರೆತು, ಅವರ ಮಾತುಗಳನ್ನು ನಂಬುವಂತೆ ನಮಗೆ ಹೇಳಲಾಗುತ್ತಿದೆ, ಇಂದಿನ ಭಾರತದಲ್ಲಿ. ತರ್ಕ ತಲೆಕೆಳಗಾಗಿರುವ ಪರಿಸ್ಥಿತಿ ಅನ್ನುವುದು ಇದನ್ನೇ.

ಕೇಂದ್ರೀಯ ಸಾಂಖ್ಯಿಕ ಸಂಸ್ಥೆಯ(ಸಿಎಸ್ಒ) ಜಿಡಿಪಿಯ ಅಂದಾಜು ಅಂಕಿ ಅಂಶಗಳು ಒಂದು ಪ್ರಶ್ನೆ ಎತ್ತುವಂತೆ ಮಾಡಿವೆ. ನೋಟು ರದ್ದತಿಯಿಂದಾಗಿ ಅರ್ಥವ್ಯವಸ್ಥೆಯಲ್ಲಿ ಹಿಂಜರಿತ ಉಂಟಾಗಿತ್ತೇ ಅಥವಾ ಇಲ್ಲವೇ ಎಂಬುದು ಪ್ರಶ್ನೆಯಲ್ಲ. (ಹಿಂಜರಿತ ಉಂಟಾದದ್ದು ನಿರ್ವಿವಾದಿತ ಮತ್ತು ದೃಢಪಟ್ಟಿರುವ ವಿಷಯ). ಈ ಅಂಶವನ್ನು, ಈ ಸಂಸ್ಥೆ ಮಾಡಿರುವ ಜಿಡಿಪಿಯ ಅಂದಾಜಿನಲ್ಲಿ ಪರಿಗಣಿಸಿಲ್ಲ ಏಕೆ? ಎಂಬುದೇ ಪ್ರಶ್ನೆ. ಅದರ ಬಗ್ಗೆ ಕೆಲವು ಅರ್ಥಶಾಸ್ತ್ರಜ್ಞರು ಬೆಳಕು ಚೆಲ್ಲಿದ್ದಾರೆ – ಸರ್ಕಾರದ ಸೇವೆಯಲ್ಲಿ ಹಿಂದೆ ಇದ್ದವರೂ, ಈಗಲೂ ಇರುವ ಪರಿಮಾಣಾತ್ಮಕ ಅರ್ಥಶಾಸ್ತ್ರ ತಜ್ಞರು. ಅವರ ಬರವಣಿಗೆಗಳಲ್ಲಿ ಗುರುತಿಸಿದ ಹಲವು ಕಾರಣಗಳಲ್ಲಿ ಮೂರನ್ನು ಹೆಕ್ಕಿ ತೆಗೆಯಬಹುದು.

ಮೊದಲನೆಯ ಕಾರಣ: 2015-16ರ ಮೂರನೆ ತ್ರೈಮಾಸಿಕದ ಅಂಕಿ ಅಂಶಗಳಲ್ಲಿ ಪರಿಷ್ಕರಣೆಯ ನಂತರ ಆಗಿರುವ ಇಳಿಕೆ(ಯಾವುದೇ ಅವಧಿಯ ಜಿಡಿಪಿ ಬೆಳವಣಿಗೆಯ ದರ ಲೆಕ್ಕ ಹಾಕುವಾಗ, ಅದರ ಹಿಂದಿನ ವರ್ಷದ ಅದೇ ಅವಧಿಗೆ ಹೋಲಿಸಲಾಗುತ್ತದೆ. ಹಾಗಾಗಿ, ನೋಟು ರದ್ದತಿಯಾದ 2016-17ರ ಮೂರನೆ ತ್ರೈಮಾಸಿಕದ, ಅಂದರೆ ಅಕ್ಟೋಬರ್, ನವೆಂಬರ್, ಡಿಸೆಂಬರ್‌ನ ಜಿಡಿಪಿ ಲೆಕ್ಕ ಹಾಕಲು 2015-16ರ ಮೂರನೆ ತ್ರೈಮಾಸಿಕದ ಅಂಕಿ ಅಂಶಗಳು ಮೂಲವಾಗುತ್ತವೆ.) ಈ ಮೂಲ ತ್ರೈಮಾಸಿಕದ (2015-16ರ ಮೂರನೆ ತ್ರೈಮಾಸಿಕ) ಅಂಕಿ ಅಂಶಗಳು ಪರಿಷ್ಕರಣೆಯ ನಂತರ ಹಿಂದಿನ ಅಂದಾಜಿಗಿಂತ ಕಡಿಮೆಯಾಗಿವೆ. ನೋಟು ರದ್ದತಿಯಾದ 2016-17ರ ಮೂರನೆ ತ್ರೈಮಾಸಿಕದ ಜಿಡಿಪಿಯ ಅಂದಾಜು ಮೌಲ್ಯವನ್ನು 30,27,893 ಕೋಟಿ ರೂಪಾಯಿಗಳೆಂದು ಲೆಕ್ಕ ಹಾಕಲಾಗಿದೆ. ವಿಷಯದ ಕಠಿಣ ಭಾಗ ಇರುವುದು ಇಲ್ಲೇ.

2015-16ರ ಮೂರನೆ ತ್ರೈಮಾಸಿಕದ ಜಿಡಿಪಿಯ ಅಂದಾಜು ಮೌಲ್ಯವನ್ನು ಫೆಬ್ರವರಿ 9, 2016ರಂದು 28,52,339 ಕೋಟಿ ರೂ ಗಳೆಂದೂ, ಮೇ 31, 2016ರಂದು ಇದೇ ಮೌಲ್ಯವನ್ನು 28,51,682 ಕೋಟಿ ರೂ ಗಳೆಂದೂ, ಮತ್ತು ಫೆಬ್ರವರಿ 28, 2017ರಂದು ಅದನ್ನು 28,30,760 ಕೋಟಿ ರೂ ಗಳೆಂದೂ, ಪರಿಷ್ಕರಣೆ ಮಾಡಲಾಗಿದೆ.'

2015-16ರ ಮೂರನೆ ತ್ರೈಮಾಸಿಕದ ಜಿಡಿಪಿಯ ಅಂದಾಜು ಮೌಲ್ಯದ ಆಧಾರದಲ್ಲಿ, ನೋಟು ರದ್ದತಿಯಾದ 2016-17ರ ಮೂರನೆ ತ್ರೈಮಾಸಿಕದ ಜಿಡಿಪಿಯ ಅಂದಾಜು 6.2% ಆಗುತ್ತದೆ. 2015-16ರ ಮೂರನೆ ತ್ರೈಮಾಸಿಕದ ಜಿಡಿಪಿಯ ಅಂದಾಜು ಮೌಲ್ಯವನ್ನು ಮತ್ತೊಮ್ಮೆ ಪರಿಷ್ಕರಿಸಿದಾಗಲೂ ಅದು 6.2% ಆಸುಪಾಸಿನಲ್ಲಿಯೇ ಇತ್ತು. ಆದರೆ, ಅಂದಾಜನ್ನು ಮೂರನೆಯ ಬಾರಿ ಇಳಿಮುಖವಾಗಿ ಪರಿಷ್ಕರಣೆ ಮಾಡಿದ ಫಲವಾಗಿ, ನೋಟು ರದ್ದತಿಯಾದ 2016-17ರ ಮೂರನೆ ತ್ರೈಮಾಸಿಕದ ಜಿಡಿಪಿಯ ಅಂದಾಜು ಬೆಳವಣಿಗೆಯ ದರ ಶೇ.7ಕ್ಕೆ ನೆಗೆಯಿತು.

ಸಿಎಸ್ಒ ಹೀಗೆ ಇಳಿಮುಖ ಪರಿಷ್ಕರಣೆ ಮಾಡಿದ್ದೇಕೆ ಎಂಬುದು ನಿಗೂಢವಾಗಿದೆ. ಆದರೂ, ಸರ್ಕಾರದ ಅಪ್ಪಣೆಯ ಮೇರೆಗೆ ಅಂಕಿ ಅಂಶಗಳನ್ನು ತಿರುಚುರುವುದು ಸ್ಪಷ್ಟವಾಗಿದೆ.

ಎರಡನೆಯ ಕಾರಣ: ಅರ್ಥವ್ಯವಸ್ಥೆಯ ಮೇಲೆ ನೋಟು ರದ್ದತಿಯ ಹೊಡೆತ ಬಿದ್ದದ್ದು ಅಂಕಿ ಅಂಶಗಳ ರೂಪದಲ್ಲಿ ವ್ಯಕ್ತವಾಗದಿರಲು ಒಂದು ಕಾರಣವಿದೆ. ಜಿಡಿಪಿಯ ಅಂದಾಜು ಲೆಕ್ಕ ಹಾಕುವ ಕ್ರಮದಲ್ಲಿ ಈಗ ಬದಲಾವಣೆಯಾಗಿದೆ. ಉತ್ಪಾದನಾ ಘಟಕಗಳಿಂದ ಕಲೆಹಾಕಿದ ದತ್ತಾಂಶದಿಂದ ಮೌಲ್ಯ ವರ್ಧನೆಯ ಅಂಶವನ್ನು ಜಿಡಿಪಿಯಲ್ಲಿ ಸೇರಿಸುವುದರ ಬದಲಾಗಿ, ಅದನ್ನು ಕಂಪೆನಿಗಳ ಬ್ಯಾಲೆನ್ಸ್ ಷೀಟಿನಿಂದಲೇ ನೇರವಾಗಿ ಕಲೆಹಾಕಲಾಗುತ್ತಿದೆ. ಈ ಏರ್ಪಾಡಿನಲ್ಲಿ, ಕಂಪೆನಿಯಾಗಿ ನೋಂದಾವಣೆ ಆಗಿಲ್ಲದವರ (ಅಂದರೆ, ನೋಟು ರದ್ದತಿಯ ಪೆಟ್ಟು ಹೆಚ್ಚು ತಿಂದ ಅನೌಪಚಾರಿಕ ವಲಯದ) ಮೌಲ್ಯ ವರ್ಧನೆಯ ಅಂಶ ಗೌಣವಾಗಿದೆ. ಹಾಗಾಗಿ, ಜಿಡಿಪಿಯ ಅಂದಾಜು ಲೆಕ್ಕ ಹಾಕಲು ಸಿಎಸ್ಒ ಆರಿಸಿಕೊಂಡಿರುವ ವಿಧಾನವು ನೋಟು ರದ್ದತಿಯ ಹೊಡೆತ ಮುಚ್ಚಿಹಾಕಲು ಹೇಳಿ ಮಾಡಿಸಿದಂತಿದೆ.

ಮೂರನೆಯ ಕಾರಣ: ಈ ಕಾರಣ ಕೊಟ್ಟಿರುವವರು ಪ್ರೊಣಾಬ್ ಸೇನ್ (ಕೇಂದ್ರ ಸರ್ಕಾರದ ಪ್ರಧಾನ ಸಂಖ್ಯಾಶಾಸ್ತ್ರಜ್ಞ ಹುದ್ದೆಯಿಂದ ಇತ್ತೀಚೆಗೆ ನಿವೃತ್ತರು). ಅದು ಹೀಗಿದೆ: ಮಾರುಕಟ್ಟೆ ಬೆಲೆಗಳ ಆಧಾರದ ಮೇಲೆ ಮಾಡುತ್ತಿರುವ ಜಿಡಿಪಿಯ ಅಂದಾಜಿನಲ್ಲಿ, ಪರೋಕ್ಷ ತೆರಿಗೆಗಳ ಮೊತ್ತವನ್ನು ಮೌಲ್ಯ ವರ್ಧನೆಯ ಅಂಶದೊಂದಿಗೆ ಸೇರಿಸಲಾಗುತ್ತಿದೆ. ನೋಟು ರದ್ದತಿಯ ತಕ್ಷಣದಲ್ಲಿ ವ್ಯಾಪಾರಸ್ತರು, ತಮ್ಮ ಬಳಿ ಇದ್ದ 1000 ಮತ್ತು 500 ರೂ ನೋಟುಗಳನ್ನು ಮುಂಗಡ ತೆರಿಗೆ ಪಾವತಿ ಮಾಡಲು ಬಳಸಿಕೊಂಡರು. ಹಾಗಾಗಿ, ಎಂದಿಗಿಂತ ಹೆಚ್ಚಿನ ಮಟ್ಟದ ತೆರಿಗೆ ಸಂಗ್ರಹವಾಗಿದೆ ಮತ್ತು ಅದು ಜಿಡಿಪಿಯ ಅಂದಾಜಿನಲ್ಲಿ ಸೇರಿಕೊಂಡಿದೆ. ಸಿಎಸ್ಒ ನೋಟು ರದ್ದತಿಯ ಹೊಡೆತ ಜಿಡಿಪಿಯ ಮೇಲೆ ಆಗಿಲ್ಲ ಎಂದು ಹೇಳಲು ಹೊರಟಿದೆ. ನೋಟು ರದ್ದತಿ ಉಂಟುಮಾಡಿದ ವಿಲಕ್ಷಣ/ವಿಪರೀತದ ಪರಿಣಾಮಗಳು, ಜಿಡಿಪಿ ದರ ಹೆಚ್ಚಳದ ಭಾಗಶ: ಕಾರಣವಾಗಿವೆ.

ಜಿಡಿಪಿ ಬೆಳವಣಿಗೆ ದರ ಹೆಚ್ಚಳದಲ್ಲಿ ಈ ಮೂರೂ ಕಾರಣಗಳು– 2015-16ರ ಮೂರನೆ ತ್ರೈಮಾಸಿಕದ ಜಿಡಿಪಿಯ ಅಂದಾಜು ಮೌಲ್ಯದ ಇಳಿಮುಖ ಪರಿಷ್ಕರಣೆ, ಜಿಡಿಪಿಯ ಅಂದಾಜು ಲೆಕ್ಕ ಹಾಕುವ ಕ್ರಮದಲ್ಲಿ ಬದಲಾವಣೆಯ ಜೊತೆಗೆ ಅನೌಪಚಾರಿಕ ವಲಯದ ಮೌಲ್ಯ ವರ್ಧನೆಯ ಅಂಶವನ್ನು ಪರಿಗಣಿಸದಿರುವುದು ಮತ್ತು ವ್ಯಾಪಾರಸ್ತರು ರದ್ದಾದ 1000 ಮತ್ತು 500 ರೂ ನೋಟು ಬಳಸಿ ಮುಂಗಡ ತೆರಿಗೆ ಪಾವತಿಸಿರುವುದರಿಂದ ಎಂದಿಗಿಂತ ಹೆಚ್ಚಿನ ಮಟ್ಟದ ತೆರಿಗೆ ಸಂಗ್ರಹ – ಒಂದಕ್ಕೊಂದು ಸೇರಿಕೊಂಡಿರುವುದರಿಂದ, ನೋಟು ರದ್ದತಿಯ 2016-17ರ ಮೂರನೆ ತ್ರೈಮಾಸಿಕದ ಜಿಡಿಪಿಯ ಅಂದಾಜು ಬೆಳವಣಿಗೆಯ ದರ ಶೇ.7ಕ್ಕೆ ನೆಗೆದಿದೆ.

2015-16ರ ಮೂರನೆ ತ್ರೈಮಾಸಿಕದ ಜಿಡಿಪಿಯ ಅಂದಾಜು ಮೌಲ್ಯ ಇಳಿಮುಖವಾಗಿ ಪರಿಷ್ಕರಣೆಯಾಗಿರದಿದ್ದರೆ, ಆ ತ್ರೈಮಾಸಿಕದ 7.2% ಬೆಳವಣಿಗೆಗೆ ಹೋಲಿಸಿದರೆ, ಈಗ ಹೇಳುತ್ತಿರುವ ಬೆಳವಣಿಗೆಯ ದರ 7% ಬದಲಾಗಿ 6.2% ಆಗುತ್ತಿತ್ತು. ಅನೌಪಚಾರಿಕ ವಲಯದ ಉತ್ಪಾದನಾ ಮೌಲ್ಯವನ್ನು ಸರಿಯಾಗಿ ಪರಿಗಣಿಸಿದ್ದರೆ, ಬೆಳವಣಿಗೆಯ ದರ 6.2% ಕ್ಕಿಂತಲೂ ಕಡಿಮೆ ಆಗುತ್ತಿತ್ತು. ಎಂದಿಗಿಂತ ಹೆಚ್ಚಿನ ಮಟ್ಟದ ತೆರಿಗೆ ಸಂಗ್ರಹವನ್ನು ಇಚ್ಛಾನುಸಾರವಾಗಿ ಸೇರ್ಪಡೆ ಮಾಡಿರದಿದ್ದರೆ, ಬೆಳವಣಿಗೆಯ ದರ 6.2% ಕ್ಕಿಂತಲೂ ಬಹಳ ಕೆಳಗಿರುತ್ತಿತ್ತು.

ಪರಿಷ್ಕರಣೆಯ ಮುಂಚಿನ ಅಂಕಿ ಅಂಶಗಳ ಆಧಾರದಲ್ಲಿ, 2015-16ರ ಮೂರನೆ ತ್ರೈಮಾಸಿಕದ 7.2% ಬೆಳವಣಿಗೆ ದರಕ್ಕೆ ಹೋಲಿಸಿದರೆ, ನೋಟು ರದ್ದತಿಯಾದ 2016-17ರ ಮೂರನೆ ತ್ರೈಮಾಸಿಕದಲ್ಲಿ ಬೆಳವಣಿಗೆ ಸುಮಾರು 2% ಇಳಿಯುತ್ತದೆ. ನೋಟು ರದ್ದತಿಯ ಟೀಕಾಕಾರರು ಮಾಡಿದ್ದ ಅಂದಾಜೂ ಇದೇ.

ನರೇಂದ್ರ ಮೋದಿಯವರ ಆಳ್ವಿಕೆಯು 1975ರ ತುರ್ತು ಪರಿಸ್ಥಿತಿಯನ್ನು ಜ್ಞಾಪಿಸಿಕೊಳ್ಳುವಂತೆ ಮಾಡಿದೆ. ಆಗ, ಪ್ರಭುತ್ವದ ಬಲವನ್ನು ತಮ್ಮ ವಿರೋಧಿಗಳನ್ನು ಹತ್ತಿಕ್ಕಲು ಬಳಸಲಾಗಿತ್ತು. ಅದು ತುರ್ತು ಪರಿಸ್ಥಿತಿಯೇ ಆಗಿದ್ದರೂ, ವಿಚಾರ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿಯನ್ನು ಹತ್ತಿಕ್ಕಲು ಇಂದು ನಾವು ಕಾಣುವ ಪುಂಡು ಪೋಕರಿಗಳನ್ನೊಳಗೊಂಡ vigilante groups ಬಳಕೆಯಾಗಿರಲಿಲ್ಲ. ಆದರೆ, ಅಂದಿನ ಸರ್ಕಾರವೂ ತುರ್ತು ಪರಿಸ್ಥಿತಿ ಹೇರುವ ಸಲುವಾಗಿ ಅಂಕಿ ಅಂಶಗಳನ್ನು ತಿರುಚಲು ಇದೇ ಸಿಎಸ್ಒ ವನ್ನು ಬಳಸಿಕೊಂಡಿತ್ತು. ಇಂದಿನ ಸರ್ಕಾರವೂ ಅದೇ ಕೆಲಸ ಮಾಡಿದೆ.

ಆ ಕಾಲದಲ್ಲಿ ಪ್ರಚಾರಕ್ಕಾಗಿ ಸರ್ಕಾರದ ಸಂಸ್ಥೆಯೊಂದನ್ನು ಬಳಕೆ ಮಾಡಿಕೊಂಡ ನಾಚಿಕೆಗೇಡಿನ ಪ್ರಸಂಗದಲ್ಲಿ, ಅದೃಷ್ಟವಷಾತ್, ತಿರುಚಿದ್ದ ಅಂಕಿ ಅಂಶಗಳು ಕಣ್ಣಿಗೆ ರಾಚುವಂತಿರಲಿಲ್ಲ. ದುರದೃಷ್ಟವಷಾತ್, ಇಂದಿನ ಸಂಗತಿ ಆ ರೀತಿಯಲ್ಲಿಲ್ಲ.



ವ್ಯಂಗ್ಯಚಿತ್ರ ಕೃಪೆ: ಸತೀಶ್ ಆಚಾರ್ಯ

ತ್ರಿಪುರಾ ಬಜೆಟ್: ಸಂಪನ್ಮೂಲ ಮಿತಿಗಳ ನಡುವೆಯೂ ಪರ್ಯಾಯ ನಿಲುವಿನ ಮಾದರಿ

ಫೆಬ್ರುವರಿ 20ರಂದು ತ್ರಿಪುರಾ ಎಡರಂಗ ಸರಕಾರದ ಹಣಕಾಸು ಮಂತ್ರಿ ಭಾನುಲಾಲ್ ಸಾಹ ರಾಜ್ಯದ ಈ ವರ್ಷದ ಬಜೆಟನ್ನು ಮಂಡಿಸಿದರು. ಇತರ ಈಶಾನ್ಯ ಭಾರತದ ರಾಜ್ಯಗಳಂತೆ ತ್ರಿಪುರ ಕೂಡ ಮೂಲರಚನೆಗಳ ಕೊರತೆಯನ್ನು ಅನುಭವಿಸುತ್ತಿರುವ ರಾಜ್ಯ, ಸ್ವಂತದ್ದೆಂಬ ಸಂಪನ್ಮೂಲ ಬಹಳ ಕಡಿಮೆ. ಆದ್ದರಿಂದಾಗಿ ಈ ರಾಜ್ಯಗಳನ್ನು 'ವಿಶೇಷ ಬಗೆಯ ರಾಜ್ಯ' ಎಂದು ಪರಿಗಣಿಸಿ ಅವಕ್ಕೆ ವಿಶೇಷ ನೆರವು ನೀಡುವ ಪದ್ಧತಿಯನ್ನು ಈಗ ಮೋದಿ ಸರಕಾರ ನಿಲ್ಲಿಸಿದೆ.

ಇದೂ ಸಾಲದೆಂಬಂತೆ 14ನೇ ಹಣಕಾಸು ಆಯೋಗದ ಶಿಫಾರಸು ಪ್ರಕಾರ ರಾಜ್ಯಕ್ಕೆ ಬರಬೇಕಾದ ಸಂಪನ್ಮೂಲದಲ್ಲಿ ಕಳೆದ ಮೂರು ವರ್ಷಗಳಲ್ಲಿ ಒಟ್ಟು 5108ಕೋಟಿರೂ. ಕೇಂದ್ರದಿಂದ ಬಾಕಿಯಿದೆ. ಈ ವರ್ಷವೂ ರಾಜ್ಯಕ್ಕೆ ಬರಬೇಕಾದ 6552 ಕೋಟಿ ರೂ.ಗಳಲ್ಲಿ 5189 ಕೋಟಿರೂ. ಮಾತ್ರ ಬರಬಹುದೆಂಬ ನಿರೀಕ್ಷೆಯಿದೆ.


'ಸಹಕಾರಿ ಒಕ್ಕೂಟ' ಎಂದು ಬಾಯಿಯಲ್ಲಿ ಹೇಳುತ್ತಿರುವ ಕೇಂದ್ರ ಸರಕಾರದ ಈ ಅಸಹಕಾರದ ನಡುವೆ ಎಡರಂಗ ಸರಕಾರದ ಹಣಕಾಸು ಮಂತ್ರಿಗಳು ರಾಜ್ಯದಲ್ಲಿ ಆರಂಭವಾಗಿರುವ ಅಭಿವೃದ್ಧಿ ಪ್ರಕ್ರಿಯೆಯನ್ನು ಮುಂದುವರೆಸುತ್ತಲೇ ಶಿಕ್ಷಣ, ಆರೋಗ್ಯ, ಗ್ರಾಮೀಣ ಅಭಿವೃದ್ಧಿ ಮತ್ತು ಸಾಮಾಜಿಕ ಕಲ್ಯಾಣಕ್ಕೆ ಆದ್ಯತೆ ನೀಡಿದೆ ಎಂದು ಅಲ್ಲಿನ ಹಣಕಾಸು ಮಂತ್ರಿಗಳು ಹೇಳಿದ್ದಾರೆ.

ಬಜೆಟ್ ಶಿಕ್ಷಣಕ್ಕೆ 21.23ಶೇ., ಸಾರ್ವಜನಿಕ ಕಾಮಗಾರಿಗಳಿಗೆ 11.5ಶೇ., ಕೃಷಿಗೆ 9.96ಶೇ., ಕೃಷಿಗೆ 5.37ಶೇ. ಮತ್ತು ಆರೋಗ್ಯಕ್ಕೆ 4.85ಶೇ. ನೀಡಿದೆ. ಕೆಲವು ಮುಖ್ಯಾಂಶಗಳು:

* ಎಣ್ಣೆ ಮತ್ತು ಬೇಳೆಕಾಳುಗಳಿಗೆ ಸಬ್ಸಿಡಿಯನ್ನು 50ರೂ.ನಿಂದ 65ರೂ.ಗೆ ಹೆಚ್ಚಿಸಿ ರೇಶನ್ ಕಾರ್ಡುದಾರರ ನೆರವಿಗೆ ಬಂದಿದೆ.
* ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳಿಗೆ ವಸತಿ ಸ್ಟೈಪಂಡ್‌ನ್ನು ದಿನಕ್ಕೆ 46ರಿಂದ 55ರೂ.ಗೆ ಏರಿಸಲಾಗಿದೆ.
* ಎಲ್ಲ ಪೆನ್ಷನ್ ಸ್ಕೀಮುಗಳಲ್ಲಿ ಮಾಸಿಕ ಮೊತ್ತದಲ್ಲಿ 100ರೂ. ಹೆಚ್ಚಳ ಮಾಡಲಾಗಿದೆ. ಇದು 3.25 ಲಕ್ಷ ಪೆನ್ಶನ್‌ದಾರರಿಗೆ ಪ್ರಯೋಜನ ಕೊಡಲಿದೆ.
* ಕೌಶಲ್ಯ ಅಭಿವೃದ್ಧಿ ತರಬೇತಿ ಪಡೆಯುವವರಿಗೆ ದಿನಕ್ಕೆ 150 ರೂ. ನೀಡಲಾಗುವುದು.
* ರಾಜ್ಯ ಸರಕಾರಿ ನೌಕರರ ಡೈವೋರ್ಸ್ ಪಡೆದ ಮಗಳಿಗೂ ಕುಟುಂಬ ಪೆನಶನ್ ಸೌಲಭ್ಯವನ್ನು ವಿಸ್ತರಿಸಲಾಗುವುದು.
* 20,000 ವಿದ್ಯಾರ್ಥಿನಿಯರಿಗೆ ಸೈಕಲುಗಳನ್ನು ಒದಗಿಸುವ ಮತ್ತು ಉದಯ್‌ಪುರ್ ಮತ್ತು ಪನಿಸಾಗರ್‌ನಲ್ಲಿ ಎರಡು ಡಿಗ್ರಿ ಕಾಲೇಜುಗಳನ್ನು ತೆರೆಯುವ ಪ್ರಸ್ತಾವ ಈ ಬಜೆಟಿನಲ್ಲಿದೆ.

ಈ ಬಜೆಟ್ ಬಗ್ಗೆ ಟಿಪ್ಪಣಿ ಮಾಡುತ್ತ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ಅಭಿವೃದ್ಧಿ ಪ್ರಾಜೆಕ್ಟ್‌ಗಳನ್ನು ಮುಂದೊಯ್ಯುವ ಮತ್ತು ಬಡ, ದಲಿತ, ಶ್ರಮಜೀವಿ ಜನಸಮೂಹಗಳ ಕಲ್ಯಾಣಕ್ಕಾಗಿ ಶ್ರಮಿಸುವ ಉತ್ತಮ ಬಜೆಟನ್ನು ಕೊಡಲಾಗಿದೆ, ಇನ್ನಷ್ಟು ಅಭಿವೃದ್ಧಿ ಪ್ರಾಜೆಕ್ಟ್‌ಗಳೊಂದಿಗೆ ಇನ್ನೂ ದೊಡ್ಡ ಬಜೆಟ್ ಮಂಡಿಸಲು ಸಾಧ್ಯವಾಗಿದ್ದರೆ ನಮಗೆ ತೃಪ್ತಿಯಾಗುತ್ತಿತ್ತು,ಆದರೆ ಇದಕ್ಕೆ ಸಂಪನ್ಮೂಲಗಳ ಮಿತಿ ನಮ್ಮ ಮುಂದಿರುವ ಪ್ರಮುಖ ಅಡ್ಡಿ ಎಂದು ಹೇಳಿದ್ದಾರೆ.

ಕೇರಳ ಬಜೆಟ್:ಮೂಲರಚನೆಗಳಲ್ಲಿ ಸಮಗ್ರ ಬದಲಾವಣೆಯ ನೀಲನಕ್ಷೆಯೊಂದಿಗೆ ಸಮಗ್ರ ಜನಕಲ್ಯಾಣ



ಕೇರಳ ಎಡ ಪ್ರಜಾಪ್ರಭುತ್ವವಾದಿ ರಂಗ(ಎಲ್‌ಡಿಎಫ್) ಸರಕಾರದ ಹಣಕಾಸು ಮಂತ್ರಿ ಡಾ. ಥಾಮಸ್ ಐಸಾಕ್ ಮಾರ್ಚ್ 6ರಂದು ಕೇರಳ ರಾಜ್ಯ ಬಜೆಟನ್ನು ಮಂಡಿಸಿದರು. ಕೇಂದ್ರ ಸರಕಾರದ ನವ–ಉದಾರವಾದಿ ಆರ್ಥಿಕ ಧೋರಣೆಗಳು ಮತ್ತು ಅದರ ಭಾಗವಾಗಿ ಈ ಬಾರಿ ನೋಟುರದ್ದತಿ ಉಂಟು ಮಾಡಿರುವ ಗಂಭೀರ ಪರಿಸ್ಥಿತಿಯಲ್ಲೂ ರಾಜ್ಯ ಆರ್ಥಿಕವನ್ನು ರಕ್ಷಿಸುತ್ತಲೇ ಜನಗಳಿಗೆ ಗರಿಷ್ಠ ಪರಿಹಾರ ಒದಗಿಸುವ ಬಜೆಟನ್ನು ಮಂಡಿಸಿರುವುದಾಗಿ ಎಲ್‌ಡಿಎಫ್ ಹೇಳಿದೆ.

ಇದು ಹತ್ತು ತಿಂಗಳ ಹಿಂದೆ ಅಧಿಕಾರ ವಹಿಸಿಕೊಂಡ ಎಲ್‌ಡಿಎಫ್ ಸರಕಾರದ ಎರಡನೇ ಬಜೆಟ್. ಮೂಲರಚನೆಯಲ್ಲಿ ಸಮಗ್ರ ಬದಲಾವಣೆಯ ಒಂದು ನೀಲನಕ್ಷೆಯನ್ನು ಇದು ರೂಪಿಸಿದೆ. ಜತೆ–ಗೇ ಸಾಮಾಜಿಕ ಭದ್ರತೆ, ಸಾರ್ವಜನಿಕ ಶಿಕ್ಷಣ, ಕೃಷಿ, ನೀರು ಸಂರಕ್ಷಣಾ ಕ್ರಮಗಳು ಮತ್ತು ಮಹಿಳೆಯರ ಮುಖಂಡತ್ವದ ಪ್ರಾಜೆಕ್ಟುಗಳ ಮೂಲಕ ಸಮಗ್ರ ಜನಕಲ್ಯಾಣದ ಪ್ರಯತ್ನಗಳನ್ನೂ ಇದರಲ್ಲಿ ಮಾಡಲಾಗಿದೆ.

ಮೂಲರಚನೆಯ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು 25000 ಕೋಟಿ ರೂ.ಗಳ ಮಹಾ ಕಾರ್ಯಕ್ರಮವನ್ನು ಪ್ರಕಟಿಸಿದೆ.

2020ರ ವೇಳೆಗೆ ಇನ್ಫೊಪಾರ್ಕ್‌ಗಳ ಮೂಲಕ ಇಲಕ್ಷ ಉದ್ಯೋಗಾವಕಾಶಗಳ ನಿರ್ಮಾಣವಾಗಲಿದೆ ಎಂದು ಬಜೆಟ್ ಹೇಳಿದೆ.

ಒಂದು ಲಕ್ಷ ಮಂದಿ ಕಡಿಮೆ ವೆಚ್ಚದ ವಸತಿ ಯೋಜನೆಯ ಫಲ ಪಡೆಯಲಿದ್ದಾರೆ.

ಸಾರ್ವಜನಿಕ ಶಿಕ್ಷಣ ರಂಗದಲ್ಲಿ ಬಹುಮುಖ್ಯ ಕ್ರಮಗಳನ್ನು ರೂಪಿಸಲಾಗಿದೆ. 2500 ಹೊಸ ಶಿಕ್ಷಕರ ನೇಮಕಾತಿ, 45000 ಹೈಟೆಕ್ ಕ್ಲಾಸ್‌ರೂಂಗಳು, 1000ಕಕ್ಕೂ ಹೆಚ್ಚು ವಿದ್ಯಾರ್ಥಿಗಳಿರುವ ಶಾಲೆಗಳ ಅಭಿವೃದ್ಧಿಗೆ ವಿಶೇಷ ಕ್ರಮ ಇವುಗಳಲ್ಲಿ ಸೇರಿದೆ.

ಆರೋಗ್ಯ ಕ್ಷೇತ್ರದಲ್ಲಿ, ಜೀವನಶೈಲಿ ಕಾಯಿಲೆಗಳಲ್ಲಿ ಮುಕ್ತ ಶುಶ್ರೂಷೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ 2000 ಕೋಟಿ ರೂ., ಅಲ್ಲಿ ಪುಕ್ಕಟೆಯಾಗಿ ಡಯಬೆಟಿಸ್ ಮತ್ತು ಕೊಲೆಸ್ಟ್ರೊಲ್ ಔಷಧಿಗಳ ಪೂರೈಕೆ ಮಾಡಲಾಗುವುದು. 5000ಕ್ಕೂ ಹೆಚ್ಚು ವೈದ್ಯಕೀಯ ಹುದ್ದೆಗಳನ್ನು ಕಲ್ಪಿಸಲಾಗುವುದು, ಇದರಲ್ಲಿ ಡಾಕ್ಟರುಗಳ ಹುದ್ದೆಗಳೂ ಸೇರಿವೆ.

20 ಸಾವಿರ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಗೆ ಪುಕ್ಕಟೆ ಇಂಟರ್‌ನೆಟ್ ಸೌಲಭ್ಯವನ್ನು ಒದಗಿಸುವ ಯೋಜನೆಯನ್ನು ಬಜೆಟ್ ಪ್ರಕಟಿಸಿದೆ.

ಲಿಂಗ ಬಜೆಟಿಂಗ್ ಎಲ್‌ಡಿಎಫ್ ಸರಕಾರದ ಈ ಎರಡನೇ ಬಜೆಟಿನ ಒಂದು ಮುಖ್ಯ ಅಂಶ. 64 ಎಲ್ಲವೂ ಮಹಿಳೆಗಾಗಿರುವ ಯೋಜನೆಗಳಿಗೆ 1060 ಕೋಟಿ ರೂ., ಮಹಿಳೆಯರು ಫಲಾನುಭವಿಗಳಾಗಿರುವ 104 ಪ್ರಾಜೆಕ್ಟ್‌ಗಳಿಗೆ 13,400 ಕೋಟಿ ರೂ. ಮತ್ತು ಕುಟುಂಬಶ್ರೀ ಯೋಜನೆಗೆ 161 ಕೋಟಿ ರೂ. ಈ ಬಜೆಟ್‌ನ ವಿಶೇಷತೆ.

ಎಲ್ಲ ಸಾಮಾಜಿಕ ಭದ್ರತಾ ಪೆನ್ಶನ್‌ಗಳ ಮೊತ್ತವನ್ನು 1100ರೂ.ಗೆ ಏರಿಸಲಾಗಿದೆ ಮತ್ತು ಪ್ರಾಥಮಿಕ–ಪೂರ್ವ ಶಿಕ್ಷಕಿಯರು ಮತ್ತು ಆಶಾ ಕಾರ್ಯಕರ್ತೆಯರಿಗೆ 500 ರೂ.ಗಳ ಹೆಚ್ಚುವರಿ ವೇತನವನ್ನು ಪ್ರಕಟಿಸಲಾಗಿದೆ.

ಈಗ ಕೇರಳ ಮುಖ್ಯಮಂತ್ರಿಗಳ ಭೇಟಿಗೆ ಹೈದರಾಬಾದ್ ಬಿಜೆಪಿ ಶಾಸಕನ ಬೆದರಿಕೆ : ಮುಖ್ಯಮಂತ್ರಿಗಳು ಬಂದೇ ಬರುತ್ತಾರೆ–ಸಿಪಿಐ(ಎಂ) ಪ್ರತ್ಯುತ್ತರ



ಮಂಗಳೂರಿಗೆ ಕೇರಳ ಮುಖ್ಯಮಂತ್ರಿಗಳ ಭೇಟಿಯನ್ನು ತಡೆಯುವ ಆರೆಸ್ಸೆಸ್ ಬೆದರಿಕೆ ಶೋಚನೀಯವಾಗಿ ಠುಸ್ಸಾಗಿರುವುದು ಸಂಘ ಪರಿವಾರಕ್ಕೆ ನುಂಗಲಾರದ ತುತ್ತಾಗಿರುವಂತೆ ಕಾಣುತ್ತದೆ. ಈಗ ಹೈದರಾಬಾದಿನ ಒಬ್ಬ ಬಿಜೆಪಿ ಎಂಎಲ್‌ಎ ಅಂತಹ ಇನ್ನೊಂದು ಬೆದರಿಕೆ ಹಾಕಿದ್ದಾರೆ.

ಕಳೆದ ಅಕ್ಟೋಬರ್ 18ರಂದು ತೆಲಂಗಾಣದ ರಂಗಾ–ರೆಡ್ಡಿ ಜಿಲ್ಲೆಯ ಇಬ್ರಾಹಿಂ ಪಟ್ಟಣದಿಂದ ಆರಂಭವಾದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ತಮ್ಮಿನೇನಿಯವರ ನೇತೃತ್ವದ 'ಮಹಾಜನ ಪಾದಯಾತ್ರೆ' ಐದು ತಿಂಗಳಿಂದ ತೆಲಂಗಾಣದ ಉದ್ದಗಲದಲ್ಲೂ ಸಂಚರಿಸಿದೆ. ಸಾಮಾಜಿಕ ನ್ಯಾಯ ಪಡೆಯುವುದು ಮತ್ತು ರಾಜ್ಯದ ಸಮಗ್ರ ಅಭಿವೃದ್ಧಿಯ ಅಜೆಂಡಾ ಹೊಂದಿರುವ ಈ ಪಾದಯಾತ್ರೆ ಮಾರ್ಚ್ 19ರಂದು ಹೈದರಾಬಾದಿನಲ್ಲಿ ಸಮಾಪನಗೊಳ್ಳಲಿದೆ.

ಆ ಸಂದರ್ಭದಲ್ಲಿ ಸಿಪಿಐ(ಎಂ) ಒಂದು ಸಾರ್ವಜನಿಕ ಸಮಾರಂಭವನ್ನು ಯೋಜಿಸಿದ್ದು ಅದರಲ್ಲಿ ಕೇರಳದ ಮುಖ್ಯಮಂತ್ರಿ ಮತ್ತು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಪಿಣರಾಯಿ ವಿಜಯನ್ ಭಾಗವಹಿಸಲಿದ್ದಾರೆ.

ಹೈದರಾಬಾದಿನ ಘೋಶಾಮಹಲ್ ಕ್ಷೇತ್ರದ ಬಿಜೆಪಿ ಶಾಸಕ ರಾಜ ಸಿಂಗ್ "ವಿಜಯನ್ ಭಾಗವಹಿಸುವುದಾದರೆ ಈ ಸಮಾರಂಭ ಹೇಗೆ ನಡೆಯುತ್ತದೆ ಎಂದು ನೋಡಿಯೇ ಬಿಡುತ್ತೇನೆ" ಎಂದು ಹೂಂಕರಿಸಿರುವುದಾಗಿ ವರದಿಯಾಗಿದೆ. ಈ ಸಮಾರಂಭಕ್ಕೆ ಅನುಮತಿ ಕೊಡಬಾರದು ಎಂದು ತೆಲಂಗಾಣ ಸರಕಾರವನ್ನು ಮತ್ತು ಪೋಲೀಸ್ ವಿಭಾಗವನ್ನು ಆತ ವಿನಂತಿಸಿಕೊಂಡಿದ್ದಾನಂತೆ.

ಬಿಜೆಪಿ–ಆರೆಸ್ಸೆಸ್‌ಗೆ ಇಂತಹ ಬೆದರಿಕೆಗಳನ್ನು ಹಾಕುವುದು ಹವ್ಯಾಸವಾಗಿ ಬಿಟ್ಟಿದೆ, ಇಂತಹ ಬೆದರಿಕೆಗಳಿಗೆ ಸಿಪಿಐ(ಎಂ) ಸೊಪ್ಪು ಹಾಕುವುದಿಲ್ಲ, ಈ ಸಭೆ ನಡೆದೇ ನಡೆಯುತ್ತದೆ, ಪೋಲೀಸ್ ಪರವಾನಗಿ ಪಡೆದಿದ್ದು ಇದನ್ನು ಪ್ರಜಾಸತ್ತಾತ್ಮಕವಾಗಿ ನಡೆಸುತ್ತೇವೆ ಎಂದು ರಾಜ್ಯದ ಹಿರಿಯ ಸಿಪಿಐ(ಎಂ) ಮುಖಂಡರಾದ ಬಿ.ವಿ.ರಾಘವುಲು ಈ ಬೆದರಿಕೆಗೆ ಪ್ರತ್ಯುತ್ತರ ನೀಡಿದ್ದಾರೆ. ಪ್ರಜಾಪ್ರಭುತ್ವವಾದಿ ಶಕ್ತಿಗಳು ಇಂತಹ ಬೆದರಿಕೆಗಳನ್ನು ಖಂಡಿಸಬೇಕು ಎಂದು ಅವರು ಹೇಳಿದ್ದಾರೆ.

ಗುಜರಾತಿನ ಉನಾದಲ್ಲಿ ಗೋವಧೆ ನಡೆಸಿದರೆಂದು ದಲಿತರನ್ನು ಅಮಾನುಷವಾಗಿ ಥಳಿಸಿದ ಘಟನೆಯನ್ನು ಬಹಿರಂಗವಾಗಿ ಬೆಂಬಲಿಸಿದ ಶಾಸಕನೀತ ಎಂಬುದನ್ನು ಇಲ್ಲಿ ನೆನಪಿಸಿ ಕೊಳ್ಳಬಹುದು.

ಕೇರಳದ ಸರ್ವಪಕ್ಷ ನಿಯೋಗವನ್ನು ಭೇಟಿ ಮಾಡಲು ಪ್ರಧಾನಿಗಳ ನಕಾರ

ಕೇರಳದ ಸಾರ್ವಜನಿಕ ವಿತರಣಾ ವ್ಯವಸ್ಥೆಗೆ ಅಕ್ಕಿ ಕೋಟಾದಲ್ಲಿ ಕಡಿತ, ಬರ ಪರಿಸ್ಥಿತಿಯನ್ನು ಎದುರಿಸಲು ಹಣಕಾಸು ನೆರವು ಇತ್ಯಾದಿ ಪ್ರಶ್ನೆಗಳ ಬಗ್ಗೆ ಪ್ರಧಾನ ಮಂತ್ರಿಗಳಿಗೆ ಕೇರಳದ ಸರ್ವಪಕ್ಷಗಳ ನಿಯೋಗದಿಂದ ಮನವಿ ಸಲ್ಲಿಸಲು ಮಾರ್ಚ್ 20 ಅಥವ 21 ರಂದು ಸಮಯ ಕೇಳಲಾಗಿತ್ತು. ಆದರೆ ಪ್ರಧಾನಿಗಳ ಕಾರ್ಯ ಬಾಹುಳ್ಯದಿಂದಾಗಿ ಅವರನ್ನು ಭೇಟಿ ಮಾಡಲು ಸಾಧ್ಯವಿಲ್ಲ, ಬದಲಿಗೆ ಕೇಂದ್ರ ಗೃಹಮಂತ್ರಿಗಳು ಅಥವ ಹಣಕಾಸು ಮಂತ್ರಿಗಳನ್ನು ಭೇಟಿ ಮಾಡಿ ಎಂದು ಪ್ರಧಾನ ಮಂತ್ರಿಗಳ ಕಚೇರಿ(ಪಿಎಂಒ) ತಿಳಿಸಿತು.

ಇದನ್ನು ಕೇರಳ ವಿಧಾನ ಸಭೆಗೆ ಒಂದು ಹೇಳಿಕೆಯಲ್ಲಿ ತಿಳಿಸುತ್ತ ಮುಖ್ಯಮಂತ್ರಿಗಳು "ಪಿಎಂಒ ಈ ಉತ್ತರವನ್ನು ಪ್ರಧಾನ ಮಂತ್ರಿಗಳಿಗೆ ತಿಳಿದೇ ಕೊಟ್ಟಿರುತ್ತದೆ. ಈ ನಿಲುವು ಅತ್ಯಂತ ಖಂಡನಾರ್ಹ" ಎಂದರು.

ಇದು ಪ್ರಜಾಪ್ರಭುತ್ವ ಮತ್ತು ಒಕ್ಕೂಟತತ್ವದ ನೀತಿಗಳಿಗೆ ವಿರುದ್ಧವಾದದ್ದು. ಪಿಎಂಒ ಬೇ–ರೊಂದು ದಿನಾಂಕವನ್ನು ಕೂಡ ಸೂಚಿಸಲಿಲ್ಲ, ಬದಲಿಗೆ ಗೃಹಮಂತ್ರಿ ಅಥವ ಹಣಕಾಸು ಮಂತ್ರಿಗಳನ್ನು ಭೇಟಿ ಮಾಡಬೇಕು ಎಂದು ಬಯಸಿರುವುದರ ಹಿಂದಿರುವ ತರ್ಕ ಅರ್ಥವಾಗುತ್ತಿಲ್ಲ ಎಂದು ಪಿಣರಾಯಿ ವಿಜಯನ್ ಹೇಳಿದರು.

ಪ್ರತಿಪಕ್ಷದ ಮುಖಂಡ ರಮೇಶ್ ಚೆನ್ನಿತಾಲ ಪ್ರಧಾನ ಮಂತ್ರಿಗಳು ಸರ್ವಪಕ್ಷ ನಿಯೋಗವನ್ನು ಭೇಟಿ ಮಾಡಲು ನಿರಾಕರಿಸಿರುವುದು ಕೇರಳದ ಜನತೆಗೆ ಮಾಡಿರುವ ಅವಮಾನ, ಅವರು ಒಬ್ಬ ಸರ್ವಾಧಿಕಾರಶಾಹಿಯ ಹಾಗೆ ವರ್ತಿಸುತ್ತಿದ್ದಾರೆ ಎಂದರು.

ನಿರೀಕ್ಷಿಸಿದಂತೆ ಬಿಜೆಪಿ ಸದಸ್ಯ ಒ ರಾಜಗೋಪಾಲ್ ಪಿಎಂಒ ಉತ್ತರಕ್ಕೆ ಕೊಟ್ಟಿರುವ ವ್ಯಾಖ್ಯಾನ ಸರಿಯಲ್ಲ ಎಂದರು.


ವಿಧಾನಸಭಾಧ್ಯಕ್ಷ ಪಿ.ಶ್ರೀರಾಮಕೃಷ್ಣನ್ ಮೋದಿಯವರ ಈ ನಿಲುವು ನಾಚಿಕೆಗೇಡಿನದ್ದು, ಒಕ್ಕೂಟತತ್ವದ ಭಾವನೆಗೆ ವಿರುದ್ಧವಾದದ್ದು ಎಂದಿದ್ದಾರೆ.

ನವಜಾತ ಶಿಶುಗಳ ಮರಣದರದಲ್ಲಿ ಮುಂದುವರೆದ ದೇಶಗಳನ್ನೂ ಸರಿಗಟ್ಟಿದ ಕೇರಳ


2015–16ರ ರಾಷ್ಟ್ರೀಯ ಕುಟುಂಬ ಆರೋಗ್ಯ ಸರ್ವೆಯ ಪ್ರಕಾರ 1 ವರ್ಷ ತುಂಬದ ಮಕ್ಕಳ ಮರಣದರ, ಅಂದರೆ ಪ್ರತಿ 1000 ನವಜಾತ ಶಿಶುಗಳಲ್ಲಿ ಬದುಕುಳಿಯದ ಶಿಶುಗಳ ಸಂಖ್ಯೆ ಕೇರಳದಲ್ಲಿ 6ಕ್ಕೆ ಇಳಿದಿದೆ, ಅಖಿಲ ಭಾರತ ಮಟ್ಟದಲ್ಲಿ ಇದು 41. ಅಂದರೆ ಅದು ಕೇರಳದ ಮಟ್ಟಕ್ಕೆ ಇಳಿದರೆ ಪ್ರತಿವರ್ಷ ಸುಮಾರು ಏಳು ಲಕ್ಷ ಮಕ್ಕಳು ಬದುಕುಳಿಯುತ್ತವೆ. ಎಂದು ಲೆಕ್ಕ ಹಾಕಲಾಗಿದೆ.

ಕೇರಳದಲ್ಲಿ ಒಂದು ದಶಕದ ಹಿಂದೆ ಇದು 15 ಇತ್ತು ಎನ್ನಲಾಗಿದೆ. ಈಗ ಇದು ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತಿತರ ಮುಂದುವರೆದ ದೇಶಗಳನ್ನೂ ಸರಿಗಟ್ಟಿದೆ ಎಂದು ಟೈಮ್ಸ್ ನ್ಯೂಸ್ ನೆಟ್‌ವರ್ಕ್ ವರದಿ ಮಾಡಿದೆ.

ಕೆಲವು ವಿಶೇಷಜ್ಞರು ಈ ಸಂಖ್ಯೆಯ ಬಗ್ಗೆ ಸಂದೇಹ ವ್ಯಕ್ತಪಡಿಸಿದರೂ ವಿಶ್ವಸಂಸ್ಥೆ ನಿಗದಿಪಡಿಸಿದ ಸಹಸ್ರಮಾನದ ಗುರಿಗಳತ್ತ ಸಾಗುವಲ್ಲಿ ಕೇರಳ ದೇಶದಲ್ಲಿ ಎಲ್ಲಕ್ಕಿಂತ ಮುಂದಿದೆ ಎಂಬುದರಲ್ಲಿ ಸಂದೇಹವಿರಲಾರದು. ರಾಷ್ಟ್ರೀಯ ಸರ್ವೆಯ ಪ್ರಕಾರ ಕೇರಳದ ನಂತರ ಎರಡನೆಯ ಸ್ಥಾನದಲ್ಲಿರುವ ರಾಜ್ಯದ ಶಿಶು ಮರಣ ದರ 21.









ನಿಮ್ಮ ಪ್ರಶ್ನೆ – ನಮ್ಮ ಉತ್ತರ

ಕುಟುಂಬ ರಾಜಕಾರಣಕ್ಕೆ ಒಪ್ಪಿಗೆ ಏಕೆ ?

ಚುನಾವಣೆ ಬಂದಾಗ ಭಾರತದ ಮನಸ್ಸುಗಳು ವಂಶಪಾರಂಪರ್ಯದ ರಾಜಕಾರಣವನ್ನು ಒಪ್ಪಿಕೊಂಡಂತೆ ಕಾಣುತ್ತದೆ. ಸ್ವಲ್ಪ ಮಟ್ಟಿಗೆ ಅಲ್ಲಿ ಒಂದು ರೀತಿಯ 'ಕ್ರಾಶ್ ಲ್ಯಾಂಡಿಂಗ್' ಅಂತ ಅನಿಸಿದರೂ, ತಮಿಳುನಾಡು ಸಹ ಇದಕ್ಕೆ ಅಪವಾದ ಅಲ್ಲ. ಇದನ್ನು ನಾವು ಹೇಗೆ ನೋಡಬೇಕು?

ರಾಜಕೀಯದಲ್ಲಿ ವಂಶಪಾರಂಪರ್ಯದ ಲಕ್ಷಣ ಬೆಳೆಯುತ್ತಿದೆ. ಕಾಂಗ್ರೆಸ್ ಪಕ್ಷದಲ್ಲಿ ಮೊದಲು ನೆಹರು–ಗಾಂಧಿ ಕುಟುಂಬಕ್ಕೆ ಸೀಮಿತವಾಗಿತ್ತು. ಈಗ ಅದು ಹರಡಿ ಸರ್ವೇ ಸಾಮಾನ್ಯವಾಗಿದ್ದು ಅದರಲ್ಲೂ ಪ್ರಾದೇಶಿಕ ಪಕ್ಷಗಳಲ್ಲಿ ಬೆಳೆದಿದೆ.

ನಾವು ದೇಶದ ರಾಜಕೀಯ ನಕ್ಷೆಯನ್ನು ನೋಡಿದಾಗ ಕುಟುಂಬ/ವಂಶಪಾರಂಪರ್ಯದ ನಾಯಕತ್ವ ಉತ್ತರ ಪ್ರದೇಶ, ಪಂಜಾಬ್, ಬಿಹಾರ್, ಒಡಿಶಾ, ತಮಿಳುನಾಡು ಮತ್ತು ಉಳಿದ ರಾಜ್ಯಗಳಲ್ಲಿ ಇರುವುದು ಕಾಣುತ್ತದೆ. ಪಂಜಾಬ್ ನಲ್ಲಿ ಅಕಾಲಿದಳದ ಮುಖ್ಯಮಂತ್ರಿ ಮತ್ತು ಉಪಮುಖ್ಯ ಮಂತ್ರಿ ತಂದೆ ಮತ್ತು ಮಗ ಆಗಿದ್ದು ಅವರು ಪಕ್ಷದ ನಾಯಕರು ಆಗಿರುತ್ತಾರೆ. ಉತ್ತರ ಪ್ರದೇಶ ಮತ್ತು ಒಡಿಶಾಗಳಲ್ಲಿ ಈಗಿನ ಮುಖ್ಯಮಂತ್ರಿಗಳು ಮಾಜಿ ಮುಖ್ಯಮಂತ್ರಿಗಳು ಮತ್ತು ಪಕ್ಷದ ಸ್ಥಾಪಕರ ಪುತ್ರರು. ಬಿಹಾರದಲ್ಲಿ ಕುಟುಂಬ ರಾಜಕಾರಣ ರಾಷ್ಟ್ರೀಯ ಜನತಾ ದಳದ ಗುಣವಾಗಿದೆ.

ತಮಿಳುನಾಡಿನಲ್ಲಿ ಡಿ.ಎಂ.ಕೆ. ಮುಖ್ಯಸ್ಥ ಎಂ. ಕರುಣಾನಿಧಿ ಅವರ ನಂತರ ಅವರ ಪುತ್ರ ಎಂ.ಕೆ ಸ್ಟಾಲಿನ್ ಉತ್ತರಾಧಿಕಾರಿ ಆಗಿದ್ದಾರೆ. ಎ.ಐ.ಡಿ.ಎಂ. ಕೆ.ಯಲ್ಲಿ ಜಯಲಲಿತಾ ರವರು ನಿಧನದ ನಂತರ ಅಧಿಕಾರ ಸಂಘರ್ಷ ನಡೆದು ಕೆ. ಶಶಿಕಲ ಅವರ ಕೈಗೆ ಅಧಿಕಾರ ಬಂದಿದೆ. ಅವರು ರಕ್ತ ಸಂಬಂಧಿಯಲ್ಲದಿದ್ದರೂ ಅವರನ್ನು 'ಬಾಡಿಗೆ' ಕುಟುಂಬದ ಸದಸ್ಯರೆಂದೇ ಪರಿಗಣಿಸಬಹುದು.

ಕುಟುಂಬ ರಾಜಕಾರಣದ ಬೆಳವಣಿಗೆಗೆ ಎರಡು ಕಾರಣಗಳು ಮುಖ್ಯವಾಗಿರುತ್ತದೆ. ಮೊದಲನೇಯದಾಗಿ ಬಹುತೇಕ ಪಕ್ಷಗಳು ಒಬ್ಬ ನಾಯಕನ ಸುತ್ತಾ ಗಿರಕಿ ಹೊಡೆಯುತ್ತಿರುತ್ತದೆ. ನಾಯಕ ಕೇಂದ್ರಿಕೃತವಾದ ಕಾರಣ ಯಾವುದೇ ಸ್ಥಿರವಾದ ಸಿದ್ಧಾಂತಕ್ಕೆ ಅಥವಾ ಕಾರ್ಯಕ್ರಮಕ್ಕೆ ಬದ್ಧವಾಗಿರುವುದಿಲ್ಲ. ನಾಯಕರ ಒಂದು ತಂಡವೂ ಇರುವುದಿಲ್ಲ. ಅಂತಹ ಸಂದರ್ಭಗಳಲ್ಲಿ ನಾಯಕತ್ವ ಮಗ, ಮಗಳು ಅಥವಾ ಗಂಡ/ಹೆಂಡತಿಗೆ ದೊರೆಯುತ್ತದೆ. ಕುಟುಂಬ ಅಧಿಪತ್ಯದ ಬೆಳವಣಿಗೆಗೆ ಕಾರಣ.

ಎರಡನೇಯ ಅಂಶ ರಾಜಕೀಯ ಮತ್ತು ವ್ಯಾಪಾರದ ಕೊಂಡಿ. ಸರಕಾರದಲ್ಲಿರುವುದರಿಂದ ನಾಯಕರು ಮತ್ತು ಅವರ ಕುಟುಂಬ ಶ್ರೀಮಂತರಾಗುವುದರ ಜತೆಯಲ್ಲೇ ಸಂಪತ್ತನ್ನು ಮತ್ತು ವ್ಯಾಪಾರ ವ್ಯವಹಾರಗಳನ್ನು ನಿಯಂತ್ರಣಕ್ಕೆ ತೆಗೆದುಕೊಂಡರು. ಈ ರೀತಿ ಕೂಡಿಹಾಕಿದ ಸಂಪತ್ತು ವ್ಯಾಪಾರ–ವಹಿವಾಟೇ ಪಕ್ಷದ ನಾಯಕತ್ವವನ್ನು ಕುಟುಂಬದೊಳಗೇ ಇಟ್ಟುಕೊಳ್ಳುವುದಕ್ಕೆ ಪ್ರೇರಕವಾಗುತ್ತದೆ. ಉದಾಹರಣೆಗೆ ಪಂಜಾಬ್‌ನಲ್ಲಿ ಬಾದಲ್ ಕುಟುಂಬದ ಹಿಡಿತ ಅನೇಕ ವ್ಯಾಪಾರದಲ್ಲಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ವ್ಯಾಪಾರ ವಹಿವಾಟಿನ ರಕ್ಷಣೆ ಮತ್ತು ಬೆಳವಣಿಗೆ ನಾಯಕತ್ವದ ಗುರಿಯ ಪ್ರಮುಖ ಪಾತ್ರವಾಗುತ್ತದೆ.

ನವ–ಉದಾರೀಕರಣದ ಪರ್ವದಲ್ಲಿ, ಸಾರ್ವಜನಿಕ ಮತ್ತು ವೈಯಕ್ತಿಕ ಹಿತಾಸಕ್ತಿಗಳು ಹಾಗೂ ರಾಜಕೀಯ ಮತ್ತು ವಹಿವಾಟಿನ ವಲಯಗಳು ವಿಲೀನಗೊಂಡು, ಕುಟುಂಬ/ವಂಶಪಾರಂಪರ್ಯದ ಆಳ್ವಿಕೆಗೆ ನಾಂದಿಯಾಗಿದೆ. ಈ ಮೂಲತಃ ಪ್ರಜಾಪ್ರಭುತ್ವ–ವಿರೋಧಿ ವಿದ್ಯಮಾನದಲ್ಲಿ ಹಿಂದಿನ ಪಾಳೆಯಗಾರಿ ಮೌಲ್ಯಗಳಾದ ಪಾಳೆಯಗಾರಿಕೆ ಮತ್ತು ವಿಧೇಯತೆ ಮುಳುಗಿ ಹೋಗುತ್ತವೆ.

ಜಾತಿ ಮತ್ತು ಕುಲಗಳ ಹಿಡಿತದಲ್ಲಿರುವ ಸಮಾಜದಲ್ಲಿ ಇಂತಹ ಬೆಳವಣಿಗೆಯನ್ನು ಅನೇಕರು ಇದು ಸಹಜವಾದ ರಾಜಕೀಯ ಬೆಳವಣಿಗೆ ಎಂದೇ ಪರಿಗಣಿಸುತ್ತಾರೆ. ■

ಶಿಸ್ತಿನ ಸಿಪಾಯಿ ಓವಿಕೆ ಇನ್ನಿಲ್ಲ

ಶಿಸ್ತಿಗೆ ಹೆಸರಾಗಿದ್ದ ಸಿಪಿಐಎಂ ಬೆಂಗಳೂರು ಜಿಲ್ಲಾ ಸಮಿತಿ ಸದಸ್ಯರಾಗಿ, ಕಾರ್ಮಿಕ ಮುಖಂಡರಾಗಿ ದಶಕಗಳ ಕಾಲ ನಿಷ್ಠೆಯಿಂದ ದುಡಿದ ಓವಿ ಕೃಷ್ಣಮೂರ್ತಿ ನಿಧನರಾಗಿದ್ದಾರೆ. ಅವರಿಗೆ 67 ವರ್ಷ ವಯಸ್ಸಾಗಿತ್ತು. ಅವರು ಪತ್ನಿ, ಇಬ್ಬರು ಹೆಣ್ಣು ಮಕ್ಕಳನ್ನು ಅಗಲಿದ್ದಾರೆ. ಇವರು ಕರ್ನಾಟಕದಲ್ಲಿ ಧೀರ್ಘ ಕಾಲ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಯಾಗಿದ್ದ ಪಿ.ರಾಮಚಂದ್ರರಾವ್ ಅವರ ಅಳಿಯ. ಇತ್ತೀಚಿಗೆ ಅವರು ಸಿಪಿಐ(ಎಂ) ಬೆಂಗಳೂರು ಉತ್ತರ ಜಿಲ್ಲಾ ಸಮಿತಿ ಕಛೇರಿಯಲ್ಲಿ ಕಛೇರಿ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಇವರ ಈ ಹಠಾತ್ ನಿಧನಕ್ಕೆ ಸಿಪಿಐ(ಎಂ) ರಾಜ್ಯ ಸಮಿತಿ ಮತ್ತು ಬೆಂಗಳೂರು ಜಿಲ್ಲಾ ಸಮಿತಿಗಳು ತೀವ್ರ ಸಂತಾಪ ವ್ಯಕ್ತಪಡಿಸಿವೆ.

ಮೃತರಾಗುವ ಒಂದೆರಡು ದಿನಗಳ ಹಿಂದೆ ಜ್ವರ ಇದೆ ಎಂದು ಕಛೇರಿಗೆ ಬಾರದಿದ್ದಾಗ ಅವರ ಮನೆಗೆ ಕರೆ ಮಾಡಿ ವಿಚಾರಿಸಿದಾಗಲೇ ಅವರ ಸಾವಿನ ಸುದ್ದಿ ತಲುಪಿದೆ. ಕಾಮ್ರೇಡ್ ಓವಿಕೆ ಶಿಸ್ತಿಗೆ ಹೆಸರಾದ ಸಂಗಾತಿ. ತನಗಿಂತ ಚಿಕ್ಕವರನ್ನೂ ಅತ್ಯಂತ ಆತ್ಮೀಯತೆಯಿಂದ, ಗೌರವದಿಂದ ಮಾತನಾಡಿಸುತ್ತಿದ್ದ ಸಂಗಾತಿ ಇನ್ನಿಲ್ಲ ಎನ್ನುವುದನ್ನು ಅವರನ್ನು ಹತ್ತಿರದಿಂದ ಬಲ್ಲವರಿಗೆ ಅರಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ.

ಕಾಮ್ರೇಡ್ ಓವಿಕೆ ಹುಟ್ಟಿದ್ದು, ಬೆಳೆದದ್ದು, ವಿದ್ಯಾಭ್ಯಾಸ ಎಲ್ಲವೂ ಬೆಂಗಳೂರಿನಲ್ಲೇ. 1974ರಲ್ಲಿ ರಾವ್ ಇನ್ಸುಲೇಟಿಂಗ್ ಕಂಪನಿಯಲ್ಲಿ ಉದ್ಯೋಗಕ್ಕೆ ಸೇರಿದ ಇವರು ಅಲ್ಲಿ ಸಿಐಟಿಯು ಕಾರ್ಮಿಕ ಸಂಘಕ್ಕೆ ಸೇರಿ ಸಂಘದ ಪದಾಧಿಕಾರಿಯಾಗಿ ಅನೇಕ ವರ್ಷಗಳ ದುಡಿದ ಇವರು ಹಿರಿಯ ಕಾರ್ಮಿಕ ಮುಖಂಡ ಕಾಮ್ರೇಡ್ ಸೂರಿಯವರ ಮೂಲಕ ಸಿಪಿಐ(ಎಂ) ಪಕ್ಷವನ್ನು ಸೇರಿದರು.

ನಂತರ ಇವರು ಕಂಪನಿಯಿಂದ ಸ್ವಯಂ ನಿವೃತ್ತಿ ಪಡೆದ ಇವರು ಪಕ್ಷದ ಪೂರ್ಣಾವಧಿ ಕಾರ್ಯಕರ್ತರಾಗಿ ಸೇರಿದರು. 9187ರಲ್ಲಿ ಆಗ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಯಾಗಿದ್ದ ಪಿ.ರಾಮಚಂದ್ರರಾವ್ ಮಗಳು ಸಂಧ್ಯಾ ಅವರನ್ನು ವರಿಸಿದರು.

ಅಂದಿನ ಕಾಲದಲ್ಲಿ ಪೂರ್ಣಾವಧಿ ಕಾರ್ಯಕರ್ತರಿಗೆ ತೀರ ಕಡಿಮೆ ಸಂಭಾವನೆ ನೀಡಲಾಗುತ್ತಿತ್ತು. ಅದು ಕೂಡ ಸರಿಯಾದ ಸಮಯಕ್ಕೆ ಸಿಗುತ್ತಿರಲಿಲ್ಲ. ಅಂತಹ ಕಷ್ಟದ ಪರಿಸ್ಥಿತಿಯಲ್ಲೂ ಬದ್ಧತೆಯಿಂದ ಪಕ್ಷದ ನಿಷಾವಂತ ಕಾರ್ಯಕರ್ತನಾಗಿ ಮುಂದುವರಿದರು. ಅನೇಕ ವರ್ಷಗಳ ಕಾರ್ಮಿಕ ಚಳುವಳಿಯಲ್ಲಿ ಸಕ್ರಿಯಾರಾಗಿದ್ದ ಇವರು ಇತ್ತಿಚಿಗೆ ಸಿಪಿಐ(ಎಂ) ಪಕ್ಷದ ಕಛೇರಿ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಎಲ್ಲರ ಪ್ರೀತಿ–ಗೌರವಕ್ಕೆ ಪಾತ್ರರಾಗಿದ್ದ ಓವಿಕೆಯವರ ಈ ಅಕಾಲಿಕ ಸಾವು ಕಮ್ಯುನಿಷ್ಟ್ ಚಳುವಳಿಗೆ ಹಾಗು ಕಾರ್ಮಿಕ ಚಳುವಳಿಗೆ ತುಂಬಲಾರದ ನಷ್ಟ. ಲಾಲ್ ಸಲಾಂ ಕಾಮ್ರೇಡ್ ಓವಿಕೆ... ■

ಜಿ.ಎಸ್.ಟಿ: ಒಕ್ಕೂಟ ತತ್ವಕ್ಕೆ ದಕ್ಕೆ?...... ಪುಟ 6 ರಿಂದ

ಬೀಳುತ್ತಿದೆ.

ಜಿ.ಎಸ್.ಟಿ ಒಂದು ಪ್ರತಿಗಾಮಿ ತೆರಿಗೆ ವ್ಯವಸ್ಥೆ

ಜಿ.ಎಸ್.ಟಿ ಅನ್ನುವುದು ಅಪ್ರತ್ಯಕ್ಷ ತೆರಿಗೆ. ತೆರಿಗೆ ತತ್ವದಲ್ಲಿ ಪ್ರತಿಪಾದನೆಯಾಗುತ್ತಿರುವಂತೆ ನೇರ ತೆರಿಗೆಗಳು ಉಳ್ಳವರ ಮೇಲೆ ವಿಧಿಸಲಾಗುತ್ತದೆ. ವರಮಾನ, ಸಂಪತ್ತು, ಬಂಡವಾಳ ಮುಂತಾದವುಗಳ ಮೇಲಿನ ತೆರಿಗೆಗಳು ನೇರ ತೆರಿಗೆಗಳು. ಆದರೆ ಅಪ್ರತ್ಯಕ್ಷ ತೆರಿಗೆಗಳೇನಿವೆ, ಅವು ಅನುಭೋಗಿಗಳ ಮೇಲೆ ವಿಧಿಸುವ ತೆರಿಗೆಗಳು. ಅರ್ಥಶಾಸ್ತ್ರದ ನಿಯಮದ ಪ್ರಕಾರ ಕೆಳ ವರಮಾನದ ಕುಟುಂಬಗಳು ತಮ್ಮ ಒಟ್ಟು ವರಮಾನದಲ್ಲಿ ಹೆಚ್ಚು ಭಾಗವನ್ನು ಅನುಭೋಗಿ ಸರಕು–ಸೇವೆಗಳ ಮೇಲೆ ವ್ಯಯಿಸುತ್ತವೆ. ಈ ಎಲ್ಲ ಖರ್ಚು–ವೆಚ್ಚಗಳ ಮೇಲೆ ಜಿ.ಎಸ್.ಟಿ ವಿಧಿಸಲಾಗುತ್ತದೆ. ನೇರ ತೆರಿಗೆ ಮೊತ್ತವು 2011–12ರಲ್ಲಿ ಜಿಡಿಪಿಯ ಶೇ. 1.88ರಷ್ಟಿದ್ದುದು 2017–18ರಲ್ಲಿ ಶೇ. 2.62ಕ್ಕೇರಿದೆ. ಆದರೆ ಇದೇ ಅವಧಿಯಲ್ಲಿ ಜಿಡಿಪಿಯಲ್ಲಿ ಅಪ್ರತ್ಯಕ್ಷ ತೆರಿಗೆಗಳ ಪಾಲು ಶೇ.4.49ರಿಂದ ಶೇ. 5.50ಕ್ಕೇರಿದೆ. ಈ ಎಲ್ಲ ಕಾರಣಗಳಿಂದ ಅಪ್ರತ್ಯಕ್ಷ ತೆರಿಗೆಗಳನ್ನು ಪ್ರತಿಗಾಮಿ ತೆರಿಗೆಗಳು ಎಂದು ಕರೆಯಲಾಗುತ್ತದೆ. ಜಿ.ಎಸ್.ಟಿಯಿಂದಾಗಿ ತೆರಿಗೆ ಮೊತ್ತ ಅಧಿಕವಾಗುತ್ತದೆ ಎಂದು ಹೇಳಲಾಗುತ್ತದೆ. ಅಂದರೆ ಈ ತೆರಿಗೆಗಳ ಭಾರ ಸಾಮಾನ್ಯ ಅನುಭೋಗಿಗಳ ಮೇಲೆ ಬೀಳುತ್ತದೆ. ಬಂಡವಾಳ ಹೂಡಿಕೆಗೆ, ವಿದೇಶಿ ನೇರ ಬಂಡವಾಳದ ಪ್ರವೇಶಕ್ಕೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ತೆರಿಗೆಗಳಲ್ಲಿ ಅನೇಕ ಬಗೆಯ ರಿಯಾಯಿತಿ, ವಿನಾಯಿತಿ, ನೀಡಲಾಗುತ್ತದೆ ಮತ್ತು ಉದ್ದಿಮೆಗಳಿಗೆ ಸಂಬಂಧಿಸಿದ ತೆರಿಗೆ ದರಗಳನ್ನು ಕೆಳಮಟ್ಟದಲ್ಲಿಟ್ಟುಕೊಳ್ಳಲಾಗುತ್ತದೆ.

ಒಟ್ಟಾರೆ ಜಿ.ಎಸ್.ಟಿ ಅನ್ನುವುದು ಸರ್ಕಾರ ಮತ್ತು ಉದ್ದಿಮೆ ವಲಯಗಳು ವರ್ಣಿಸುತ್ತಿರುವಂತೆ ಸದ್ಗುಣಗಳ ಆಗರವೇನಲ್ಲ. ಈ ತೆರಿಗೆ ಕ್ರಮದಿಂದ ರಾಜ್ಯಗಳಿಗೆ ಉಂಟಾಗಬಹುದಾದ ಹಣದ ನಷ್ಟವನ್ನು ಯಾರಾದರೂ ತುಂಬಿ ಕೊಡಬಹುದು. ಆದರೆ ಇದರಿಂದ ರಾಜ್ಯಗಳ ಸ್ವಾಯತ್ತತ್ತೆಗೆ, ನಮ್ಮ ಸಂವಿಧಾನಾತ್ಮಕ ಒಕ್ಕೂಟ ವ್ಯವಸ್ಥೆಗೆ ಹಾಗೂ ವಿಕೇಂದ್ರೀಕರಣ ತತ್ವಕ್ಕೆ ಉಂಟಾಗುವ ಅಪಾಯವನ್ನು ತುಂಬಿ ಕೊಡುವುದು ಸಾಧ್ಯವಿಲ್ಲ. ಈ ಬಗ್ಗೆ ನಾವು ಚಿಂತಿಸಬೇಕಾಗಿದೆ. ■

ಜನವಿರೋದಿ ಬ್ಯಾಂಕ್ ನೀತಿಗಳನ್ನು ಹಿಂಪಡೆಯಲು ಒತ್ತಾಯಿಸಿ ನಗರದ SBI ಬ್ಯಾಂಕ್ ಮುಂದೆ ಸಿ ಐ ಟಿ ಯು ಪ್ರತಿಭಟನೆ. ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷರಾದಂತ ಸೈಯದ್ ಮುಜೀಬ್ ಕಾರ್ಯದರ್ಶಿ ಎನ್ ಕೆ ಸುಭ್ರಮಣ್ಯ ಬಿ ಉಮೇಶ್ ಲೋಕೇಶ್ ರಾಮಚಂದ್ರಪ್ಪ ಶ್ರೀದರ್ ಮುಂತಾದವರು ಪ್ರತಿಭಟನೆ ನೇತೃತ್ವ ವಹಿಸಿದರು.



JANASHAKTHI KANNADA VARA PATRIKE Mar 13-19, 2017 Price : Rs. 10/- Date of Publication : 10 March 2017 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ವಿಶ್ವ ಮಹಿಳಾ ದಿನಾಚರಣೆಗಳು



ಬೆಳ್ತಂಗಡಿ : ಮಹಿಳಾ ಐಕ್ಯ ಶಕ್ತಿಯಿಂದ ಸಮಾನತಾ ಸಮಾಜ ಕಟ್ಟಲು ಸಾಧ್ಯ. ಮಹಿಳಾ ದೌರ್ಜನ್ಯ, ಅಸಮಾನತೆ, ಶೋಷಣೆಯ ವಿರುದ್ದ ಮಹಿಳೆಯರ ಒಕ್ಕೊರಲ ಸ್ವರ ಮೊಳಗಲು ವಿಶ್ವಮಹಿಳಾ ದಿನಾಚರಣೆ ಪ್ರೇರಣೆ ನೀಡಲಿ ಎಂದು ಸರಕಾರಿ ಪದವಿ ಪೂರ್ವಕಾಲೇಜು ನಡದ ಪ್ರಭಾರ ಪ್ರಾಂಶುಪಾಲರಾದ ಶ್ರೀಮತಿ ಲಿಲ್ಲಿ ಅವರು ಹೇಳಿದರು.

ಅವರು ಬೆಳ್ತಂಗಡಿ ಅಂಬೇಡ್ಕರ್ ಭವನದಲ್ಲಿ ಜನವಾದಿ ಮಹಿಳಾ ಸಂಘಟನೆ ಬೆಳ್ತಂಗಡಿ ತಾಲೂಕು ಸಮಿತಿ ನೇತೃತ್ವದಲ್ಲಿ ವಿಶ್ವ ಮಹಿಳಾ ದಿನಾಚರಣೆ-ಯ ಅಂಗವಾಗಿ ನಡೆದ ಸಭೆಯನ್ನು ಉದ್ಘಾಟಿಸಿ ಮಾತಾಡುತ್ತಿದ್ದರು. ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತಾಡಿದ ಜೆ.ಎಂ.ಎಸ್ ದ.ಕ.ಜಿಲ್ಲಾ ಸಮಿತಿ ಅದ್ಯಕ್ಷೆ ಶ್ರೀಮತಿ ಜಯಂತಿ ಬಿ.ಶೆಟ್ಟಿ ಅವರು ಮಾತಾಡುತ್ತಾ ಮಹಿಳಾ ದೌರ್ಜನ್ಯ, ಶೋಷಣೆ ವಿರುದ್ದ ಹೋರಾಡುತ್ತಾ ಬಂದ ಜೆ.ಎಂ.ಎಸ್. ಇಂದು ಮಹಿಳೆಯರ ಪಾಲಿನ ಆಶಾ ಕಿರಣವಾಗಿದೆ. ವ`ಂ ಹಿ ಳ` ೦ಂ`ಂಾ ಗಿ ಅನುಭವಿಸುವ ಶೋಷಣೆ ಅನ್ಯಾಯದ ವಿರುದ್ದ ನಮ್ಮ ಐಕ್ಯ ಸ್ವರ ಮೊಳಗಿಸಿ ಸಮತಾ ಸಮಾಜದ ನಿರ್ಮಾಣಕ್ಕೆ ಮುಂದಾಗೋಣ ಎಂದರು. ಮಾಜಿ ಪಂಚಾಯತು ಸದಸ್ಯೆ, ಬೆಳ್ತಂಗಡಿ ತಾಲೂಕು ಬೀಡಿ ಕೆಲಸಗಾರರ ಸಂಘದ ಕಾರ್ಯದರ್ಶಿ ಶ್ರೀಮತಿ ದೇವಕಿ ಮಾತಾಡಿದರು.

ಅದ್ಯಕ್ಷತೆ ವಹಿಸಿ ಮಾತಾಡಿದ ಶ್ರೀಮತಿ ಕಿರಣಪ್ರಭಾ ಅವರು ಮಹಿಳೆಯ ಸಮಾನತಾ ಹೋರಾಟ ನಡೆಸಿದ ವಿಶ್ವ ನಾಯಕಿ ಕ್ಲಾರಾ, ಮಹಿಳಾ ವಿಮೋಚನೆಗಾಗಿ ಹೋರಾಡಿದ ಗೋದಾವರಿ ಪರುಳೇಕರ್, ಅಹಲ್ಯಾ ರಂಗ್ಣೇಕರ್, ಲಕ್ಷ್ಮೀ ಸಹಗಲ್, ವಿಮಲಾ ರಣದೀವೆ, ಮದರ್ ತೆರೆಸಾ, ಮೊದಲಾದವರು ನಮಗೆ ಮುನ್ನಡೆಯುವ ದಾರಿ ತೋರಿಸಿದ್ದಾರೆ. ಈ ಅಸಮಾನತಾ ಸಮಾಜವನ್ನು ಬದಲಾಯಿಸಿ ನವ ಸಮಾಜದ ನಿರ್ಮಾಣಕ್ಕಾಗಿ ಹೊರಾಡಲು ಮಹಿಳಾ ಶಕ್ತಿಯನ್ನು ಬಲಪಡಿಸೋಣ ಎಂದರು.

ಹಾವೇರಿ : ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಹಾವೇರಿ ಜಿಲ್ಲಾ ಸಮಿತಿ ಹಾಗೂ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಸಂಯುಕ್ತಾಶ್ರದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ನಡೆಸಿದ ಕಾರ್ಯಕ್ರಮದಲ್ಲಿ ಉದ್ಘಾಟಕರಾಗಿ ಬಾಗವಹಿಸಿದ್ದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶಶಿಕಲಾ ಹುಡೇದರವರು ಮಾತನಾಡಿ, ಮಹಿಳಾ ದಿನಾಚರಣೆ ಎಂದರೆ ಎಲ್ಲ ಹಬ್ಬಗಳಂತೆ ಮಾಡಿ ಮುಗಿಸುವುದಲ್ಲ ಇದು ಮಹಿಳೆಯ ಹಕ್ಕಿಗಾಗಿ, ಬೇಡಿಕೆಗಳ ಈಡೇರಿ-ಕೆಗಾಗಿ ಹೋರಾಡಿದ ದಿನ. ಇದು ಕೇವಲ ಒಂದು ದಿನದ ಕಾರ್ಯಕ್ರಮವಾಗಿರದೆ ಸಮಾಜದಲ್ಲಿ ಮಹಿಳಾ ಮೀಸಲಾತಿಗೆ, ಸಮಾನತೆಗಾಗಿ ಪ್ರತಿ ಮನೆಯಿಂದ ಬದಲಾವಣೆಯ ಕ್ರಾಂತಿ ಆಗಬೇಕು ಎಂದರು. ಸ್ತ್ರೀವಾದ ಎಂದರೆ ಪುರುಷ ವಿರೋಧಿಯಲ್ಲ ಮಹಿಳೆಯರ ಹಕ್ಕುಗಳಿಗಾಗಿ, ಬೇಡಿಕೆಗಳ ಈಡೇರಿಕೆಗಾಗಿ ನಡೆಸುವ ಹೋರಾಟವೇ ಸ್ತ್ರೀವಾದ, ಎಲ್ಲ ಪುರುಷರು ಮಹಿಳೆಯ ಮೇಲೆ ದೌರ್ಜನ್ಯ ನಡೆಸುವುದಿಲ್ಲ, ಮಹಿಳೆಯ ಮೇಲೆ ದೌರ್ಜನ್ಯ ಎಸಗುತ್ತಿರುವ ಪುರುಷ ಪ್ರಧಾನ ಮೌಲ್ಯಗಳನ್ನು ಕಿತ್ತೆಸೆಯಬೇಕಿದೆ. ಎಲ್ಲರಂತೆ ಬದುಕುವ ಸಮಸಮಾಜ ಹಕ್ಕುಗಳು ಸಿಗಲಿ ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಡಾ॥ ವನೀತಾ ಗಡ ಮಾತನಾಡಿ ಮಹಿಳಾ ದಿನಾಚರಣೆಯ ಇತಿಹಾಸವನ್ನು ಮತ್ತೊಮ್ಮೆ ನಾವೆಲ್ಲರು ನೊಡಬೇಕು, ಸಮಾಜವಾದಿ ಕ್ರಾಂತಿಯಲ್ಲಿ ಭಾಗವಹಿಸಿದ್ದ ಮಹಿಳಾ ಕಾರ್ಮಿಕರು ಮಾರ್ಚ 8ನ್ನು ದುಡಿಯುವ ವರ್ಗದ ಮಹಿಳಾ ದಿನಾಚರಣೆಯನ್ನಾಗಿ ಆಚರಿಸುವ ನಿರ್ಣಯವನ್ನು ಕೈಗೊಂಡರು. ಇಂದು ವಿಶ್ವದಾದ್ಯಂತ ವಿಶ್ವ ಮಹಿಳಾ ದಿನಾಚರಣೆ ನ ಡೆ-ಯುತ್ತಿದೆ. ಅಂದು ಮಹಿಳಾ ಕಾರ್ಮಿಕರು ತಮ್ಮ ಹಕ್ಕುಗಳಿಗಾಗಿ ನಡೆಸಿದ ಹೋರಾಟವನ್ನು ನೆನೆದರು.

ಕಾರ್ಯಕ್ರಮದಲ್ಲಿ ಎಸ್‌ಎಫ್‌ಐ ಜಿಲ್ಲಾ ಅಧ್ಯಕ್ಷರಾದ ಸುಬಾಸ ಎಂ, ಕಾಲೇಜು ವಿದ್ಯಾರ್ಥಿನಿಯರಾದ ಸ್ನೇಹಾ ಶೇತ್, ಸವಿತಾ ಶಿರೂರ, ಉಪನ್ಯಾಸಕ ಕಾಂತೇಶ ಮಾತನಾಡಿದರು.



ಸಹೋದರ ಮುರಳಿ ಸಾವಿನ ತನಿಖೆಗೆ ಒತ್ತಾಯಿಸಿ DHS - SFI ಪ್ರತಿಭಟನೆ




ಗುಡಿಬಂಡೆ ಪಟ್ಟಣದಲ್ಲಿ ದಲಿತ ವಿದ್ಯಾರ್ಥಿ ಮುರುಳಿ ಯ ದಾರುಣ ಕೊಲೆ ಪ್ರಕರಣವನ್ನು ಮರು ತನಿಖೆಗೆ ಒತ್ತಾಯಿಸಿ ಹಾಗೂ ಜಾತಿ ತಾರತಮ್ಯ, ದಲಿತರ ಮೇಲಿನ ದೌರ್ಜನ್ಯಗಳನ್ನು ತಡೆಯಲು ಇಂದು ಚಿಕ್ಕಬಳ್ಳಾಪುರದಲ್ಲಿ ದಲಿತ ಹಕ್ಕುಗಳ ಸಮಿತಿ(DHS) ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.

ದಲಿತ ಹಕ್ಕುಗಳ ಸಮಿತಿಯ ರಾಜ್ಯ ಸಂಚಾಲಕರಾದ ಗೊಪಾಲಕೃಷ್ಣ ಅರಲಹಳ್ಳಿ, ಜಿಲ್ಲಾ ಸಂಚಾಲಕರಾದ ಕೆ. ನಾಗರಾಜ್, ಸಿಪಿಎಂ ಜಿಲ್ಲಾ ಕಾರ್ಯದರ್ಶಿ ಎಂ.ಪಿ ಮುನಿವೆಂಕಟಪ್ಪ, ಎಸ್‌ಎಫ್‌ಐ ರಾಜ್ಯಾಧ್ಯಕ್ಷ ವಿ.ಅಂಬರೀಷ್ ಚಿಂತಕರಾದ ಡಾ. ಅನಿಲ್ ಕುಮಾರ್ ಮುಂತಾದವರು ಭಾಗವಹಿಸಿದ್ದರು.



ತುಮಕೂರಿನ ಜಿಲ್ಲಾ ಪೌರಕಾರ್ಮಿಕರ ಸಂಘ #CITU ಬೆಂಗಳೂರಿನ ಸಿ ವಿ ರಾಮನ್ ನಗರದಲ್ಲಿ ಮ್ಯಾನ್ ಹೋಲ್ ಗುಂಡಿ ಸ್ವಚ್ಚ ಮಾಡಲು ಹೋಗಿ ಕಾರ್ಮಿಕರು ಮೃತ ಪಟ್ಟಿರುವುದನ್ನು ಖಂಡಿಸಿ ತಲಾ 25 ಲಕ್ಷ ಪರಿಹಾರ ನೀಡಬೆಕೆಂದು ನಗರದ ಟೌನ್ ಹಾಲ್ ವೃತ್ತದಲ್ಲಿ ಪ್ರತಿಭಟನೆ ನೆಡೆಸಲಾಯಿತು. ಹೋರಾಟದಲ್ಲಿ ಸಂಘದ ಅಧ್ಯಕ್ಷರಾದ ಕಾಂ:ಮುಜೀಬ್ ಎನ್ ಕೆ ಸುಭ್ರಮಣ್ಯ ಜೂನಿ ರಾಮಕೃಷ್ಣಪ್ಪ ಗೋವಿಂದರಾಜು ರಾಮಕ್ಕ ಮುಂತಾದವರು ಪ್ರತಿಭಟನಾ ನೇತೃತ್ವ ವಹಿಸಿದ್ದರು. ತುಮಕೂರು ಜಿಲ್ಲಾ ಪೌರಕಾರ್ಮಿಕರ ಸಂಘ.





ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ರಾಜ್ಯ ಮಟ್ಟದ ಮಹಿಳಾ ಸಮಾವೇಶ ಮಂಡ್ಯದಲ್ಲಿ ನಡೆಯಿತು.

JANASHAKTHIKANNADAVARAPATRIKE: Printed, Published by **G.V.SRIRAMAREDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**